ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 3 ಸಂಚಿಕೆ 5

ಫೆಬ್ರವರಿ 01, 2009


ರೂ. 5/-




ವಿವೇಕಾನಂದರ ವಾರಸುದಾರರು ಯಾರು?



ಬರಾಕ್ ಒಬಾಮಾ : ಹೆಗಲ ಮೇಲೆ ಹಲವು ಪ್ರಶ್ನೆಗಳು



ಸದನ - ಹುಸಿ ಕದನ



ಇ.ಬಾಲಾನಂದನ್ ಅಗಲಿದ ಮಹಾ ಕ್ರಾಂತಿಕಾರಿ

CET ಸೀಟು ಹಂಚಿಕೆ : ಹಣ ಲೂಟಿಗೆ ಅವಕಾಶ

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಕಳೆದ ವಾರದಿಂದ

ನಾನು ಇ. ಎಂ. ಎಸ್. ನಂಬೂದಿರಿಪಾಡ್ ಅವರ ಮಾತುಗಳನ್ನು ಉದ್ಧರಿಸಲು ಬಯಸುತ್ತೇನೆ:-

"ನನಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಒಮ್ಮೆ ಚರ್ಚೆಯಲ್ಲಿ ಘೋರ ಕಮ್ಯುನಿಸ್ಟ್ ವಿರೋಧಿಯೊಬ್ಬ ಕಮ್ಯುನಿಸ್ಟರು ಒಂದು ಕೈಯಲ್ಲಿ 'ಕೆಪಿಟಲ್' ಅನ್ನೂ ಇನ್ನೊಂದು ಕೈಯಲ್ಲಿ ಋಗ್ವೇದವನ್ನೂ ಹಿಡಿದುಕೊಳ್ಳುವರೆಂದು ನಿಂದಿಸಿದ. ಆ ಸಭೆಯಲ್ಲಿ ನಾನಿದ್ದೆ. ನನಗೆ ತತ್‌ಕ್ಷಣ ಉತ್ತರಿಸುವ ಅವಕಾಶವುಂಟಾಯಿತು.

ಆಗ ನಾನೆಂದೆ-ನಮಗೆ ನೂರಾರು ಕೈಗಳಿದ್ದರೆ ನಮ್ಮ ಕೈಗಳು ಋಗ್ವೇದ ಮಾತ್ರವಲ್ಲ, ಎಲ್ಲಾ ವೇದಗಳು, ರಾಮಾಯಣ, ಮಹಾಭಾರತ, ಕುರಾನ್, ಬೈಬಲ್ ಎಲ್ಲವನ್ನೂ ಹಿಡಿದುಕೊಳ್ಳುತ್ತಿದ್ದವು. ಮಾರ್ಕ್ಸ್‌ರವರ ಕೇವಲ 'ಕೆಪಿಟಲ್' ಮಾತ್ರವಲ್ಲ; ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಹಾಗೂ ನಂತರದ ಮಾರ್ಕ್ಸ್‌ವಾದಿಗಳೆಲ್ಲರ ಕೃತಿಗಳನ್ನು ಎತ್ತಿಕೊಳ್ಳುತ್ತಿದ್ದೆವು. ಯಾವುದು ಜನಕ್ಕೆ ಹಿತವನ್ನುಂಟು ಮಾಡುವುದೋ ಅವೆಲ್ಲವುಗಳ ಉತ್ತರಾಧಿಕಾರಿಗಳು ನಾವೆ. ನಾವೇ ವರ್ತಮಾನದಲ್ಲಿ ಅತೀತಕ್ಕೆ ಶ್ರೇಷ್ಠ ರೂಪವನ್ನು ಕೊಡುವವರು"

ಟಾಲ್‌ಸ್ಟಾಯ್ ಕುರಿತು ಲೆನಿನ್:

ಟಾಲ್‌ಸ್ಟಾಯ್ ಯುಗ 1861 ರಿಂದ 1904. ಟಾಲ್‌ಸ್ಟಾಯ್ ಕುರಿತು ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಬದ್ಧತೆಯ ಪ್ರಶ್ನೆಯಲ್ಲಿ ಗೋರ್ಕಿಯವರ ಹಾಗೆ 'ಟಾಲ್‌ಸ್ಟಾಯ್'ಯವರು ಪಕ್ಷದ ಸದಸ್ಯರಾಗಿರಲಿಲ್ಲ. ಅವರು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೂ ಬದ್ಧರಾಗಿರಲಿಲ್ಲ. ಆದರೂ ಟಾಲ್‌ಸ್ಟಾಯ್ ಮಹಾನ್ ಲೇಖಕರು. ಹಾಗಿದ್ದರೆ ಅವರು ಯಾವುದಕ್ಕೆ ಬದ್ಧರಾಗಿದ್ದರು? ಈ ಬಗ್ಗೆ ಚರ್ಚಿಸುವ:

ಟಾಲ್‌ಸ್ಟಾಯ್ ಯುಗವು ವಿಶ್ವದಲ್ಲಿ ಬಂಡವಾಳವಾದದ ತೀವ್ರ ಮುನ್ನಡೆಯ ಕಾಲ. ರಶ್ಯಾದಲ್ಲಿ ಬಂಡವಾಳವಾದವು ವಿಕಾಸ ಹೊಂದುತ್ತಾ ಬರುತ್ತಿತ್ತು. ರೈತರ ಜೀವನದಲ್ಲಿ ಬಂಡವಾಳವಾದಿ ಕ್ರಾಂತಿ ಸಂಭವಿಸುತ್ತಾ ಇತ್ತು. ಅದರ ಮುಖ್ಯ ಉದ್ದೇಶವು ಜಾರ್‌ಶಾಹಿ ಮತ್ತು ಪಾಳೇಗಾರೀ ವ್ಯವಸ್ಥೆಯನ್ನು ನಿರ್ಮೂಲನ ಮಾಡುವುದಾಗಿತ್ತು. ಬಂಡವಾಳಪತಿಗಳನ್ನು ನಾಶ ಮಾಡುವುದಾಗಿರಲಿಲ್ಲ. ಭಾರತೀಯ ಸಮಾಜಕ್ಕೆ ಹೋಲಿಸಿದಲ್ಲಿ ಆ ಕಾಲದ ರಶ್ಯಾ ಬಹಳ ಮುಂದುವರಿದಿತ್ತು. ಭಾರತೀಯ ಬಂಡವಾಳವಾದ ಇನ್ನೂ ಶೈಶವದಲ್ಲಿತ್ತು. ರಶ್ಯಾದ ಹಳ್ಳಿಗಳಲ್ಲಿ ಬಂಡವಾಳವಾದಿ ಕ್ರಾಂತಿಯಾಗುತ್ತಿದ್ದರೆ ಭಾರತದ ಹಳ್ಳಿಗಳಲ್ಲಿ ಬ್ರಿಟಿಷ್‌ಪ್ರಭುತ್ವವು ಭಾರತೀಯ ರಾಜರು, ಪಾಳೇಗಾರರು ಹಾಗೂ ಸಾಮಂತರೊಂದಿಗೆ ಸೇರಿಕೊಂಡು ಪಾಳೇಗಾರಿ ಅವಶೇಷಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿತ್ತು. ಭಾರತೀಯ ಜನತೆಯ ಮುಖ್ಯ ಶೋಷಕರು ವಿದೇಶೀ ಸಾಮ್ರಾಜ್ಯವಾದವಾಗಿತ್ತು. ಆದರೆ, ರಶ್ಯಾದ ಪರಿಸ್ಥಿತಿಯಲ್ಲಿ ಅಲ್ಲಿನ ದೇಶೀ ಬಂಡವಾಳಗಾರರು ಶೋಷಕರಾಗಿದ್ದರು. ಟಾಲ್‌ಸ್ಟಾಯ್ ಅಂದಿನ ರಶ್ಯಾದ ಬದಲಾಗುತ್ತಿರುವ ಪರಿಸ್ಥಿತಿಗಳ ಅತಿ ಸೂಕ್ಷ್ಮ ಗ್ರಹಿಕೆಯನ್ನು ಹೊಂದಿದ್ದರು. ಆ ಗ್ರಹಿಕೆಗಳು ಅವರ ಅನುಭೂತಿಯ ಭಾಗವೇ ಆಗಿದ್ದುವು. ಆದರೆ ಅವರ ವಿಚಾರದ ಭಾಗವಾಗಿರಲಿಲ್ಲ. ಟಾಲ್‌ಸ್ಟಾಯ್‌ಯವರಲ್ಲಿ ಹಲವಾರು ವಿರೋಧಾಭಾಸಗಳೂ ಇದ್ದುವು. ಅದು ಅವರ ಚಿಂತನೆಯಲ್ಲಿನ ವಿರೋಧಾಭಾಸಗಳಿರುವ ಬದಲಿಗೆ ಆ ಕಾಲದ ಅತ್ಯಂತ ಜಟಿಲ, ಅಸಂಗತ ಪರಿಸ್ಥಿತಿಗಳ – ಸಮಾಜಿಕ ಪ್ರಭಾವಗಳ ಹಾಗೂ ಚಾರಿತ್ರಿಕ ಪರಂಪರೆಗಳ ಬಿಂಬವಾಗಿದ್ದುವು. ಆದ್ದರಿಂದಲೇ ಟಾಲ್‌ಸ್ಟಾಯ್ ಅವರ ವಿಚಾರಗಳಿಗೂ ಅವರ ಕೃತಿಗಳಿಗೂ ಅಂತಹ ಅಂತಃಸಂಬಂಧವೇನಿರಲಿಲ್ಲ. (ಇರಬೇಕಾಗಿಯೂ ಇಲ್ಲ ಎಂಬುದು ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳಿಗೆ ಗೊತ್ತು.) ಟಾಲ್‌ಸ್ಟಾಯ್‌ಯವರ ನೇರ ವಿಚಾರಗಳೇ ಅವರ ಕೃತಿಗಳಲ್ಲಿ ಬಂದಿದ್ದರೆ ಟಾಲ್‌ಸ್ಟಾಯ್ ಮಹಾನ್ ಲೇಖಕರಾಗುತ್ತಿರಲಿಲ್ಲ. ಅವರ ಗ್ರಹಿಕೆ ಹಾಗೂ ಅನುಭೂತಿಗಳು ಅವರನ್ನು ಶ್ರೇಷ್ಠ ಲೇಖಕರನ್ನಾಗಿಸಿದುವು. ಶ್ರೇಷ್ಠ ಲೇಖಕ ಯಾವಾಗಲೂ ತನ್ನ ಕೃತಿಯಲ್ಲಿ ತನ್ನ ವಿಚಾರಗಳನ್ನು ಬಿಂಬಿಸುವುದಿಲ್ಲ; ಬದಲಿಗೆ ಜೀವನದ ವಸ್ತುಸ್ಥಿತಿಯ ಚಿತ್ರಣವನ್ನು ಕೊಡುತ್ತಾನೆ. ಆತನ ವಾಸ್ತವಜೀವನದ ಅದ್ಭುತ ಚಿತ್ರಣವು ಆತನ ವ್ಯಕ್ತಿಗತ ವಿಚಾರಗಳನ್ನು ಮೂಲೆಗೆ ತಳ್ಳಿಬಿಡುತ್ತವೆ. ಈ ನಿಟ್ಟಿನಲ್ಲಿ ಟಾಲ್‌ಸ್ಟಾಯ್ ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದುದು ಜೀವನದ ಯಥಾರ್ಥತೆಯನ್ನು. (ಅದುವೇ ಬದ್ಧತೆ) ಆದ್ದರಿಂದಲೇ ಲೆನಿನ್ ಟಾಲ್‌ಸ್ಟಾಯ್‌ಯವರ 'ರಶ್ಯನ್ ಕ್ರಾಂತಿಯ ದರ್ಪಣ' ಎಂದು ಶ್ಲಾಘಿಸಿದರು. ಇದು ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆಗೆ ಸ್ಪಷ್ಟವಾದ ನಿಖರವಾದ ಉತ್ತರ. ಟಾಲ್‌ಸ್ಟಾಯ್ ನಂತರದ ಯುಗದ ಗೋರ್ಕಿಯವರು ಸಾಮಾಜಿಕ ಜೀವನದ ಯಥಾರ್ಥತೆಗೆ ಬದ್ಧರಾಗಿರುವಂತೆಯೇ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೂ ಬದ್ಧರಾಗಿದ್ದರು. ಈ ಪ್ರಜ್ಞಾಪೂರ್ವಕ ಅರಿವು ಸಾಹಿತ್ಯವನ್ನು ಹೇಗೆ ಗ್ರಹಿಸುತ್ತದೆ ಎಂಬುದನ್ನು ಸಮೀಕ್ಷಿಸುವ:

A Contribution to the critique of political economy (1859) ಎಂಬ ಮಾರ್ಕ್ಸ್‌ರವರ ಪ್ರಖ್ಯಾತ ಗ್ರಂಥದ ಈ ಸಾಲುಗಳನ್ನು ಗಮನಿಸಬಹುದು:

ಆಧಾರ ಮತ್ತು ಮೇಲಂತಸ್ತಿನ ರಚನೆ

"ಜೀವನದ ಸಾರ್ವಜನಿಕ ಉತ್ಪಾದನೆಯಲ್ಲಿ ಮನುಷ್ಯನು ಕೆಲವೊಂದು ನಿಶ್ಚಿತ ಸಂಬಂಧಗಳನ್ನು ಹೊಂದುತ್ತಾನೆ. ಆದರೆ, ಅವು ಆತನ ಇಚ್ಛೆಗೆ ಅನುಸಾರವಾಗಿ ಇರುವುದಿಲ್ಲ. ಉತ್ಪಾದನೆಯ ಸಂಬಂಧವು ಅದನ್ನು ಉತ್ಪಾದಿಸುವ ಶಕ್ತಿಗಳ ವಿಕಾಸಕ್ಕೆ ಹೊಂದಿಕೊಂಡಿರುತ್ತದೆ. ಈ ಉತ್ಪಾದನಾ ಸಂಬಂಧಗಳ ಒಟ್ಟು ಮೊತ್ತವು ಸಮಾಜದ ಮೂಲಾಧಾರವಾದ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಅದರ ಮೇಲೆ ರಾಜಕೀಯ, ಕಾನೂನು, ಸಾಮಾಜಿಕ ಸಂರಚನೆ, ಸಾಹಿತ್ಯ ಕಲೆ-ಎಲ್ಲವೂ ನಿಂತಿರುತ್ತವೆ. ಅದುವೇ ಮೇಲಂತಸ್ತು (Super Structure) ಆದ್ದರಿಂದ ಮನುಷ್ಯನ ಪ್ರಜ್ಞೆ ಆತನನ್ನು ರೂಪಿಸುವುದಿಲ್ಲ. ಬದಲಿಗೆ ಆತನ ಸಾಮಾಜಿಕ ಅಸ್ತಿತ್ವವೇ ಆತನ ಪ್ರಜ್ಞೆಯನ್ನು ರೂಪಿಸುತ್ತದೆ"

ಈ ಮೇಲಂತಸ್ತು ನಿಂತಿರುವುದು 'ಆಧಾರ'ದ (Base) ಮೇಲೆ. ಆಧಾರವು ಉತ್ಪಾದನಾ ಶಕ್ತಿಗಳ ಮತ್ತು ಉತ್ಪಾದನಾ ಸಂಬಂಧಗಳ ಆರ್ಥಿಕ ಸಂರಚನೆಯಾಗಿರುತ್ತದೆ. (ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಸಮಾಜದಲ್ಲಿ ಪ್ರಬಲವಾಗಿರುವ-ಗಟ್ಟಿಯಾಗಿರುವ ವಿಚಾರಗಳು ಆಳುವ ವರ್ಗದ ವಿಚಾರಗಳೇ ಆಗಿದ್ದರೂ ಮಹಾನ್ ಕಲಾಕಾರನ ಕೃತಿಗಳು ಸಮಾಜದ ಆಧಾರದ ಮೇಲಿನ ಅಧಿರಚನೆಯ ಪ್ರಜ್ಞಾಪೂರ್ವಕವಾದ ಗತಿ ಬಿಂಬವಾಗಿರುತ್ತವೆ ಹಾಗೂ ಅದು ದ್ವಂದ್ವಾತ್ಮಕವಾಗಿರುತ್ತವೆ.)

ಅಂದರೆ, ಯಾವುದೇ ಯುಗದ ಸಾಮಾಜಿಕ ಮಾನಸಿಕತೆಯು ಆ ಯುಗದ ಸಾಮಾಜಿಕ ಸಂಬಂಧಗಳಿಗೆ ಅನುರೂಪವಾಗಿರುತ್ತದೆ. ಆದ್ದರಿಂದ ಸಾಹಿತ್ಯ ಕೃತಿಗಳು ಯಾವುದೇ ರಹಸ್ಯಮಯ ಪ್ರೇರಣೆಯ ಫಲ ಅಲ್ಲ. ಅದು ಕೃತಿಕಾರ ಜಗತ್ತನ್ನು ನೋಡುವ ವಿಶಿಷ್ಟ ವಿಧಿವಿಧಾನಗಳ ಫಲ. (ವ್ಯಕ್ತಿಗತ ಮನೋವಿಜ್ಞಾನವೂ ಒಂದು ಸಾಮಾಜಿಕ ಉತ್ಪಾದನೆ)

ಆದರೆ, ಮೇಲಂತಸ್ತು (ಅಧಿರಚನೆ) ಮತ್ತು ಆಧಾರದ ನಡುವೆ ನೇರವಾದ, ಯಾಂತ್ರಿಕವಾದ ಯಾವ ಸಂಬಂಧವೂ ಇಲ್ಲ. ಮಾರ್ಕ್ಸ್‌ರವರ ಪ್ರಕಾರ ಭೌತಿಕ ಉತ್ಪಾದನೆ ಮತ್ತು ಕಲಾತ್ಮಕ ಉತ್ಪಾದನೆಯ ನಡುವಿರುವುದು ಒಂದು ಬಗೆಯ ಅಸಮತೋಲ (Uneven) ಸಂಬಂಧ ಈ ಬಗ್ಗೆ ಸ್ಟಾಲಿನ್:

"ಮೇಲಂತಸ್ತು ಆಧಾರದ ಸೃಷ್ಟಿ ಆದರೆ ಅದರ ಅರ್ಥ ಅದು ಕೇವಲ ಆಧಾರದ ಪ್ರತಿಬಿಂಬ ಮಾತ್ರ ಎಂದಲ್ಲ. ಅಂತೆಯೇ, ಆಧಾರದ ಸ್ಥಿತಿಯ ಬಗೆಗೆ, ವರ್ಗಗಳ ಸಂಬಂಧಗಳ ಬಗೆಗೆ ಅದು ತಟಸ್ಥ, ನಿಷ್ಕ್ರೀಯ ಮತ್ತು ಉದಾಸೀನವಾಗಿರುವುದಿಲ್ಲ. ಅದು ದೃಢವಾಗಿ ಅಸ್ತಿತ್ವಕ್ಕೆ ಬಂದ ಕೂಡಲೇ ಒಂದು ಮುಖ್ಯ ಶಕ್ತಿಯಾಗಿ ಮಾರ್ಪಾಡುತ್ತದೆ. ಅದು ಆಧಾರಕ್ಕೆ ಬಲಕೊಡುತ್ತದೆ. ಅಥವಾ ಹೊಸ ವ್ಯವಸ್ಥೆಗಾಗಿ ಹಳೆಯ ಆಧಾರ ಮತ್ತು ಹಳೆಯ ವರ್ಗಗಳ ನಾಶಕ್ಕೂ ಸಹಕಾರಿಯಾಗುತ್ತದೆ." – ಈ ನಿಟ್ಟಿನಲ್ಲಿ ಗೋರ್ಕಿಯವರ ಕೃತಿಗಳು ಆಧಾರದ ಗತಿಶೀಲತೆಗೆ ಸಹಕಾರಿಯಾಗುತ್ತವೆ. ನಿಷೇಧದ ನಿಷೇಧಕ್ಕೆ ಸಹಾಯಕವಾಗುತ್ತದೆ. ಹಾಗೆ ಆಗಿದೆ ಕೂಡಾ; ಈ ನಿಟ್ಟಿನಲ್ಲಿ ಗೋರ್ಕಿ ನಮಗೆ ಅತ್ಯಂತ ಮಹತ್ವದ ವ್ಯಕ್ತಿಯಾಗುತ್ತಾರೆ.

ಗೋರ್ಕಿಯವರ ಬದ್ಧತೆ ಎಂತಹ ಪರಿಣಾಮಕಾರಿ ಸಾಹಿತ್ಯ ಸೃಷ್ಟಿಗೆ ಕಾರಣವಾಯಿತೆಂಬ ಕುರಿತು ಇ. ಎಂ. ಎಸ್. ನಂಬೂದಿರಿಪ್ಪಾಡ್ ಹೀಗೆ ಬರೆಯುತ್ತಾರೆ.

"ಕಾರ್ಮಿಕ ವರ್ಗದ ಲೇಖಕರಾಗಿ ಗೋರ್ಕಿಯವರು ಸಮಷ್ಟಿಯ ಸಾಮಾಜಿಕ ಮಾನವನ ಪುನರ್ ಸೃಷ್ಟಿ ಮಾಡುವಲ್ಲಿ ಲೆನಿನರಿಗೆ ಸಹಾಯ ಮಾಡಿದರು. ಆ ಕಾಲದ ಮಾನವನನ್ನು ಜೀವನ ಮತ್ತು ಸಾಹಿತ್ಯದ ಕೇಂದ್ರವನ್ನಾಗಿಸಿದರು. ಮಾನವ ಸೃಷ್ಟಿಯ ಅತ್ಯುನ್ನತ ಶಿಖರವು ದ್ವಂದ್ವಮಾನ ಮತ್ತು ಐತಿಹಾಸಿಕ ಭೌತವಾದ ಹಾಗೂ ಅದರ ಅನ್ವಯಿಕ ಆಧುನಿಕ ದಾರ್ಶನಿಕ ಆಂದೋಲನ ಮತ್ತು ಕಾರ್ಮಿಕ ವರ್ಗದ ಹೋರಾಟಗಳ ಫಲವಾಗಿದೆ. ಪ್ರಾಚೀನ ಯುಗದ ಸಾಹಿತ್ಯದಲ್ಲಿ ಪ್ರತಿಬಿಂಬವಾಗುತ್ತಿದ್ದ ಮನುಷ್ಯನನ್ನು ತನ್ನ ಸಾಮೂಹಿಕ ಶಕ್ತಿಯೆಡೆಗೆ ಪ್ರಜ್ಞಾಪೂರ್ವಕವಾಗಿ ಸಾಗಿಸುವ ಕಾರ್ಯವು ಮೊದಲು ಧರ್ಮದಿಂದ ಆಗುತ್ತಿತ್ತು. ಆದರೆ, ಇಂದಿನ ಯುಗದಲ್ಲಿ ಮಾನವನಿಗೆ ಶಕ್ತಿಯ ಬಗೆಗಿನ ಪ್ರಜ್ಞೆಯು ವಿಜ್ಞಾನ ಮತ್ತು ಕಾರ್ಮಿಕ ವರ್ಗದ ಐಕ್ಯ ಹೋರಾಟದಿಂದ ಹುಟ್ಟಬೇಕೇ ಹೊರತು ಧರ್ಮದಿಂದಲ್ಲ"

ನೀವು ಯಾರ ಕಡೆಗೆ ?

"ಆದ್ದರಿಂದಲೇ, ಲೆನಿನ್ ಬೂರ್ಶ್ವಾ ವರ್ಗದ ವಿರುದ್ಧ ಶ್ರಮಜೀವಿ ವರ್ಗದ ಪರವಾದ ಯಾವ ಸೈದ್ಧಾಂತಿಕ, ರಾಜಕೀಯ ಮತ್ತು ಆರ್ಥಿಕ ಹೋರಾಟವನ್ನು ನಡೆಸಿದರೊ ಅದನ್ನೇ ಗೋರ್ಕಿ ಸಾಹಿತ್ಯ ಕ್ಷೇತ್ರದಲ್ಲೂ ಮಾಡಿದರು. 1930ರ ವಿಶ್ವವ್ಯಾಪಿ ಹೋರಾಟದ ದಿನಗಳಲ್ಲಿ ಇಡೀ ಮಾನವತೆಯೇ-ಒಂದೆಡೆಯಲ್ಲಿ ಫ್ಯಾಸಿಸ್ಟ್‌ವಾದ, ಯುದ್ಧ ಹಾಗೂ ಇನ್ನೊಂದೆಡೆಯಲ್ಲಿ-ಪ್ರಜಾಪ್ರಭುತ್ವ, ಶಾಂತಿ ಮತ್ತು ಸಮಾಜವಾದದ ಮಧ್ಯೆ ಹರಿ ಹಂಚಿಹೋಗಿತ್ತೋ-ಆ ಸಂದರ್ಭದಲ್ಲಿ ಗೋರ್ಕಿಯವರು ಎಲ್ಲಾ ಲೇಖಕರು ಮತ್ತು ಸಂಸ್ಕೃತಿಯ ನಿರ್ಮಾಪಕರೊಡನೆ "ನೀವು ಯಾವ ಕಡೆಗೆ?" ಎಂದು ಪ್ರಶ್ನಿಸಿದ್ದುದ್ದು ಇದೇ ಕಾರಣದಿಂದ.

(ಮುಂದುವರಿಯುವುದು)

ಸಂಪಾದಕೀಯ

ವಿಭಜನೆಯ ರಾಜಕಾರಣ

ಬೆಳಗಾವಿಯಲ್ಲಿನ ವಿಶೇಷ ಅಧಿವೇಶನವೀಗ ಮುಗಿದಿದೆ. ಘೋಷಿತ ಅಜೆಂಡಾಗಳು ಮೂಲೆಗುಂಪಾಗಿದ್ದರೆ, ಅಘೋಷಿತ ಅಜೆಂಡಾಗಳೇ ವಿಜೃಂಭಿಸಿದ್ದು ಅಧಿಕಾರಸ್ಥರ ಲೆಕ್ಕಾಚಾರದ ಯಶಸ್ಸು ಅಲ್ಲಿದೆ ಎಂದು ಹೇಳಬೇಕಾಗುತ್ತದೆ.

ಬೆಂಗಳೂರಿನ ಹೊರಗೆ ವಿಶೇಷ ಅಧಿವೇಶನ ನಡೆಸುವುದಕ್ಕೂ ಗಡಿ ವಿವಾದಕ್ಕೂ ಗಂಟುಹಾಕುವ ಕ್ರಮವೇ ಸರಿಯಿಲ್ಲ. ಯಾವುದೇ ಪ್ರದೇಶದ ಮೇಲೆ ಹಕ್ಕನ್ನು ಪ್ರತಿಪಾದಿಸಲು ಅದಕ್ಕೆ ತನ್ನದೇ ಆದ ಪ್ರಜಾಸತ್ತಾತ್ಮಕ ವಿಧಾನಗಳಿವೆ, ಮಾರ್ಗಗಳಿವೆ. ಆದರೆ ವಿಧಾನಸಭೆಯ ಅಧಿವೇಶವನ್ನೇ ಗಡಿವಿವಾದಕ್ಕೆ ತಳುಕು ಹಾಕಿದಲ್ಲಿ ಆಗುವ ಅನಾಹುತವೇ ಈ ಅವಧಿಯಲ್ಲಿ ಎದ್ದುಕಂಡಿತು. ಪರಿಣಾಮವಾಗಿ ಮರಾಠಿ ಹಾಗೂ ಕನ್ನಡ ಭಾಷಿಕರ ನಡುವೆ, ಈ ಪ್ರದೇಶದಲ್ಲಿ ಆಯಾ ರಾಜ್ಯಗಳಲ್ಲಿಯೂ ದ್ವೇಷಕರ ವಾತಾವರಣ ಹುಟ್ಟುಹಾಕಿ, ಪರಸ್ಪರ ದ್ವೇಷ ಸಾಧಿಸುವ ಮಾತುಗಳು, ಬಸ್‌ಗಳಿಗೆ ಬೆಂಕಿ, ಆಸ್ತಿಪಾಸ್ತಿಗಳಿಗೆ ಹಾನಿಯಂತಹ ಕೆಲವು ದುಷ್ಕೃತ್ಯಗಳು ಘಟಿಸಿದ್ದು ಅಪಾಯಕಾರಿಯಾಗಿದೆ. ಭಾರತದ ಒಕ್ಕೂಟದ ಎರಡು ರಾಜ್ಯಗಳು ಪರಸ್ಪರ ಮುಖಾಮುಖಿಯಾಗಿ ಕದನಕ್ಕಿಳಿಯುವುದು, ಜನತೆಯನ್ನು ಎತ್ತಿಕಟ್ಟುವುದು ರಾಷ್ಟ್ರದ ಸಮಗ್ರತೆಗೆ, ಐಕ್ಯತೆಗೆ ಗಂಡಾಂತರಕಾರಿಯಾಗಿದೆ. ಈಗಾಗಲೇ ಹಲವು ದಿಕ್ಕುಗಳಿಂದ ರಾಷ್ಟ್ರದ ಸಮಗ್ರತೆಗೆ ಬೆದರಿಕೆ ಇರುವಾಗ ಭಾಷೆ-ಗಡಿ ಆಧಾರದಲ್ಲಿ ಬೆಳೆಸುವ ದ್ವೇಷ ಇನ್ನಷ್ಟು ವಿಭಜನಕಾರಿ ಶಕ್ತಿಗಳನ್ನು ಬಲಗೊಳಿಸುತ್ತದೆ. ದೇಶವನ್ನು, ಜನರ ಒಗ್ಗಟ್ಟನ್ನು ದುರ್ಬಲಗೊಳಿಸುತ್ತದೆ. ಒಂದೇ ದೇಶದ ಜನ ಶತ್ರುಗಳಂತೆ ಭಾವಿಸುವ,ವರ್ತಿಸುವ ಪರಿಣಾಮಗಳನ್ನು ಗಹನವಾಗಿ ಪರಿಗಣಿಸುವುದಕ್ಕಿಂತ ಅವರ ರಾಜಕೀಯ ಲಾಭದ ಲೆಕ್ಕಾಚಾರವೇ ಆಳುವವರಿಗಿದೆ.



ಮಹಾರಾಷ್ಟ್ರದಲ್ಲಾಗಲೀ, ಕರ್ನಾಟಕ ದಲ್ಲಾಗಲೀ ಆಳುವ ಬಲಪಂಥೀಯ ಪಕ್ಷಗಳು ಆಯಾ ರಾಜ್ಯಗಳಲ್ಲಿ ಆಂತರಿಕ ಬಿಕ್ಕಟ್ಟುಗಳು ತಲೆದೋರಿದಾಗ, ಅಥವಾ ಜನರ ಅತೃಪ್ತಿ ತಮ್ಮ ಸರ್ಕಾರದ ವಿರುದ್ಧ ಬೆಳೆಯುತ್ತಿರುವಾಗ ಬಚಾವಾಗಲು ಗಡಿ-ಭಾಷೆ-ಜಲ ವಿವಾದಗಳನ್ನು ಕೆದಕಿ ಬೆಳೆಸುವುದು ನಡೆಯುತ್ತಲೇ ಬಂದಿದೆ. ಇದರಿಂದ ಅಲ್ಪರಾಜಕೀಯ ಲಾಭವೂ ಸಿಕ್ಕಿರುವುದು ಇಂತಹ ಶಕ್ತಿಗಳ ಅಪಾಯಕಾರಿ ಆಟಗಳಿಗೆ ಉತ್ತೇಜನವನ್ನು ನೀಡಿದೆ.

ಹಿಂದೆ ಭಾಷಾವಾರು ಪ್ರಾಂತ್ಯಗಳ ರಚನೆಯ ಕಾಲಕ್ಕೆ ಗಡಿ ಗುರುತಿಸುವಲ್ಲಿ ಅನುಸರಿಸಿದ ಮಾನದಂಡಗಳ ಮಿತಿಗಳಿಂದ ಹಲವಾರು ಸಮಸ್ಯೆಗಳು ಉಳಿದಿವೆ. ನಂತರದಲ್ಲಿಯೂ ರಾಜಕೀಯ, ಆರ್ಥಿಕ ಸಂಗತಿಗಳು ಅಂತಹ ಸಮಸ್ಯೆಗಳನ್ನು ಬೆಳೆಸಿವೆ. ಈಗಲೂ ಭಾಷೆ ಶಿಕ್ಷಣ - ಬದುಕು - ಅಭಿವೃದ್ಧಿ - ನಾಗರೀಕ ಸೌಲಭ್ಯಗಳಂತಹ ವಿಷಯಗಳಲ್ಲಿ ಗಡಿ ನಾಡಿನ ಜನತೆ ತೀವ್ರತರ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಇವುಗಳ ನಿವಾರಣೆಗೆ ಸರ್ಕಾರಗಳು ಅತ್ಯಗತ್ಯ ಗಮನ, ಆರ್ಥಿಕ ನೆರವು, ಪ್ರಗತಿಯ ಕ್ರಮಗಳನ್ನು ಕೈಗೊಳ್ಳಲು ಸತತವಾಗಿ ನಿರ್ಲಕ್ಷಿಸುತ್ತಿವೆ, ನಿರಾಕರಿಸುತ್ತಿವೆ. ಅಕ್ಕಿ ನೀಡದೇ, ನೆಂಟನ ಓಟಿನ ಗಂಟು ಹೊಡೆಯುವ ತಂತ್ರಗಳು ಅಲ್ಲಿನ ಜನರನ್ನು ಒಳಗೊಂಡು ರಾಜ್ಯದ ಜನತೆಯನ್ನು ಅತಂತ್ರ ಸ್ಥಿತಿಯಲ್ಲಿರಿಸಿವೆ.


ಆದ್ದರಿಂದ ಭಾಷೆ - ಗಡಿ - ಜಲದಂತಹ ಪ್ರಶ್ನೆಗಳ ಬಗ್ಗೆ ಭಾವೋದ್ರೇಕದ ಪ್ರತಿಕ್ರಿಯೆಗಿಂತ ಸರ್ಕಾರಗಳು ಪರಸ್ಪರ ಕಲೆತು - ಕುಳಿತು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಜನತೆಯ ಒಗ್ಗಟ್ಟು ಪ್ರಧಾನ ಕಾಳಜಿಯಾಗಬೇಕು. ಇಂತಹ ವಿವಾದಗಳು ತಲೆದೋರಿದಾಗ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವುದು ಅತ್ಯಗತ್ಯವಾಗಿದೆ. ಆದರೆ ಯುಪಿಎ ಸರ್ಕಾರ (ಹಿಂದೆ ಎನ್‌ಡಿಎ ಕೂಡಾ) ಸಮಗ್ರತೆ ಬೆಸೆಯುವ ಒಂದು ನಿಲುವು ತಾಳದೆ ಸಮಸ್ಯೆ ಉರಿಯಲು ಬಿಟ್ಟಿದ್ದು ಬೇಜವಾಬ್ದಾರಿತನವೆಂದೇ ಹೇಳಬೇಕಾಗುತ್ತದೆ.

ಹಿಂದೆ ಗಡಿ ನಿರ್ಣಯಿಸುವಾಗ ತಾಲೂಕನ್ನು ಒಂದು ಘಟಕವಾಗಿ ಪರಿಗಣಿಸುವುದಕ್ಕಿಂತ ಹಳ್ಳಿಯನ್ನು ಒಂದು ಘಟಕವಾಗಿ ಪರಿಗಣಿಸಬೇಕೆಂಬುದು ಅಂದು ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ತ್ಯಾಗ, ಬಲಿದಾನಗಳ ಹೋರಾಟ ನಡೆಸಿದ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಆಗ್ರಹವಾಗಿತ್ತು. ಆದರೆ

ಪುಟ 4ಕ್ಕೆ

ಸದನ - ಹುಸಿ ಕದನ

ಮರೆತೇ ಹೋದರು ಜನಾಜನ



ಹಿಂದೆ 1983-85ರ ಅವಧಿಯಲ್ಲಿ ಉಳ್ಳಾಲ ಕ್ಷೇತ್ರದಿಂದ ಸಂಗಾತಿ ಪಿ.ರಾಮಚಂದ್ರರಾವ್ 'ಮಾಸ್ಟ್ರು' ಒಂದು ಪ್ರಸಂಗವನ್ನು ಹೇಳಿದ್ದರು. ಅವರು ಪಕ್ಷದ ರಾಜ್ಯ ಕಾರ್ಯದರ್ಶಿ, ಐಕ್ಯರಂಗ ಪತ್ರಿಕೆಯ ಸಂಪಾದಕ, ರೈತ ಸಂಘದ ರಾಜ್ಯ ಪದಾಧಿಕಾರಿ ಹೀಗೆ ಆದರೂ ಶಾಸನಸಭೆಯಲ್ಲಿ ಅವರು ಸದಾ ಕ್ರಿಯಾಶೀಲರು.

ಒಂದೊಮ್ಮೆ ವಿಧಾನಸಭೆಯ ಕಲಾಪಗಳನ್ನು ಮುಗಿಸಿ ಹೊರಬರುತ್ತಿದ್ದರು. ಅದು ಕೋಲಾಹಲ ಸೃಷ್ಟಿಸಿದ್ದ ಒಂದು ಕಲಾಪ. ಹೀಗಾಗಿ ಅದರದ್ದೇ ಮಾತುಗಳು. ಆದರೆ 'ಮಾಸ್ಟ್ರು' ಮಾತನಾಡುತ್ತಿದ್ದುದು ಕಡಿಮೆ. ಅದೂ ಮೇಲುದನಿಯಲ್ಲಿ, ಈಗಲಂತೂ ಒಬ್ಬರೇ ನಡೆದು ಬರುತ್ತಿದ್ದರು. ಅವರ ಹಿಂದೆ ಪರಿಚಿತರಾಗಿದ್ದ ಇಬ್ಬರು ಶಾಸಕರು ಮಾತನಾಡುತ್ತಾ ಬರುತ್ತಿದ್ದರು.

ಶಾಸಕ ನಂ.1: ಏನ್ ಸ್ವಾಮಿ, ಈವತ್ತು ಅಸೆಂಬ್ಲಿಯಲ್ಲಿ ಬಾರೀ ಜೋರ್ ಜೋರ್.

ಶಾಸಕ ನಂ.2: ಅದೇನ್‌ಬಿಡು, ಅಲ್ಲಾ ಮಿನಿಷ್ಟ್ರು ಆದ ಕೂಡ್ಲೇ ಹಂಗಾ ಆಡೋದು.

ಶಾಸಕ ನಂ.1: ಏನೇ ಆಗಲಿ, ಸಖತ್ ಬೆಂಡೆತ್ತಿದ್ದೀರಿ, ಬಿಡಿ ನಿಮ್ದೇ ಇವತ್ತು ಜೋರ್ ಗದ್ದಲ.

ಶಾಸಕ ನಂ.2: ಅಯ್ಯೋ.. ಇಲ್ಲಿ ಒಳಗೆ ನಾವು ಗದ್ದಲ ಮಾಡದಿದ್ರೇ, ಜನ ಹೊರಗೆ ಗದ್ದಲ ಮಾಡ್ತಾರಯ್ಯಾ.. ನೋಡೋಣ ಟಿ.ವಿ., ಪೇಪರ್‌ನಲ್ಲಿ ಏನ್ ಬರೆಯುತ್ತಾರೋ.. ಹ್ಹಾ...ಹ್ಹಾ...

ಇಬ್ಬರದೂ ದೇಶಾವರಿ ಅದೇ ನಗು..

ಅಂದರೆ ಅಸೆಂಬ್ಲಿಯಲ್ಲಿ ಇವರು ಅರ್ಥಪೂರ್ಣವಾಗಿ ಏನು ಮಾತನಾಡಿದರು, ಏನು ಪಡೆದರು ಎಂಬುದಕ್ಕಿಂತ ಧ್ವನಿ ಜೋರಾಗಿರಬೇಕು. ಮಹಾ ಹೋರಾಡಿದವನಂತೆ ಪೋಜ್ ಕೊಟ್ಟು, ಅದು ಪತ್ರಿಕೆ, ಟಿ.ವಿ.ಯಲ್ಲಿ ಬರಬೇಕು. ಇದನ್ನು ನೋಡಿದ ಜನ ತಮ್ಮ ಶಾಸಕ ಈ ಪರಿ 'ಹೋರಾಡುತ್ತಿರುವುದುನ್ನು ಕಂಡು ಭೇಷ್ ಅಂತಾ ಅನ್ನಬೇಕು. ಅದಕ್ಕಾಗಿಯೇ ಹುಸಿ ಕಸರತ್ತು. ಜನರ ಕಾಳಜಿಗೆ ಇಲ್ಲ ಪುರಸೊತ್ತು..'

ವ್ಯರ್ಥ ಆಲಾಪ

ಈ ವಾರ ಬೆಳಗಾವಿಯಲ್ಲಿ ಮುಕ್ತಾಯಗೊಂಡ ವಿಧಾನಸಭೆಯ ವಿಶೇಷ ಅಧಿವೇಶನದ ಕಲಾಪಗಳನ್ನು ಗಮನಿಸಿದರೆ ಮೇಲಿನ ಮೇಸ್ಟ್ರು ನೆನಪು ಪುನರಾವರ್ತಿಸುತ್ತಿದೆ. ವಿಶೇಷ ಅಧಿವೇಶನ ಮಾಡುತ್ತಿರುವುದೇ ಉತ್ತರ ಕರ್ನಾಟಕ, (ಹೈ.ಕ) ಅಭಿವೃದ್ಧಿ ಪಡಿಸಲೆಂದು ಹೇಳಿದರು. ಅಭಿವೃದ್ಧಿ ಮಹಾ ಕಾರ್ಯಗಳ, ಮಹಾಪೂರ ಇಲ್ಲಿಂದಲೇ ಹರಿಯಲಿದೆಯೆಂದರು. ಎಷ್ಟೆಲ್ಲಾ ಮಾತುಗಳು, ಆದರೆ ಇವಾವೂ ಇಲ್ಲಿ ಚರ್ಚೆಗೆ ಬರಲೇ ಇಲ್ಲ. ಬರೀ ಗದ್ದಲ... ಆಡಂಬರದ ಮಾತುಗಳು. ಆಡಳಿತ ಪಕ್ಷಕ್ಕೆ ಯಾವುದರ ಬಗ್ಗೆ ನಿರ್ದಿಷ್ಟ ತೀರ್ಮಾನ, ನಿರ್ಧಾರವಿಲ್ಲ. ಆಡಳಿತ ಪಕ್ಷ-ಸರ್ಕಾರ ಅಂತಹ ಅಜೆಂಡಾ ಚರ್ಚೆಗೆ ಅಗತ್ಯ ತಯಾರಿಯನ್ನು ಮಾಡಿರಲಿಲ್ಲ. ರಾಜ್ಯಪಾಲರ ಒಣ ಭಾಷಣದಲ್ಲಿ ಅದು ಎದ್ದು ಕಂಡಿತು. ಆ ಬಳಿಕವಾದರೂ ವಿಷಯಗಳನ್ನು ಮುಖ್ಯಮಂತ್ರಿಗಳು ಎತ್ತಿಕೊಳ್ಳಲಿಲ್ಲ... ಕೇವಲ ಗಣಿ ಹಗರಣದ ಸುತ್ತ ಬರೀ ಮಾತುಗಳು ಗುದ್ದಾಟ ಕಿತ್ತಾಟ ಏನೋ ಮಹಾ ಕದನ ನಡೆದೇ ಬಿಟ್ಟಿತು ಎಂಬಂತೆ ಪೋಜು ನೀಡಿದ ವ್ಯರ್ಥ ಕಲಾಪ.

ಹಾಗೇ ನೋಡಿದರೆ ಜಾಗತಿಕ ಆರ್ಥಿಕ ಹಿಂಜರಿತದ ಗಂಭೀರ ಪರಿಣಾಮ ರಾಜ್ಯದ ಮೇಲಾಗುತ್ತಿದೆ. ಲಕ್ಷಾಂತರ ಉದ್ಯೋಗಗಳು ನಾಶವಾಗಿವೆ. ಸೇವಾ ಕ್ಷೇತ್ರವೇ ತತ್ತರಿಸಿದ್ದು ಅಲ್ಲಿಂದಲೇ ಸರ್ಕಾರಕ್ಕೆ ಬರಬೇಕಾಗಿದ್ದ ಅಪಾರ ತೆರಿಗೆ ಹಣ ಕುಸಿತ ಕಂಡಿದೆ. ಕೈಗಾರಿಕೆ -ಕೃಷಿ ಬಿಕ್ಕಟ್ಟು ಹೆಚ್ಚುತ್ತಲೇ ಇದೆ. ಗ್ರಾಮೀಣ ವಲಸೆ, ಬೆಲೆ ಏರಿಕೆಯ ಬಿಸಿ, ರೇಷನ್ ಹಾಗೂ ರೇಷನ್ ಕಾರ್ಡ್‌ಗಳು ಇನ್ನೂ ಸಿಗಲೇ ಇಲ್ಲ. ವಿದ್ಯುತ್ ಕುಡಿಯುವ ನೀರು ಅಭಾವ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನ, ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮುವಾದಿ ಧಾಳಿಗಳು, ಭಯೋತ್ಪಾದನೆ ಬೆದರಿಕೆ-ಐಕ್ಯತೆ-ಸಮಗ್ರತೆ ಕಾಯುವ ಕಾನೂನು-ಸುವ್ಯವಸ್ಥೆ, ಗಣಿ ಹಗರಣ-ಲೋಕಾಯುಕ್ತ ವರದಿ ಕಾಯುವ ಪ್ರಯತ್ನ, ಹೀಗೆ ಹಲವು ನೂರೊಂದು ಪ್ರಶ್ನೆಗಳು.

ಬಂದಿದ್ಯಾಕೆ?

ಆಡಳಿತ ಪಕ್ಷವಾಗಿರುವ ಬಿಜೆಪಿಯು ಇವುಗಳಾವುವನ್ನು ಸರಿಯಾಗಿ ಚರ್ಚೆಗೆ ತರುವಂತಹ ಪ್ರಯತ್ನ ಮಾಡಲೇ ಇಲ್ಲ. ಅದಕ್ಕೆ ಬೇಕಿರಲೂ ಇಲ್ಲ. ನಿರ್ದಿಷ್ಟ ಬೆಳವಣಿಗೆ ಅದಕ್ಕೆ ಬೇಕಿಲ್ಲ. ಅದಕ್ಕೆ ಬೇಕಾದದ್ದು ಈ ಅಧಿವೇಶನದಿಂದ 'ರಾಜಕೀಯ ಲಾಭ' ! ಅದರಂತೆಯೇ ಸಂದರ್ಭವನ್ನು ಬಳಸಿಕೊಂಡರು. ಕನ್ನಡ-ಮರಾಠಿ, ಗಡಿ ವಿವಾದ ಎಂದೆಲ್ಲಾ ಮಗುವನ್ನು ಚಿವುಟಿ ಅಳಿಸಿದರು. ಕರ್ನಾಟಕದಲ್ಲಿ ಕನ್ನಡ ಪರ, ಮಹಾರಾಷ್ಟ್ರದಲ್ಲಿ ಶಿವಸೇನೆ ಪರ- ಇಬ್ಬಂದಿತನ ತೋರಿದರು ಮಾಧ್ಯಮಗಳಲ್ಲಿ ಅದು ಗಹನತೆ ಪಡೆಯದಂತೆ ನೋಡಿಕೊಂಡರು. ಆರಂಭದ ದಿನವೇ ಮುಖ್ಯಮಂತ್ರಿಗಳ ಮೆರವಣಿಗೆ, ಬಾಜಾಭಜಂತ್ರಿ



ಬೆಳಗಾವಿಗೆ ಬಂದಿದ್ಯಾಕೆ ಎಂಬುದನ್ನು ತೋರಿಸಿತು. ವಿರೋಧ ಪಕ್ಷಗಳನ್ನು ಸಾರಾಸಗಟು ನಿರ್ಲಕ್ಷಿಸಿತು.

ವಿಧಾನಸಭೆಯ ಕಟ್ಟಡಕ್ಕೆ ಅಡಿಗಲ್ಲು, ಅಭಿವೃದ್ಧಿಗೆ ಸಾಕಾಯಿತು. ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಿನಲ್ಲಿ ಕೋಮುವಾದಕ್ಕೆ ಕುಮ್ಮಕ್ಕು ನೀಡಿತಲ್ಲದೇ ಸಂಘ ಪರಿವಾರದ ಭಯೋತ್ಪಾದನೆಯನ್ನು ಮರೆಮಾಚಿತು.

ವಿರೋಧ ಪಕ್ಷಗಳೂ

ಆಡಳಿತ ಪಕ್ಷದ ಲೆಕ್ಕಾಚಾರದ ನಡೆ ಹೀಗಿದ್ದರೆ ಇನ್ನೂ ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳದ್ದು ಅರಾಜಕತೆ, ಸಂದರ್ಭ ಸಾಧಕತನ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪ್ರಶ್ನೆಯನ್ನೇನೋ

ಪುಟ 4ಕ್ಕೆ

ಸದನ ಹುಸಿ ಕದನ

ಪುಟ 3 ರಿಂದ

ಎತ್ತಲಾಯಿತು. ಆದರೆ ಅದನ್ನು ಸಮರ್ಥವಾಗಿ ಬಿಡಿಸಿಡುವ ಯತ್ನ ಮಾಡಲಿಲ್ಲ. ಈ ಸರ್ಕಾರದ ಸೂತ್ರ ಇರುವುದೇ ಸಂಘ ಪರಿವಾರದ ಕೈಯಲ್ಲಿ. ಸರ್ಕಾರವು ಅದರ ಅಣತಿಯಂತೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಹೇಳಲಾಯಿತಾಯಿದರೂ ಸಮರ್ಥವಾಗಿ ನಿರ್ದಿಷ್ಟ ಮಾಹಿತಿಗಳನ್ನು ಹೊರಗಿಡಲಿಲ್ಲ. ನಿತ್ಯವೂ ಅಲ್ಪಸಂಖ್ಯಾತರ ಮೇಲೆ ಒಂದಲ್ಲೊಂದು ಕಾರಣಕ್ಕೆ ಧಾಳಿಗಳು, ಚರ್ಚ್ ಮೇಲೆ ಧಾಳಿ, ಕರಾವಳಿ ಅಲೆ ಪತ್ರಿಕೆ ಮೇಲಿನ ದಾಳಿ, ಬುದ್ದಿಜೀವಿಗಳಿಗೆ ಬೆದರಿಕೆ ಒಳಗೊಂಡು ರಾಜ್ಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದಬಗ್ಗೆ ಮಾತುಗಳೇ ಬರಲಿಲ್ಲ. ಸರ್ಕಾರದ ಭಯೋತ್ಪಾದನೆ ಬಗೆಗಿನ ಅಭಿಯಾನ ಪ್ರಸ್ತಾಪಿತವಾದರೂ ಚರ್ಚೆ ಆರಂಭಿಸಿದ್ದ ವಿರೋಧ ಪಕ್ಷದ ನಾಯಕ ಖರ್ಗೆಯವರನ್ನು ರೇಗಿಸಿ ಹಾದಿ ತಪ್ಪಿಸಿ ಚರ್ಚೆಯನ್ನೇ ಮುಚ್ಚಿಹಾಕುವುದರಲ್ಲಿ ಆಡಳಿತ ಪಕ್ಷದವರು ಯಶಸ್ವಿಯಾದರು ಕಾನೂನು ಸುವ್ಯವಸ್ಥೆ ಪ್ರಶ್ನೆ ಎತ್ತಿ ಶಾಸಕ ರೋಷನ್‌ಬೇಗ್ ಮಾತನಾಡುತ್ತಾ ಹುಬ್ಬಳ್ಳಿ ನ್ಯಾಯಾಲಯ ಸ್ಫೋಟದ ಹಿಂದೆ ಸಂಘಪರಿವಾರದ ಕೈವಾಡವಿದೆ ಎಂಬುದನ್ನು ಮಾಲೆಗಾಂವ್‌ಗೂ ಸಂಬಂಧ ಇರಬಹುದೆಂಬುದರ ಆಳವಾದ, ನಿಷ್ಠುರ ತನಿಖೆಗೆ ಆಗ್ರಹಿಸಿ ಗಮನ ಸೆಳೆಯುವಂತಾಗಲಿಲ್ಲ.

ಬೆಟ್ಟ ಅಗೆದರೂ ಇಲಿ ಹಿಡಿಯಲಿಲ್ಲ

ಅಧಿವೇಶನದ ಬಹು ಸಮಯ ನುಂಗಿ ಹಾಕಿತು ಎಂದೆಲ್ಲಾ ಹೇಳುವ ಅಕ್ರಮ ಗಣಿಗಾರಿಕೆಯ ಬಗೆಗಿನ ಮಾತುಗಳು - ಲೋಕಾಯುಕ್ತರ ವರದಿ ಅನುಸರಿಸಿ ಕ್ರಮ ಕೈಗೊಳ್ಳುವಲ್ಲಿಯೂ ಕೇವಲ ವೈಯಕ್ತಿಕ ದೂಷಣೆ ಸವಾಲಿನ ಮಟ್ಟಿಗೆ ಸೀಮಿತಗೊಂಡು ಮುಖ್ಯ ವಿಷಯವೇ ಮರೆಯಾಗಿಹೋಯಿತು. ಲೋಕಾಯುಕ್ತರ ವರದಿ ಅನುಸರಿಸಿ ಅವರು ಗುರುತಿಸಿರುವ ಅಕ್ರಮ ಗಣಿಗಾರಿಕೆದಾರರನ್ನು ಶಿಕ್ಷಿಸಲು ಕ್ರಮ ಅನುಸರಿಸಲು ಒತ್ತಾಯಿಸಬೇಕಿತ್ತು. ಕೇವಲ ಸಿಬಿಐ ವಿಚಾರಣೆ ಎಂದೇ ಲಂಬಿಸಿ ಕೈಗೊಳ್ಳಬಹುದಾದ ಕ್ರಮವನ್ನು ನಿರಾಕರಿಸಲಾಯಿತು. ಲೋಕಾಯುಕ್ತರು ಗುರುತಿಸಿದ ಅಕ್ರಮದಾರರ ಇನ್ನೂ ಇತರೆ ಅಕ್ರಮಗಳ ಬಗ್ಗೆ ವಿವರವಾದ ತನಿಖೆ, ನಿರ್ಬಂಧ, ಸಾರ್ವಜನಿಕ ವಲಯದ ಕಂಪನಿಗಳೇ ಗಣಿಗಾರಿಕೆ ವಹಿವಾಟು ನೋಡುವುದು ಉಕ್ಕು ಕೈಗಾರಿಕೆ ಸ್ಥಾಪನೆ, ರೈತರ ಹೊಲಗಳ ಗಣಿಗಾರಿಕೆ ಕಾನೂನುಬದ್ದ ಗೊಳಿಸುವುದು ಬೇರೆ. ಕಳಂಕಿತ ಮೂವರು ಮಂತ್ರಿಗಳನ್ನಾದರೂ (ರೆಡ್ಡಿ ಕಂಪನಿ) ವಜಾಗೊಳಸಬೇಕಿತ್ತು, ಅದಕ್ಕಾಗಿ ಪಟ್ಟು ಹಿಡಿಯಬೇಕಿತ್ತು. ಕನಿಷ್ಠ ಕ್ರಮಕ್ಕೆ ಆಡಳಿತ ಪಕ್ಷ ಸಿದ್ದವಾಗಲಿಲ್ಲ. ಬದಲಾಗಿ ಲೋಕಾಯುಕ್ತರ ವರದಿಯ ಮೇಲೆ ವರದಿ ತಯಾರಿಸಲು ಯಡಿಯೂರಪ್ಪ ಕ್ರಮ ವಹಿಸಿದರು. ಲೋಕಾಯುಕ್ತರ ಬಲವಾಗಿ ವಿರೋಧಿಸಿದರೂ ವಿರೋಧ ಪಕ್ಷಗಳಾದರೂ ಇದನ್ನು ತಡೆಯಲು ಮುಂದಾಗಲಿಲ್ಲ. ಇಲ್ಲಿ ಈ ಪಕ್ಷಗಳ ಒಳಗಿನ ಹಿತಾಸಕ್ತಿಗಳೂ ಸಾಕಷ್ಟು ಪರಿಣಾಮ ಬೀರುತ್ತವೆ. ಅಂತಿಮವಾಗಿ ಸಚಿವರಾದ ಜನಾರ್ಧನ ರೆಡ್ಡಿ, ಕರುಣಾಕರರೆಡ್ಡಿಗಳು ಬುದ್ಧಿ ಜೀವಿಗಳನ್ನು, ಮಾತ್ರವಲ್ಲ ವಿರೋಧ ಪಕ್ಷಗಳ ಶಾಸಕರನ್ನು ಅವ್ಯಾಚ್ಯವಾಗಿ ನಿಂದಿಸಿ, ಬೆದರಿಕೆ ಒಡ್ಡಿದ್ದಕ್ಕೂ ಯಡಿಯೂರಪ್ಪನವರು ಲಗಾಮು ಹಾಕಲಿಲ್ಲ.

ಹೀಗೆ ಜನರ ಪಾಲಿಗೆ ವ್ಯರ್ಥ ಅಧಿವೇಶನವಾಯಿತು. ಸರ್ಕಾರಕ್ಕೆ ಆರು ತಿಂಗಳೊಳಗಾಗಿ ಅಧಿವೇಶನ ನಡೆಯಲೇಬೇಕೆಂಬ ನಿಯಮ ಪೂರೈಸಿಯೂ ಆಯಿತು. ಆಡಳಿತಪಕ್ಷ ಬಿಜೆಪಿಯು ತನ್ನ ರಾಜಕೀಯ ಲಾಭದ ಲೆಕ್ಕಾಚಾರ ತಕ್ಕಮಟ್ಟಿಗಾದರೂ ಹೊಡೆದುಕೊಂಡಿತು.

ಅಧಿವೇಶನದಲ್ಲಿ ಇಂತಹ ಚರ್ಚೆ ಸಾಗುತ್ತಿದ್ದರೆ ರಾಜಧಾನಿ ಬೆಂಗಳೂರಿನ ಚಳಿಯಲ್ಲಿ ಹತ್ತು ದಿನಗಳಿಂದ ಭೂ ಮಾಪಕರ ಹೋರಾಟ ನಡೆದೇ ಇತ್ತು. ನಿವೇಶನ, ರೇಷನ್ ಕಾರ್ಡ್‌ಗೆ, ಸಿಪಿಐ(ಎಂ)ನ ಹೋರಾಟ. ಅಂಗನವಾಡಿ ಸಂಘಟನೆಗಳ ಚಳವಳಿ ನಡೆದೇ ಇದ್ದವು. ಖುದ್ದು ಬೆಳಗಾಗಿ ಜನ ಗದ್ದಲದ ನಡುವೆ ತಮ್ಮ ರಸ್ತೆ, ನೀರು, ಚರಂಡಿ, ಮನೆ, ರೇಷನ್‌ಕಾರ್ಡ್ ಬಗ್ಗೆ ಗರಂ ಆಗಿಯೇ ಪ್ರತಿಕ್ರಿಯಿಸಿ ರಂಗುರಂಗಿನ ಅಧಿವೇಶನದ ಜೊಳ್ಳನ್ನು ಹೊರಗಿಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ವಿಧಾನಸಭಾ ಅಧಿವೇಶನದ ಕಲಾಪಗಳು ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತಿವೆ ಎಂದು ಪತ್ರಿಕೆಯೊಂದು ಬರೆದಿದ್ದರೆ ಅರ್ಥ ಕಳೆದುಕೊಂಡವರು ಅಧಿವೇಶನದಲ್ಲಿದ್ದರೆ ಇನ್ನೇನಾಗುತ್ತದೆ. ಅದೇ ಆಗೋದು, ಆಗಿರೋದು.

.....ವಿಭಜನೆಯ ರಾಜಕಾರಣ

ಪುಟ 3 ರಿಂದ

ತಾಲೂಕನ್ನು ಘಟಕವಾಗಿ ಪರಿಗಣಿಸಿದ್ದು ಇತಿಹಾಸ. ಅಂತೂ ಗಡಿರೇಖೆ ದೇಶಾದ್ಯಂತ ನಿರ್ಣಯವಾಗಿ ಹಲವು ಸಮಸ್ಯೆಗಳ ನಡುವೆಯೂ ಒಪ್ಪಿಕೊಂಡಿರುವಾಗ, ಪುನಃ ಗಡಿವಿವಾದ ಕೆದಕುತ್ತಾ ಹೋಗುವುದು ಸರಿಯಲ್ಲ. ಒಂದೊಂದು ರಾಜ್ಯಕ್ಕೂ ಪುನಃ ಗಡಿ ನಿಗದಿ ಮಾಡುವುದು ಅಸಾಧ್ಯದ ಮಾತು. ಹೊಸ ಸಮಸ್ಯೆಗಳ ಉಲ್ಬಣಕ್ಕೆ ಚಾಲನೆ ನೀಡುವಂತಾಗುತ್ತದೆ. ಎರಡೂ ಭಾಷಿಕರು ಏನಿದ್ದರೂ ಭಾರತದ ಪ್ರಜೆಗಳೇ. ಹೀಗಿರುವಾಗಲೇ ಉದ್ಭವಿಸಿರುವ ಪ್ರಾಯೋಗಿಕ ಸಮಸ್ಯೆಗಳ ಇತ್ಯರ್ಥಕ್ಕೆ ಪ್ರಯತ್ನ, ಪರಸ್ಪರ ಭಾಷಿಕರ ನಡುವೆ ಬಾಂಧ್ಯ ಬೆಸೆವ, ಸಹಕಾರ ನೀಡುವ ಕ್ರಮಗಳೇ ಸದ್ಯದ ಪರಿಹಾರ.

ಅಧಿವೇಶನ ಮುಗಿಯುವ ವೇಳೆಗೆ ಈಗೇನೋ ಮುಖ್ಯಮಂತ್ರಿಗಳು ಮಹಾಜನ್ ವರದಿಯೇ ಅಂತಿಮ ಎಂದಿದ್ದಾರೆ. ಗಡಿ ಪ್ರಶ್ನೆ ಮುಗಿದ ಅಧ್ಯಾಯವೆಂದೆಲ್ಲಾ ಮಾತನಾಡಿದರೂ ಇವರ ಬತ್ತಳಿಕೆಗೆ ಯಾವಾಗ ಬೇಕಾದರೆ ಆಗ ಒಂದು ಬಾಣವಾಗಲಾರದು ಎಂದು ಹೇಳಲಾಗದು.

ಯಾಕೆಂದರೆ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಹಾಗೂ ಅದರ ಪೂರ್ವದಲ್ಲಿಯೂ ಭಾಷೆಯನ್ನು ತನ್ನ ಕೋಮುವಾದಿ ವಿಭಜನೆಯ ಅಜೆಂಡಾಕ್ಕೆ ತಕ್ಕಂತೆ ಬಳಸುತ್ತಾ ಬಂದಿದೆ. ಈಗಿನ ಯಡಿಯೂರಪ್ಪ ಸರ್ಕಾರ ನೆಲ-ಜಲ-ದ ಹೆಸರಿನಲ್ಲಿ ನೆರೆಹೊರೆ ರಾಜ್ಯಗಳ ಜೊತೆ ರಾಜ್ಯದ ಜನರನ್ನು ಎತ್ತಿಕಟ್ಟಲು ಹವಣಿಸುತ್ತಲೇ ಇದೆ. ಒಂದೆಡೆ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾದಂತೆ ಹಿಂದೂ - ಮುಸ್ಲಿಂ-ಕ್ರಿಶ್ಚಿಯನ್ ಮುಂತಾದ ಅಲ್ಪಸಂಖ್ಯಾತರ ವಿರುದ್ಧ ದಾಳಿ ನಡೆಸಲು ಧರ್ಮ-ಸಂಸ್ಕೃತಿ, ದೇಶಪ್ರೇಮಗಳ ಹೊದಿಕೆ ಬಳಸುವಾಗಲೇ ಭಾಷಾ ಸಂಕುಚಿತವಾದಿಗಳನ್ನು ಬೆಳೆಸುತ್ತಿದೆ. 'ಕನ್ನಡ'ದ ಹೆಸರಿನಲ್ಲಿ ಹೀಗೆಯೇ ಕಾನೂನು - ಸಂವಿಧಾನ ಉಲ್ಲಂಘಿಸುವ ಸಂಕುಚಿತವಾದಿಗಳನ್ನು (ದಾಳಿಕೋರರು) ಮುಂದೆ ಅಲ್ಪಸಂಖ್ಯಾ ಭಾಷಿಕರ ಮೇಲೂ ಬಳಸುವ ಹುನ್ನಾರ ಸಂಘ ಪರಿವಾರ - ಬಿಜೆಪಿಗಿದೆ. ಹಿಂದೆ ಉರ್ದು ಭಾಷಾ ವಾರ್ತೆ ಪ್ರಸಾರದ ಸಂದರ್ಭದಲ್ಲಿ ಇಂತಹುದೇ ಕೃತ್ಯಗಳನ್ನು ನಾವು ಕಂಡಿದ್ದೇವೆ. ಸಂಸ್ಕೃತದ ಹಿರಿಮೆಯನ್ನೇ ಸಾರುವ, ಹಿಂದಿ - ಹಿಂದು - ಹಿಂದುತ್ವ ಎನ್ನುವ ಸಂಘ ಪರಿವಾರದ ಘೋಷಿತ ಗುರಿ ಕನ್ನಡ, ತಮಿಳು, ತೆಲುಗಿನಂತಹ ಅಸಂಖ್ಯಾತ ಇತರೆ ಭಾರತೀಯ ಭಾಷೆಗಳನ್ನು ಮೂಲೆಗುಂಪಾಗಿಸುವ ತಂತ್ರವೂ ಆಗಿದೆ ಎಂಬುದನ್ನು ಎಚ್ಚರದಿಂದ ಗಮನಿಸಬೇಕು. ಒಂದೆಡೆ ಉದಾರೀಕರಣ-ಜಾಗತೀಕರಣದ ನೀತಿಗಳ ಜಾರಿ ಮೂಲಕ ಜನಭಾಷೆ - ಸಂಸ್ಕೃತಿಯನ್ನು ಕೊಲ್ಲುವುದು, ಇನ್ನೊಂದೆಡೆ ಕೋಮುವಾದಿ ಫ್ಯಾಸಿಸ್ಟ್ ನೀತಿಗಳಿಂದ ಜನ ಭಾಷೆ, ಸಂಸ್ಕೃತಿಗಳನ್ನು ಕೊಲ್ಲುವ ಪ್ರಕ್ರಿಯೆಗಳು ಹೆಣೆದುಕೊಂಡಿವೆ.

ಇಂತಹ ಸನ್ನಿವೇಶದಲ್ಲಿ ನಾಡಿನ ಜನತೆ ನಮ್ಮದೇ ಜನರ, ಸಾರ್ವಜನಿಕ ಸ್ವತ್ತಾಗಿಸುವ ಭೂಮಿಯನ್ನು, ಅಧಿಕಾರ ಶಾಹಿ, ರಾಜಕಾರಣಿಗಳ ಮತ್ತು ಭೂ ಮಾಫಿಯಾಗಳು, ವಿದೇಶಿ ಕಂಪನಿಗಳು, ದೇಶೀಯ ಗುತ್ತೇದಾರ - ಜಮೀನ್ದಾರರು ಕಬಳಿಸುವುದರ ವಿರುದ್ಧ ಹೋರಾಡಬೇಕಿದೆ. ನಮ್ಮದೇ ನದಿ ಹಳ್ಳ ಕೊಳ್ಳಗಳನ್ನು, ನೀರನ್ನು ಖಾಸಗೀಕರಿಸುವ ಹುನ್ನಾರಗಳ ವಿರುದ್ಧವೂ ಹೋರಾಡಬೇಕಿದೆ. ಆಗಲೇ ನೆಲ-ಜಲ ರಕ್ಷಣೆಯಂತಹ 'ಸಪ್ತ ಅಂಶಗಳನ್ನು' ಅಂಗೀಕರಿಸಿ ಹೋರಾಡುವುದಾಗಿ ಹೇಳಿಕೊಳ್ಳುವ ಯಡಿಯೂರಪ್ಪ ಸರ್ಕಾರದ ಒಳ ಉದ್ದೇಶಗಳ ಬಗ್ಗೆ ಜಾಗೃತಿಯೂ ಅಗತ್ಯ.

ಇಂತಹ ವಿಭಜನೆಯ ರಾಜಕಾರಣವನ್ನು ಲೋಕಸಭೆ, ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳ ಮೇಲೆ ಕಣ್ಣಿರಿಸಿ ನಡೆಸಲಾಗುತ್ತಿದೆ ಎಂಬುದು ಇಲ್ಲಿ ಗುರುತಿಸಬೇಕಿದೆ. ಅದನ್ನು ಸೋಲಿಸಬೇಕಿದೆ.

ಹಳ್ಳಕ್ಕೆ ಬೀಳದ ತೋಳಗಳು

ಕ್ಯಾತೆ

• ತ್ರಿ

ಸೊರಕೊಪ್ಪ ಬಂಗಾರಪ್ಪನವರು ಸೈಕಲ್ ಬಿಟ್ಟು ಕೈ ಹಿಡಿಯುತ್ತಾರಂತೆ. ಅಲ್ಲಿಗೆ ಅವರ ಒಂದು ಪ್ರದಕ್ಷಿಣೆ ಸಂಪೂರ್ಣ ವಾದಂತಾಗುತ್ತದೆ. ಆದರೆ ಈಗಾಗಲೇ ತುಂಬಿ ತುಳುಕುತ್ತಿರುವ ಕಾಂಗ್ರೆಸ್ ನಾಯಕರ ದಂಡಿನಲ್ಲಿ ಇವರೂ ಇನ್ನೊಬ್ಬ ದಂಡನಾಯಕರಾಗುತ್ತಾರೋ ಅಥವಾ ಸಿದ್ಧರಾಮಯ್ಯನವರ ಹಾಗೆ 'ಸ್ಥಾನ- ಮಾನ', 'ಸ್ಥಾನ- ಮಾನ', ಅಂತ ಜಪ, ತಪಸ್ಸು ಮಾಡುತ್ತಾರೋ ಗೊತ್ತಿಲ್ಲ.

ಜಾತ್ಯಾತೀತ ಜನತಾದಳದಲ್ಲಿ ಉಪ ಮುಖ್ಯಮಂತ್ರಿಯಾಗಿ'ಸ್ಥಾನ- ಮಾನ', ಎರಡನ್ನೂ ಪಡೆದಿದ್ದ ಸಿದ್ಧರಾಮಯ್ಯ 'ಇರುವುದೆಲ್ಲವ ಬಿಟ್ಟು ಇಲ್ಲದುದರೆಡೆಗೆ ತುಡಿವುದೇ ಜೀವನ' ಎಂಬ ಕವಿವಾಣಿಯಂತೆ ಇದ್ದ 'ಸ್ಥಾನ- ಮಾನ', ಬಿಟ್ಟು ಇಲ್ಲದ್ದಕ್ಕಾಗಿ ಹುಡುಕಾಟ ನಡೆಸುತ್ತ ಅಲೆದಾಡುತ್ತಿದ್ದಾರೆ. ಬಿ ಜೆ ಪಿ ಗೆ ಕಡೆಗೆ ಹಾರುವ ಮಾತೂ ಕೇಳಿ ಬರುತ್ತಿದೆ. ಬಿ ಜೆ ಪಿ ಗೆ ಸೇರಿಕೊಂಡರೆ (ಮಾರಿ ಕೊಂಡರೆ?) ಯಾವುದಾದರೂ ಚಿಲ್ಲರೆ ಸ್ಥಾನ ಸಿಕ್ಕ ಬಹುದು (ಅಲ್ಲಿ ಉಪ ಮುಖ್ಯ ಮಂತ್ರಿ - ಅಪ ಮುಖ್ಯ ಮಂತ್ರಿ ಸ್ಥಾನವಂತೂ ಅಲ್ಲ) ಆದರೆ ಖಂಡಿತ ಮಾನವಂತೂ ಸಿಗಲಾರದು. ಇದು ಸತ್ಯಂ!

'ಸತ್ಯಂ' ಎಂದರೆ ಆ ರಾಮ ಲಿಂಗ ರಾಜನ ಸತ್ಯವ್ಮೇ ಕಾಣಿಸುತ್ತದೆ. ಪಾಪ ರಾಜು! ಅಷ್ಟೆಲ್ಲಾ ದುಡಿದು (?) ಕಡೆಗೆ ಸತ್ಯ ಹೇಳಿ ಸಿಕ್ಕಿ ಬಿದ್ದನಲ್ಲ! ಹಾಗೇ ಮುಂದುವರದೂ.., ವರದೂ.., ನಮ್ಮ ಗಣಿ ಧಣಿಗಳ ಹಾಗೇ ಮೆಲ್ಲಗೆ ರಾಮ ನಾಮದ ಪಕ್ಷವನ್ನು (ಸೇರಿ) ಕೊಂಡಿದ್ದರೆ ಅವರ ಹಾಗೇ ರಾಜರ ಹಾಗೇ ಇರಬಹುದಾಗಿತ್ತು. ರಾಮ ನಾಮ ಪಕ್ಷ ನಂಬಿದರೆ ಎಂಥ ಅಪರಾಧಕ್ಕೂ ಕೃಷ್ಣ ಜನ್ಮಸ್ಥಾನದ ಭಯವಿಲ್ಲ! 'ಬಾರಾ ಖೂನ್ ಮಾಫಿ'!. (ಇತ್ತೀಚಿಗೆ ನಮ್ಮ ಘನ ಸರಕಾರ ರಾಮನ ಭಂಟರ ಮೇಲಿನ ಕೇಸುಗಳನ್ನು ವಾಪಸ್ ತೆಗೆದುಕೊಂಡಿದ್ದು ನೆನಪಾಯಿತೇ?).

ಆಶ್ರಿತರ ರಕ್ಷಣೆ ರಾಮ ನಾಮ ಪಕ್ಷದ ಧರ್ಮ! ಈಗ ನೋಡಿ ಲೋಕಾಯುಕ್ತರ ವರದಿಯನ್ನು ತಮ್ಮ ರಾಜಕೀಯಕ್ಕೆ ಎಷ್ಟು ಬೇಕೋ ಅಷ್ಟು ಹೊರಬಿಟ್ಟು, ಮುಚ್ಚಿಡಬೇಕಾದುದನ್ನು ಭದ್ರವಾಗಿ ಮುಚ್ಚಿಟ್ಟು, ಎಂತೆಂಥ ವರದಿಬೇಕೋ ಅಂಥದನ್ನು ತಯಾರಿಸಿ ಗಣಿಯಲ್ಲಿ ತಿಪ್ಪೆ ಸಾರಿಸಿ, ಗಣಿ ಕಾರಣಿಗಳನ್ನು ರಕ್ಷಣೆಗೈದರು ನಮ್ಮ ರಾಮ ನಾಮದ ಪಕ್ಷದ ಸತ್ಯಂವಂತರು. (ಲೋಕಾಯುಕ್ತರ ಬಲೆಗೆ ಬಿದ್ದ ತಿಮಿಂಗಲ ಗಳೂ ಈ ರಾಮ ನಾಮದ ಪಕ್ಷದ ಮೊರೆ ಹೋದರೆ ಅವರಿಗೂ ಅಭಯಾಶ್ರಯ ನೀಡಿಲ್ಲವೇ?)

ಇಂಥ 'ಸತ್ಯಂ'ಗಳನ್ನು ಬಯಲಿಗೆಳೆಯಬೇಕಾದ ನಮ್ಮ ಟೀ ವಿ , ಪತ್ರಿಕೆಗಳೆಂಬ ಮಾಧ್ಯಮಗಳು, 'ರಾಜಾಶ್ರಿತ'ರಾಗಿ, 'ರಾಮ ನಾಮ ಪಕ್ಷ' ಪಾತಿಗಳಾಗಿ, ಅವರು ದಯಪಾಲಿಸುತ್ತಿರುವ ಪ್ರಸಾದವನ್ನು ಭಕ್ತಿ ಪೂರ್ವಕವಾಗಿ ಸ್ವೀಕರಿಸಿ ಮುಕ್ತಿ ಪಡೆದಿವೆ. 'ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು' ಎನ್ನುವ ಗಾದೆಯಂತೆ, ತೋಳ ಹಳ್ಳಕ್ಕೆ ಬಿದ್ದಾಗ ತಮ್ಮದೂ ಒಂದು ಕಲ್ಲು ಎಸೆಯುವ ಕೆಲಸ ಮಾತ್ರ ಮಾಡುತ್ತಿವೆ. ಹಳ್ಳಕ್ಕೆ ಬೀಳದ, ಬೀಳಿಸುವ ತೋಳಗಳ ತಂಟೆಗೆ ಅವು ಹೋಗುತ್ತಿಲ್ಲ!

ವೃತ್ತಿ ಶಿಕ್ಷಣ (ಸಿಇಟಿ) ಸೀಟು ಹಂಚಿಕೆ

ಹಣ ಲೂಟಿಗೆ ಅವಕಾಶ

ಮಾಜಿ ಎಬಿವಿಪಿ ಮುಖಂಡರೇ ಎಲ್ಲಾ ಶಿಕ್ಷಣ ಮಂತ್ರಿಗಳಾಗಿರುವಾಗ ರಾಜ್ಯದಲ್ಲಿ ಉಚಿತ ಸೀಟು ಕಡಿತವಾಗಿದೆ!!

ಪಾವತಿ ಸೀಟುಗಳು ಹೆಚ್ಚಾಗಿ ಮಾಲೀಕರ ಜೇಬು ತುಂಬಲಿದೆ

■ ಅನಂತನಾಯಕ್.ಎನ್

ಮುಂಬರುವ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರ ಖಾಸಗಿ ಆಡಳಿತ ಮಂಡಳಿಯವರ ಜೊತೆ ಮಾತುಕತೆ ನಡೆಸಿ 50:50 (ಇಂಜಿನಿಯರಿಂಗ್) ಪ್ರಮಾಣದಲ್ಲಿ ಸೀಟು ಹಂಚಿಕೆ ತೀರ್ಮಾನ ಮಾಡಿದೆ. ಕಳೆದ ವರ್ಷ 55:45(ಇಂಜಿನಿಯರಿಂಗ್) ಪ್ರಮಾಣದಲ್ಲಿ ಸೀಟು ಹಂಚಿಕೆ ನಡೆದಿತ್ತು. ಆದರೆ ಈ ವರ್ಷ ಸರ್ಕಾರವೇ ಶೇ.5 ರಷ್ಟು ಸೀಟುಗಳನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟಿದೆ. ಅಂದರೆ ಸರ್ಕಾರಿ ಕೋಟಾದ 2750 ಕ್ಕೂ ಹೆಚ್ಚಿನ ಸೀಟುಗಳು ಖಾಸಗಿಯವರ ಪಾಲಾಗಲಿದ್ದು ಬಡ ವಿದ್ಯಾರ್ಥಿಗಳು ವಂಚನೆಗೆ ಒಳಗಾಗಲಿದ್ದಾರೆ. ಜೊತೆಗೆ ವಿವಿಧ ವರ್ಗಗಳಿಗೆ ನೀಡಲಾಗುವ ಮೀಸಲಾತಿಯ ಸೀಟುಗಳ ಸಂಖ್ಯೆಯು ಕಡಿಮೆಯಾಗಲಿದೆ (ಎಸ್.ಸಿ./ಎಸ್.ಟಿ/ಓಬಿಸಿ, ಮತ್ತು ಇತ್ಯಾದಿ) ಸರ್ಕಾರಿ ಕೋಟಾದ ಸೀಟುಗಳಿಗೆ 10 ಸಾವಿರ ರೂ. ಶುಲ್ಕ ಕಡಿಮೆ ಮಾಡಲಾಗಿದೆ ಎಂದು ಭಾಸವಾದರು ಶೇ.5 ರಷ್ಟು ಸೀಟು ಬಿಟ್ಟುಕೊಟ್ಟಿರುವುದರಿಂದ ಖಾಸಗಿ ಕಾಲೇಜ್‌ನವರಿಗೆ ವಿದ್ಯಾರ್ಥಿಗಳಿಂದ ಹೆಚ್ಚಿಗೆ ಹಣ ಸುಲಿಗೆ ಮಾಡಲು ಅವಕಾಶ ಸಿಕ್ಕಿದೆ. ಆಡಳಿತ ಮಂಡಳಿಯ ಕೋಟಾದ ಒಂದು ಸೀಟಿಗೆ 1.25 ಲಕ್ಷ ಸರ್ಕಾರಿ ನಿಗದಿಗೊಳಿಸಿದ ಶುಲ್ಕ ಕಟ್ಟಬೇಕಿದೆ. ಅದರ ಜೊತೆಗೆ ಬಿಲ್ಡಿಂಗ್ ಫಂಡ್, ಅಭಿವೃದ್ಧಿ ಇತ್ಯಾದಿ ಹೆಸರಿನಲ್ಲಿ ಹೇರಳವಾಗಿ ಹಣ ವಸೂಲಿ ನಡೆಯುತ್ತದೆ,ಫೀ ಕಡಿಮೆ ಎನ್ನುವ ತಂತ್ರ ರೂಪಿಸಿ ಸರ್ಕಾರಕ್ಕೆ 'ಮಂಕು ಬೂದಿ ಎರಚುವಲ್ಲಿ' ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಯಶಸ್ವಿಯಾಗಿವೆ.

ಶಿಕ್ಷಣ ಸಚಿವರಿಗೆ ಇದು ಅರ್ಥ ಆಗಲಿಲ್ಲವೇ?

'ಅರ್ಥ' ಆಗಿದೆ. ಆ ಕಾರಣಕ್ಕಾಗಿಯೇ ಅವರು ಸರ್ಕಾರದ ಶೇ.5 ರಷ್ಟು (2750 ಕ್ಕೂ ಹೆಚ್ಚು) ಸೀಟುಗಳನ್ನು ಖಾಸಗಿಯವರಿಗೆ ಬಿಟ್ಟು ಕೊಟ್ಟಿದ್ದಾರೆ, ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರೇಗೌಡ ನೇತೃತ್ವದಲ್ಲಿ ಕಾಮೆಡ್‌ಕೆ ಮುಖಂಡರುಗಳ ಸಭೆ ನಡೆಸಿ ಈ ತೀರ್ಮಾನಕ್ಕೆ ಬಂದಿದ್ದಾರೆ. ಸಚಿವರಿಗೆ ಖಾಸಗಿ ಕಾಲೇಜುಗಳು ಶಹಬ್ಬಾಸ್‌ಗಿರಿ ಪಡೆಯಲು ಬಡ ದಲಿತ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿ ಖಾಸಗಿಯವರ ಪರ ತೀರ್ಮಾನ ಪ್ರಕಟಿಸಿದ ಇವರ ನಿಜ ಬಣ್ಣ ಬಯಲಾಗಿದೆ, ಇವರು ಶ್ರೀಮಂತರ ಪರ ಎಂಬುದು ಸಾಬೀತಾಗಿದೆ. ಪರೀಕ್ಷೆ ತಯಾರಿ ಸಂದರ್ಭದಲ್ಲಿ ಸರ್ಕಾರ ಈ ತರಹದ ಚರ್ಚೆ ಮಾಡಿಸುವುದರ ಮೂಲಕ ವಿದ್ಯಾರ್ಥಿಗಳ ಮನಸ್ಥಿತಿ ಹದಗೆಡುತ್ತಿದೆ.

ಯಾಕೀ ಅನ್ಯಾಯ?

ವೃತ್ತಿ ಶಿಕ್ಷಣ ಇಂದು ಗಂಭೀರ ಬಿಕ್ಕಟ್ಟಿನಲ್ಲಿದೆ. ನಾಯಿಕೊಡೆಗಳಂತೆ ಎದ್ದಿರುವ ಖಾಸಗಿ ಕಾಲೇಜುಗಳು ಹಣ ವಸೂಲಿಯ ಕೇಂದ್ರಗಳಾಗಿ ನಿಂತಿವೆ. ಜವಾಬ್ದಾರಿಯುತವಾಗಿ ವರ್ತಿಸಬೇಕಿದ್ದ ಸರ್ಕಾರ ಹಣ ಸುಲಿಗೆಕೋರರ ಪರವಾಗಿ ನಿಂತಿದೆ. ಏಕೆಂದರೆ ಖಾಸಗಿ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜ್‌ಗಳ ಒಡೆಯರು ಈ ಸರ್ಕಾರದಲ್ಲಿ ಮಂತ್ರಿ, ಶಾಸಕರು ಮತ್ತು ಇವರ ಬೆಂಬಲಕ್ಕಿರುವ ಮಠಾಧೀಶರುಗಳು, ಹೀಗಿದ್ದಾಗ, ಈ ಸರ್ಕಾರ ಬಡವರ ಪರ ನಿಲ್ಲೋದಕ್ಕೆ ಸಾಧ್ಯವಿದೆಯೇ? ಪ್ರಸ್ತುತವಾಗಿ ರಾಜ್ಯದಲ್ಲಿ 9 ಸರ್ಕಾರಿ, 12 ಅನುದಾನಿತ, 130 ಖಾಸಗಿ ಅನುದಾನಿತ ಇಂಜಿನಿಯರಿಂಗ್, 10 ಸರ್ಕಾರಿ, 29 ಖಾಸಗಿ ಅನುದಾನರಹಿತ ವೈದ್ಯಕೀಯ, 2 ಸರ್ಕಾರಿ, 38 ಖಾಸಗಿ ದಂತ ವೈದ್ಯಕೀಯ ಕಾಲೇಜುಗಳಿವೆ. ಈ ಅಂಕಿಅಂಶ ಬೆರಳೆಣಿಕೆಯಷ್ಟು ಸರ್ಕಾರಿ ಕಾಲೇಜುಗಳು ಇರುವುದನ್ನು ತೋರಿಸುತ್ತದೆ. ಆ ಕಾರಣಕ್ಕಾಗಿ ಖಾಸಗಿ ಕಾಲೇಜುಗಳು ಸುಲಿಗೆ ಕೇಂದ್ರಗಳಾಗಿವೆ. ಸರ್ಕಾರಿ ಕಾಲೇಜುಗಳನ್ನು ಸ್ಥಾಪಿಸದೆ ಖಾಸಗಿಯವರಿಗೆ ಅವಕಾಶ ನೀಡಿರುವುದು ಈ ಅನ್ಯಾಯಕ್ಕೆ ಮುಖ್ಯ ಕಾರಣ.

ಹಗಲು ದರೋಡೆ

ಸರ್ಕಾರವೇ ಲಕ್ಷಾಂತರ ರೂಪಾಯಿ ಶುಲ್ಕ ನಿಗದಿ ಮಾಡುತ್ತದೆ. ಜೊತೆಗೆ ಖಾಸಗಿ ಕಾಲೇಜುಗಳು ಬೇರೆ ಬೇರೆ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ವಸೂಲಿ ಮಾಡುತ್ತಿವೆ. ಬಡ-ದಲಿತ-ಹಿಂದುಳಿದ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಗಗನ ಕುಸುಮವಾಗಲಿದೆ. ಸರ್ಕಾರ ನಿರ್ದಿಷ್ಟವಾಗಿ ಶುಲ್ಕ ನೀತಿಗಾಗಿ ಕಾನೂನು ರೂಪಿಸದಿರುವುದು ಖಾಸಗಿ ಕಾಲೇಜುಗಳಿಗೆ ವಸೂಲಿ ಮಾಡಲು ಪರವಾನಿಗೆ ನೀಡಿದಂತಾಗಿದೆ. ದುಬಾರಿ ಶುಲ್ಕ ಕಟ್ಟಲಾಗದೆ ಬಡ ಕುಟುಂಬದ ವಿದ್ಯಾರ್ಥಿಗಳು ಈ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಬಿಡುಗಡೆಯಾಗದ ಸಬ್ಸಿಡಿ ಹಣ ಬಿಜೆಪಿ ಸರ್ಕಾರದ ಬಣ್ಣ ಬಯಲು

2005-06 ರಲ್ಲಿ ವೃತ್ತಿ ಶಿಕ್ಷಣ ಶುಲ್ಕ ಏರಿಕೆ ವಿರೋಧಿಸಿ ಎಸ್‌ಎಫ್‌ಐ ಸೇರಿದಂತೆ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದರು. ವಿದ್ಯಾರ್ಥಿಗಳ ಹೋರಾಟದ ದಿಕ್ಕು ತಪ್ಪಿಸಲು ಖಾಸಗಿ ಕಾಲೇಜ್‌ಗಳಿಗೆ ತೃಪ್ತಿಪಡಿಸಲು ಕೌನ್ಸಿಲಿಂಗ್ ಮೂಲಕ ಖಾಸಗಿ ಕೋಟಾದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸಬ್ಸಿಡಿ ರೂಪದಲ್ಲಿ ಸರ್ಕಾರವೇ ಹಣ ಭರಿಸುತ್ತದೆ ಎಂದು ಅಂದಿನ ಶಿಕ್ಷಣ ಸಚಿವರಾಗಿದ್ದ ಬಿಜೆಪಿ ನಾಯಕ ಡಿ.ಹೆಚ್. ಶಂಕರಮೂರ್ತಿ ಆದೇಶ ಮಾಡಿದ್ದರು.


ಪುಟ 10ಕ್ಕೆ

ವಸತಿ - ನಿವೇಶನ - ರೇಶನ್‌ಗಾಗಿ

ನಿರಂತರ ಧರಣಿ

ಬೆಂಗಳೂರಿನ ಬಡವರು, ಕಾರ್ಮಿಕರು, ನೌಕರರು, ದಲಿತರು, ಮಾತ್ರವಲ್ಲ ಮಧ್ಯಮ ವರ್ಗದವರೂ ಸಹ ಬದುಕುವುದು ಕಷ್ಟವಾಗಿದೆ. ಆಹಾರ ಪದಾರ್ಥಗಳ ಬೆಲೆಗಳು ಹೆಚ್ಚಾಗಿವೆ. ಸಾರಿಗೆ ದುಬಾರಿಯಾಗಿದೆ. ಆರ್ಥಿಕ ಬಿಕ್ಕಟ್ಟಿನ ನೆಪದಲ್ಲಿ ದುಡಿದು ಬದುಕುವ ಜನರ ಮೇಲೆ Lay off, Pay off, ಕೆಲಸದ ಕಡಿತ ಇತ್ಯಾದಿ, ಹೆಸರಲ್ಲಿ ಮತ್ತಷ್ಟು ಹೊರೆ ಹಾಕಲಾಗುತ್ತಿದೆ. ಬಾಡಿಗೆಗಳನ್ನು ಕಟ್ಟಲಾಗದ ಪರಿಸ್ಥಿತಿ 'ಗಾಯದ ಮೇಲೆ ಬರೆ' ಎಂಬಂತೆ ಬಿಬಿಎಂಪಿಯು ಹೊಸ ತೆರಿಗೆ ಪದ್ಧತಿ ಮೂಲಕ ಹೆಚ್ಚು ಸುಲಿಗೆ ಮಾಡಲು ಹೊರಟಿದ್ದು. ವಸತಿ, ನಿವೇಶನದ ಸಮಸ್ಯೆಗಳು, ಆಹಾರ ಸಮಸ್ಯೆಗಳು ತೀವ್ರಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ನಿರಂತರವಾದ ಹೋರಾಟಗಳನ್ನು ನಡೆಸುತ್ತಿದೆ. ಹಿಂದಿನ ಸಮ್ಮಿಶ್ರ ಸರ್ಕಾರವಾಗಲೀ, ಈಗ ಬಿಜೆಪಿ ಸರ್ಕಾರವಾಗಲೀ ಯಾವುದೇ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಂಡಿಲ್ಲ. ಕೇವಲ ಚುನಾವಣಾ ದೃಷ್ಠಿಯಲ್ಲಿ ಬರೀ ಪೊಳ್ಳು ಘೋಷಣೆಗಳನ್ನು ನೀಡುತ್ತಿದೆ.

ಇಂತಹ ಸ್ಥಿತಿಯಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಜನವರಿ 20 ರಿಂದ ಆರಂಭಿಸಿದೆ.



ಬೇಡಿಕೆಗಳು

1. ಸದನ ಸಮಿತಿ ಗುರುತಿಸಿರುವ 41 ಸಾವಿರ ಎಕರೆ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ಹರಾಜು ಹಾಕಬಾರದು. ಹರಾಜು ನಿಲ್ಲಿಸಬೇಕು. ಖಾಸಗಿ ಕುಳಗಳಿಗೆ ಭೂಮಿ ಮಾರುವ ಹುನ್ನಾರದ ಕರ್ನಾಟಕ ರಾಜ್ಯ ಸರ್ಕಾರಿ ಭೂಮಿಗಳ ನಿಗಮ ಸ್ಥಾಪನೆಯನ್ನು ರದ್ದುಪಡಿಸಬೇಕು.
2. ಒತ್ತುವರಿ ಮಾಡಿರುವ ಗುಡಿಸಲು ವಾಸಿಗಳು ಮತ್ತು ಭೂರಹಿತ ರೈತರನ್ನು ಹೊರತುಪಡಿಸಿ, ಉಳಿದೆಲ್ಲಾ ಭೂಗಳ್ಳರನ್ನು ಶಿಕ್ಷಿಸಲು ಕ್ರಮ ಕೈಗೊಳ್ಳಬೇಕು.
3. ವಾಪಸ್ಸು ಪಡೆದ ಭೂಮಿಯಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡಲು ಮತ್ತು ಸಾರ್ವಜನಿಕ ಉದ್ದೇಶಗಳಿಗೆ (ಕ್ರೀಡಾಂಗಣ, ಪಾರ್ಕ್, ಶಾಲೆ, ಆಸ್ಪತ್ರೆ ಇತ್ಯಾದಿ) ಬಳಸಬೇಕು.
4. ಒಂದು ಕ್ಷೇತ್ರಕ್ಕೆ 5 ಸಾವಿರ ನಿವೇಶನಗಳನ್ನು ನೀಡುತ್ತೇವೆಂದಿರುವ ಬಿಜೆಪಿ ಸರ್ಕಾರದ ಸಂಪುಟ ತೀರ್ಮಾನ ಅದನ್ನು ಕೂಡಲೇ ಜಾರಿಗೊಳಿಸಬೇಕು.
5. ಬೆಂಗಳೂರು ಎ-1 ನಗರ ಎಂಬ ಆಧಾರದಲ್ಲಿ ಎಲ್ಲ ಸಂಘಟಿತ-ಅಸಂಘಟಿತ ಕಾರ್ಮಿಕರು-ನೌಕರರಿಗೆ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಿಸಬೇಕು.
6. ಬಿಬಿಎಂಪಿಯ ಹೊಸ ತೆರಿಗೆ ವಿಧಾನದಿಂದ ಮನೆ ಬಾಡಿಗೆಗಳು ತೀವ್ರವಾಗಿ ಹೆಚ್ಚಲಿದ್ದು ಬಾಡಿಗೆ ನಿಯಂತ್ರಣವನ್ನು ಜಾರಿಗೆ ತರಬೇಕು.
7. ಬಿಜೆಪಿಯ ಚುನಾವಣಾ ಪೂರ್ವ ಭರವಸೆಯಂತೆ 2 ರೂ.ಗೆ ಕೆಜಿ ಅಕ್ಕಿಯನ್ನು ಕೂಡಲೇ ವಿತರಿಸಬೇಕು. ಮತ್ತು ಬಿಪಿಎಲ್ ಕಾರ್ಡ್ ನೀಡಲು ಆದಾಯ ಮಿತಿಯನ್ನು 30 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು.
8. ಜನರ ಅನ್ನ ಕದಿಯುವ ಯೂನಿಟ್ ಪದ್ಧತಿಯನ್ನು ಕೈಬಿಡಬೇಕು.
9. ಎಲ್ಲರಿಗೂ ಅಗತ್ಯ ಆಹಾರ ಪದಾರ್ಥಗಳನ್ನು ನೀಡುವಂತಾಗಲು ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.



ಮೊನ್ನೆ ಮಂಗಳೂರಿನಲ್ಲಿ ನಡೆದ ಕಟ್ಟಡ ಕಾರ್ಮಿಕರ ಸಮ್ಮೇಳನ ಕರಾವಳಿಯ ಹಿಂದಿನ ಕೆಂಬಾವುಟದ ವೈಭವವನ್ನು ನೆನಪಿಗೆ ತಂದಿದೆ. ಕೋಮುವಾದಿಗಳ ಸವಾಲನ್ನು ಕೈಗೆತ್ತಿಕೊಳ್ಳುವ ಉತ್ಸಾಹ ಮೂಡಿಸಿದೆ.

ಕಟ್ಟಡ ಕಟ್ಟುವವರು ಇತಿಹಾಸ ನಿರ್ಮಿಸಿದರು.....

ವಸಂತ ಆಚಾರಿ

ಕಡಲತಡಿಯ ಪ್ರಮುಖ ನಗರ ಮಂಗಳೂರು ರಾಣಿ ಅಬ್ಬಕ್ಕಳ ಸಾಮ್ರಾಜ್ಯಶಾಹಿ ವಿರೋಧಿ ಧೀರ ಪರಂಪರೆಯನ್ನು ತನ್ನ ಇತಿಹಾಸ ಗರ್ಭದೊಳಗಿರಿಸಿಕೊಂಡಿರುವ ಈ ನಗರವು ದುಡಿಮೆಗಾರರ ಚಳುವಳಿ ಹೋರಾಟದ ರಣಭೂಮಿಯೂ ಹೌದು. 'ಕೆಂಪಿ'ನ ಕಂಪನ್ನು ಇಡೀ ರಾಜ್ಯಕ್ಕೆ ಪಸರಿಸಿದ ಮಹಾನ್ ಚಳುವಳಿಗಾರರಾದ ಕಾಂ:ಎ.ಕೃಷ್ಣಶೆಟ್ಟಿ, ಕಾಂ:ಪಿ.ರಾಮಚಂದ್ರರಾಯರು ಇಲ್ಲಿಯವರೇ. ಹಲವು ಭಾಷೆ ಹಲವು ಮತ, ಧರ್ಮಗಳ ಅಪೂರ್ವ ಸಂಗಮಭೂಮಿ ಮಂಗಳೂರು. ಶಾಂತಿ ಕೋಮು ಸೌಹಾರ್ದತೆಯ ನೆಲೆ ಬೀಡು. ಇದು ಅಂದಿನ ಗತವೈಭವದ ಮಂಗಳೂರು.

ಆದರೆ ಇಂದು? ಸಂಘ ಪರಿವಾರದ ಕೋಮುವಾದಿ ವಿಷಪ್ರಾಶಾನದಿಂದ ಮಂಗಳೂರು ಸೇರಿದಂತೆ ಕಡಲತಡಿಯಿಡೀ ಹಾಲಹಲವಾಗಿದೆ. ಕೋಮುವಾದಿ ರಕ್ಕಸರ ಅರ್ಭಟಕ್ಕೆ ನಗರ ನಲುಗಿ ಹೋಗಿದೆ. ಫ್ಯಾಸಿಸಂನ ವಾಸನೆಯು ಉಸಿರುಗಟ್ಟಿಸಿದೆ. ಮತ ಧರ್ಮಗಳ ಹೆಸರಿನಲ್ಲಿ ನರಬೇಟೆಯೇ ಇಲ್ಲಿ ನಡೆಯುತ್ತಿದೆ.

'ನಾಳೆ ಇದೆ' - ಭರವಸೆ

ಇಂತಹ ಮಂಗಳೂರಿಗೆ ಮತ್ತೆ ನೆಮ್ಮದಿಯ ನಾಳೆಗಳಿವೆ ಎಂಬ ಭರವಸೆ ದೊರೆತಿದ್ದು ಜನವರಿ 18 ಮತ್ತು 19 ರಂದು. ಕೋಮು ವಿದ್ವೇಷದ ನೆತ್ತರಿನ ವಾಸನೆಯಿಂದ ಕಂಗೆಟ್ಟಿದ್ದ ಮಂಗಳೂರು ಮತ್ತೆ ಕೆಂಪಿನ ಕಂಪಿನಿಂದ ಪುಳಕಿತಗೊಂಡು ಸ್ವಲ್ಪ ಸಮಾಧಾನದ ನಿಟ್ಟುಸಿರು ಬಿಟ್ಟಿತು. ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರಥಮ ರಾಜ್ಯ ಸಮ್ಮೇಳನ ನಡೆದ ಮಂಗಳೂರು ನಗರವಿಡೀ ಕೆಂಬಾವುಟಗಳು, ಬಾನೆತ್ತರದಲ್ಲಿ ಪಟಪಟನೆ ಹಾರಾಡಿ ಕೋಮುವಾದಿಗಳ ಎದೆಯಲ್ಲಿ ನಡುಕ ಹುಟ್ಟಿಸಿದವು. ಕಟ್ಟಡ ಕಟ್ಟುವವರು ನಿಜಕ್ಕೂ ಇತಿಹಾಸ ಸೃಷ್ಟಿಸಿದರು. ಎರಡು ದಿನಗಳ ಸಮ್ಮೇಳನ ಸಮಾರೋಪವಾಗಿ ಜ.13 ರಂದು ಸಂಜೆ ನಡೆದ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯ ಅಭೂತಪೂರ್ವ ಯಶಸ್ಸು ಮಂಗಳೂರಿಗೆ ಗತವೈಭವದ ನೆನಪನ್ನು ಮರುಕಳಿಸಿತು. ಜ್ಯೋತಿ ವೃತ್ತದಿಂದ ಸಂಜೆ 3.30ಕ್ಕೆ ಕಟ್ಟಡ ಕಾರ್ಮಿಕರ ಆಕರ್ಷಕ ಹಬ್ಬದ ವಾತಾವರಣದಲ್ಲಿ ಮುನ್ನಡಿಯಿಟ್ಟಿತು. ಒಂದು ಮುಷ್ಟಿಯಲ್ಲಿ ಕೆಂಬಾವುಟ, ಇನ್ನೊಂದು ಮುಷ್ಟಿ ಆಕಾಶದೆಡೆಗೆ ಗುರಿ ಮಾಡಿ ಆವೇಶಭರಿತ ವೀರಾವೇಶದ ಘೋಷಣೆ, ಫ್ಯಾಸಿಸ್ಟ್ ಶಕ್ತಿಗಳಿಗೆ ತಾಕೀತು ಹಾಕಿದಾಗ ಕೋಮು ವಿದ್ವೇಶದಿಂದ ಬೆಂದು ಹೋಗಿದ್ದ ಮಂಗಳೂರಿನ ಪ್ರಜ್ಞಾವಂತ ಮನಸ್ಸುಗಳಿಗೆ ಆಹ್ಲಾದದ ಸಿಂಚನ. ಅದರಲ್ಲೂ ಮೆರವಣಿಗೆಯಲ್ಲಿ ಶೇಕಡಾ ನೂರರಷ್ಟು ಯುವಜನರ ಪಡೆಯ ಹಾಜರಾತಿಯಿಂದ ಇಮ್ಮಡಿ ಉತ್ಸಾಹ.

ಉದ್ದೇಶಪೂರ್ವ ವಾಗಿಯೇ ಇತರ ಕಾರ್ಮಿಕ ವಿಭಾಗವನ್ನು ಮೆರವಣಿಗೆಯಿಂದ ಬದಿಗಿರಿಸಿ ಕಟ್ಟಡ ಕಾರ್ಮಿಕರಷ್ಟನ್ನೇ ಕೇಂದ್ರೀಕರಿಸಲಾಗಿದ್ದರೂ ಭರವಸೆ ಹುಸಿಯಾಗಲಿಲ್ಲ. ನಿರೀಕ್ಷೆಗೂ ಮೀರಿ ನಾಲ್ಕು ಸಹಸ್ರದಷ್ಟಿದ್ದ ಕಟ್ಟಡ ಕಾರ್ಮಿಕರು 'ತಮ್ಮದೇ ಬಲ' ದಿಂದ ಇತಿಹಾಸ ಸೃಷ್ಟಿಸಿದರು. ಭವಿಷ್ಯತ್ತಿನ ಸುಂದರ ಸೌಹಾರ್ದ ಮಂಗಳೂರಿನ ನಿರ್ಮಾಪಕರು ತಾವೇ ಎಂಬ ಸಂದೇಶ ಸಾರಿದರು. ನಗರದ ಜನಪ್ರಿಯ ಪತ್ರಿಕೆಯೊಂದರ ಮಾತುಗಳೇ ಇದಕ್ಕೆ ಸಾಕ್ಷಿ. 'ವಾರದ ರಜಾದಿನವಲ್ಲದಿದ್ದರೂ ಸಮ್ಮೇಳನದಲ್ಲಿ ಭಾರಿಸಂಖ್ಯೆಯ ಕಟ್ಟಡ ಕಾರ್ಮಿಕರು ಉತ್ಸಾಹದಿಂದ ಪಾಲ್ಗೊಂಡಿದ್ದು ದ.ಕ. ಕಾರ್ಮಿಕರ ಇತಿಹಾಸದಲ್ಲೇ ಅಭೂತಪೂರ್ವ ಎನ್ನಲಾಗಿದೆ. ಜನಪರ



ಹೋರಾಟಗಳಿಗೆ ಹಿಂದೇಟು ಹಾಕುತ್ತಿದ್ದ ಮಂಗಳೂರಿನ ಜನತೆ ಇದೀಗ ಕಮ್ಯೂನಿಸ್ಟ್ ಚಳುವಳಿಯತ್ತ ವಾಲುತ್ತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಸಂಘಟನೆಗಳು ನಡೆಸುತ್ತಿದ್ದ ಧಾರ್ಮಿಕ ಸಮಾವೇಶಕ್ಕೆ ಸೇರಿದ ರೀತಿಗಿಂತಲೂ ಅಭೂತಪೂರ್ವ ವಾಗಿ ಕಾರ್ಮಿಕರು ಸೇರಿದ್ದರು. ('ಕರಾವಳಿ ಅಲೆ' 20.01.09).

ಬಹಿರಂಗಸಭೆ

ಶಿಸ್ತಿನ ಹೆಜ್ಜೆಗಳೊಂದಿಗೆ ಅರಬ್ಬೀ ಕಡಲಿನ ತೀರದ ನಗರದ ಮುಖ್ಯ ಬೀದಿಗಳಲ್ಲಿ ಕೆಂಪು ಸಾಗರವು ಹರಿಯುತ್ತಿದ್ದಂತೆಯೇ ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನೆರೆದ ನಾಗರೀಕರು ಆಸಕ್ತಿಯಿಂದ ವೀಕ್ಷಿಸಿದರು. ಹಲವರು ಸ್ವಯಂಸ್ಫೂರ್ತಿಯಿಂದ ಮೆರವಣಿಗೆಯೊಂದಿಗೆ ಸೇರಿದರು. ವಾಹನ ಸಂಚಾರ ಸ್ತಬ್ದಗೊಂಡವು. ಒಂದು ಕಿ.ಮೀ.ದೂರವನ್ನು ಒಂದು ಗಂಟೆ ಅವಧಿಯಲ್ಲಿ ಕ್ರಮಿಸಿ ನೆಹರೂ ಮೈದಾನ ತಲುಪಿದಾಗ ಮೆರವಣಿಗೆ ದ್ವಿಗುಣಗೊಂಡಿತ್ತು.

ಅಚ್ಚುಕಟ್ಟು ಶಿಸ್ತಿನಿಂದ ನಡೆದ ಬೃಹತ್ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ನೌಕರರ ಫೆಡರೇಷನ್‌ನ ನೂತನ ಚುನಾಯಿತ ಅಧ್ಯಕ್ಷ ಬಿ.ಮಾಧವ ವಹಿಸಿದ್ದರು. ದೇಶದಲ್ಲೇ ಪ್ರಥಮ ಬಾರಿಗೆ ಕಟ್ಟಡ ಕಾರ್ಮಿಕರನ್ನು ಸಂಘಟಿಸಿದ ಮಹಾ ನಾಯಕ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಷನ್ ಸಿಡಬ್ಲ್ಯೂಎಫ್ಐ ನ ಅಖಿಲ ಭಾರತ ಅಧ್ಯಕ್ಷ ಆರ್. ಸಿಂಗಾರವೇಲು ತಮ್ಮ ಕಂಚಿನ ಕಂಠದ ಮಾತುಗಳ ಮೂಲಕ ಸಭಿಕರನ್ನು ರೋಮಾಂಚನಗೊಳಿಸಿದರು. ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಯ ಇತಿಹಾಸ ಮತ್ತು ಹೋರಾಟದ ಪರಂಪರೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟ ಅವರು ಜಾಗತಿಕ ಆರ್ಥಿಕ ಹಿಂಜರಿತದ ಫಲವಾಗಿ ನಿರ್ಮಾಣ ಕಾರ್ಮಿಕರು ದೇಶವ್ಯಾಪಿಯಾಗಿ ಪಡುತ್ತಿರುವ ಭವಣೆಗಳನ್ನು, ವಿದೇಶಿ ನೇರಬಂಡವಾಳಕ್ಕೆ ಅನುವು ಮಾಡಿದ ಬಳಿಕ ಬಂದ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇಲ್ಲಿಯ ನಿರ್ಮಾಣ ಉದ್ದಿಮೆ ಮತ್ತು ಕಾರ್ಮಿಕ ಸಮುದಾಯಕ್ಕೆ ಉಂಟು ಮಾಡುತ್ತಿರುವ ಹಾನಿಯನ್ನು ಮನಮುಟ್ಟುವಂತೆ ವಿಶ್ಲೇಷಿಸಿದರು. ಎಡಪಕ್ಷಗಳ ಒತ್ತಡದಿಂದಾಗಿ ದೇವೇಗೌಡರು ಪ್ರಧಾನಿಯಾಗಿದ್ದಾಗ ತಂದ ಕಟ್ಟಡ ನಿರ್ಮಾಣ ಕಾಯ್ದೆಗಳನ್ನು ಎಲ್ಲಾ ರಾಜ್ಯಗಳು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು. ಪಶ್ಚಿಮಬಂಗಾಳ, ತ್ರಿಪುರ, ಕೇರಳಗಳಲ್ಲಿ ಕಟ್ಟಡ ಕಾರ್ಮಿಕರಿಗೆ ಅಲ್ಲಿಯ ಎಡರಂಗ ಸರ್ಕಾರಗಳು ಜಾರಿಗೆ ತಂದಿರುವ ಯೋಜನೆಗಳ ಉತ್ತಮ ಮಾದರಿಯನ್ನು ವಿವರಿಸಿದರು. ನಾಡಿಗೆ ಮನೆ ಕಟ್ಟಡವನ್ನು ಕಟ್ಟಿಸಿ ಕೊಡುವ ನಿರ್ಮಾಣ ಕಾರ್ಮಿಕನ ತಲೆಗೆ ಸೂರಿಲ್ಲ. ಸರ್ಕಾರದಿಂದಲೇ ಇವರಿಗೆ ಉಚಿತ ಮನೆ ನೀಡುವಂತೆ ಮತ್ತು ಮಾಸಿಕ ಒಂದು ಸಾವಿರ ರೂ. ನಿವೃತ್ತಿ ವೇತನ ನೀಡುವಂತೆ ಹಾಗೂ ಹಲವು ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ಮಾರ್ಚ್ 2 ರಂದು ರಾಷ್ಟ್ರ ವ್ಯಾಪಿಯಾಗಿ 'ಬೇಡಿಕೆ ದಿನ' ವಾಗಿ ಆಚರಿಸಲಾಗುವುದು ಎಂದ ಅವರು ಕರ್ನಾಟಕ ರಾಜ್ಯದಲ್ಲಿ ಕಟ್ಟಡ ಕಾರ್ಮಿಕರು ಸಂಘಟಿತರಾಗುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಈ ವರ್ಷಾಂತ್ಯಕ್ಕೆ ಕೊಲ್ಕತ್ತಾದಲ್ಲಿ ಅಖಿಲ ಭಾರತ ಸಮ್ಮೇಳನ ನಡೆಯಲಿದ್ದು, ಇದರೊಳಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಬಲಿಷ್ಠ ಸಂಘಟನೆಯನ್ನು ಕಟ್ಟಬೇಕೆಂದೂ ವಿನಂತಿಸಿಕೊಂಡರು.

ಅಭಿವೃದ್ಧಿಯ ಪೊಳ್ಳುತನ

ಹತ್ತು ವರ್ಷಗಳ ಹಿಂದೆ ನನಗೆ ಬೆಂಗಳೂರಿನಿಂದ ಮಂಗಳೂರು ಬರಲು 6- 7 ಸಾಕಾಗುತ್ತಿತ್ತು. ಇವತ್ತು 12 ಗಂಟೆ ಪ್ರಯಾಣಿಸಿದೆ ಎನ್ನುವ ಮೂಲಕ ಮಾತು ಆರಂಭಿಸಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರು ತಮ್ಮ ವ್ಯಂಗ್ಯಭರಿತ ಮೊನಚು ಮಾತುಗಳಿಂದ 'ಅಭಿವೃದ್ಧಿ' ಹೆಸರಿನಲ್ಲಿ ನಡೆಯುತ್ತಿರುವ ಪೊಳ್ಳುತನವನ್ನು ಒಂದೊಂದಾಗಿ ಬಯಲು ಗೊಳಿಸಿದರು. ಕರಾವಳಿಯಲ್ಲಿ ಕೋಮುವಾದಿಗಳ ಇತ್ತೀಚಿನ ಅಟ್ಟಹಾಸವನ್ನು ಪ್ರಸ್ತಾಪಿಸಿದ ಅವರು 1974ರಲ್ಲಿ ತಾನು ಎಕೆಜಿಯವರೊಂದಿಗೆ ನೆಹರೂ ಮೈದಾನದ ಭವ್ಯ ರ್‍ಯಾಲಿಯಲ್ಲಿ ಭಾಗವಹಿಸಿದುದನ್ನು ನೆನಪಿಸಿ, ಕೆಂಬಾವುಟಗಳು ಮೆರೆಯುತ್ತಿದ್ದ ಕಾಲದಲ್ಲಿ ಕೋಮುವಾದಿಗಳಿಗೆ ತಲೆಯೆತ್ತಲಾಗುತ್ತಿರಲಿಲ್ಲ. ಇದೀಗ ಮತ್ತೆ ಭರವಸೆ ಮೂಡಿದೆ ಎಂದರು. ತುರ್ತು ಪರಿಸ್ಥಿತಿ ಕಾಲದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ದನಿಯೆತ್ತಿದ್ದ ಗೃಹ ಸಚಿವ ವಿ.ಎಸ್ ಆಚಾರ್ಯರು ಇದೀಗ ಸಂಘ ಪರಿವಾರದ ವಿರುದ್ಧ ದನಿಯೆತ್ತಿರುವ 'ಕರಾವಳಿ ಅಲೆ'ಯ ಕತ್ತು ಹಿಸುಕಲು ಹೊರಟಿರುವುದು ಅವರ ನಿಜರೂಪವನ್ನು ಬಯಲು ಮಾಡಿದೆ ಎಂದರು.

ಬಿ.ಮಾಧವರವರು ಮಾತನಾಡಿ, ಖಾಸಗಿ ವ್ಯಕ್ತಿಗಳು ಮನೆ ಕಟ್ಟಲು ಕಲ್ಯಾಣ ಮಂಡಳಿಗೆ ಕಟ್ಟಬೇಕಾದ ಸೆಸ್‌ನ ಮಿತಿಯನ್ನು ಹತ್ತು ಲಕ್ಷದಿಂದ ರೂ.25 ಲಕ್ಷಕ್ಕೆ ಹೆಚ್ಚಿಸುವ ಸರ್ಕಾರದ ಪಿತೂರಿಯಿಂದಾಗಿ ಕಲ್ಯಾಣ ಮಂಡಳಿಗೆ ಹಣ

ಪುಟ 12ಕ್ಕೆ

ಭಾರತ ಗಣತಂತ್ರ 60ನೇ ವರ್ಷದಲ್ಲಿ...

ಈ ಜನವರಿ 26ರಂದು ನಾವು ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ 60ನೇ ವರ್ಷವನ್ನು ಪ್ರವೇಶಿಸುತ್ತಿದ್ದೇವೆ. ಭಾರತ, ಚೀನಾದಂತಹ ಪ್ರಾಚೀನ ನಾಗರಿಕತೆಗಳಲ್ಲಿ 60ವರ್ಷ ಪೂರ್ಣಗೊಳ್ಳುವುದೆಂದರೆ ಒಂದು ಶುಭ ಸಂದರ್ಭ, ಒಂದು ಹೊಸ ಜೀವನದ ಆರಂಭ ನಿಜ, ನಂತರದ ನಾಗರಿಕತೆಗಳಲ್ಲಿ, ಮಾನವ ಜೀವಿಗಳ ಆಯುಷ್ಯ ಹೆಚ್ಚಿದ್ದರಿಂದ ಈ ಘಟ್ಟವೂ ಮುಂದೆ ಹೋಯಿತು. ಉದಾಹರಣೆಗೆ, ಬೈಬಲ್ಲಿನಲ್ಲಿ ಹೇಳುವ ಜೀವಿತಾವಧಿ 70 ವರ್ಷಗಳು.

'ನಾವು, ಜನತೆ' ಸಂವಿಧಾನ ಸಭೆಯಲ್ಲಿ ಮೂರು ವರ್ಷಗಳ ತೀವ್ರ ಚರ್ಚೆಯ ನಂತರ ನಮಗೆ ಈ ಸಂವಿಧಾನವನ್ನು ಕೊಟ್ಟುಕೊಂಡಿದ್ದೇವೆ. ಸಂವಿಧಾನದ ಮೊದಲ ಕಲಮಿನ ಮೊದಲ ಪರಿಚ್ಛೇದ 'ಇಂಡಿಯಾ, ಅಂದರೆ ಭಾರತ ಒಂದು ರಾಜ್ಯಗಳ ಸಂಘ' ಎನ್ನುತ್ತದೆ. ಇಲ್ಲಿ ಎರಡು ಮೂಲಭೂತ ಲಕ್ಷಣಗಳನ್ನು ನಿರೂಪಿಸಲಾಗಿದೆ. ಒಂದು, ಸ್ವತಂತ್ರ ಭಾರತ ಒಕ್ಕೂಟತತ್ವದ ಮೇಲೆ ಆಧರಿಸಿದ ಒಂದು ಪ್ರಭುತ್ವವಾಗಿರುತ್ತದೆ. ಇನ್ನೊಂದು, ಸ್ವತಂತ್ರ ಭಾರತ ಒಂದು ಜಾತ್ಯಾತೀತ ಪ್ರಭುತ್ವವಾಗಿರುತ್ತದೆ. ಈ ನವಜಾತ ದೇಶಕ್ಕೆ ಏನು ಹೆಸರಿಡಬೇಕು ಎಂಬ ಬಗ್ಗೆ ಸಂವಿಧಾನ ಸಭೆಯಲ್ಲಿ ದೀರ್ಘ ಚರ್ಚೆಯ ನಂತರ ಅಂತಿಮವಾಗಿ ಈ ಅಂಶವನ್ನು ಅಂಗೀಕರಿಸಲಾಯಿತು.

ಜಾತ್ಯಾತೀತತೆಯ ಧ್ವನಿ

ಸಂವಿಧಾನ ಸಭೆ ಹಿಂದುಸ್ತಾನ, ಹಿಂದ್, ಭರತಭೂಮಿ, ಭಾರತವರ್ಷ ಇತ್ಯಾದಿ ವಿವಿಧ ಹೆಸರುಗಳನ್ನು ಪರಿಶೀಲಿಸಿತು ಎನ್ನಲಾಗಿದೆ. 'ಇಂಡಿಯಾ' ಎಂಬ ಪದವನ್ನು ಅದು ಸ್ಥಳೀಯ ಹೆಸರಿನ ಇಂಗ್ಲಿಷ್ ಭಾಷಾಂತರ ಎಂಬ ನಿರೂಪಣೆಯೊಂದಿಗೆ ಬಳಸಬೇಕೇ ಎಂದೂ ಸ್ವಲ್ಪ ಚರ್ಚೆ ನಡೆಯಿತಂತೆ. ಅಂತಿಮವಾಗಿ ಸಪ್ಟೆಂಬರ್ 17, 1949ರಂದು ಡಾ. ಬಿ.ಆರ್.ಅಂಬೇಡ್ಕರ್ ಮಂಡಿಸಿದ ಒಂದು ತಿದ್ದುಪಡಿಯನ್ನು ಅಂಗೀಕರಿಸಿ ಮೇಲೆ ಹೇಳಿದ ಮೊದಲ ಪರಿಚ್ಛೇದ ಬಂತು.

ಆಗಷ್ಟೇ ದೇಶದ ವಿಭಜನೆಯಾಗಿತ್ತು, ರಕ್ತದ ಹೊಳೆ ಹರಿದಿತ್ತು. ಜತೆಗೆ ಇದು ಕೇವಲ ಹಿಂದುಗಳ ದೇಶ ಎಂಬುದಾಗಿ ಸಾರಬೇಕೆಂದು ಆರೆಸ್ಸೆಸ್ ಮತ್ತಿತರರ ವಿಷಪೂರಿತ ಪ್ರಚಾರ ನಡೆದಿತ್ತು. ಈ ಹಿನ್ನೆಲೆಯಲ್ಲಿ ಸಂವಿಧಾನ ಸಭೆ ಜಾತ್ಯಾತೀತತೆಯನ್ನು ಧ್ವನಿಸುವ ಭಾರತ ಎಂಬ ಹೆಸರನ್ನು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಂಡಿತು.

'ಭಾರತ' ಎಂಬುದಕ್ಕೆ ಹಲವು ಮೂಲಗಳಿವೆ. ಅವುಗಳಲ್ಲಿ ಒಂದು ಕವಿ ಕಾಳಿದಾಸನ ಮಹಾಕಾವ್ಯ 'ಶಾಕುಂತಲ'. ದುಶ್ಯಂತ ಮತ್ತು ಶಕುಂತಲೆಯ ಮಗನ ಹೆಸರು ಭರತ. ವೇದಗಳಲ್ಲೂ ಈ ಪದದ ಮೂಲವಿದೆ ಎನ್ನಲಾಗಿದೆ. ಅದೇನೇ ಇರಲಿ. 'ಭಾರತ' ಎಂಬ ಪರಿಕಲ್ಪನಾತ್ಮಕ ವ್ಯಾಖ್ಯೆಯೂ ಇದೆ. ಅದರ ಪ್ರಕಾರ 'ಭಾ' ಎಂದರೆ 'ಭಾವ', 'ರ' ಎಂದರೆ ರಾಗ ಹಾಗೂ 'ತ' ಎಂದರೆ ತಾಳ. ಹೀಗೆ 'ಭಾರತ'ಎಂಬುದು ಈ ಮೂರರ ಸಂಗಮ, ಒಂದು ಸ್ವರ್ಗೀಯ ಸಂಗೀತದ ಇಂಪು.

ಅಪಸ್ವರಗಳ ಗದ್ದಲ

ಹಲವು ವಿಧಗಳಲ್ಲಿ ಈ ವ್ಯಾಖ್ಯೆ ಭಾರತದ ವೈವಿಧ್ಯತೆಯ ಶ್ರೀಮಂತ ಸೊಗಸನ್ನು ಬಿಂಬಿಸುತ್ತದೆ, ಈ ವೈವಿಧ್ಯತೆಯಲ್ಲಿ ಸಾಮಯುವ ಏಕತೆಯೇ ಭಾರತದ

ನಮ್ಮ ಗಣತಂತ್ರದ ಷಷ್ಟ್ಯಬ್ದಿಗೆ ಕಾಲಿಡುತ್ತಿರುವಾಗ ಅಪಸ್ವರಗಳ ಗದ್ದಲವೇ ಹೆಚ್ಚುತ್ತಿದೆ. ಈ ಹೆಚ್ಚುತ್ತಿರುವ ಅಪಸ್ವರಗಳನ್ನು ಒಂದು ಮಧುರ ಮೇಳವನ್ನಾಗಿ ಪರಿವರ್ತಿಸಲು ನಮಗೆ ಸಾಧ್ಯವೇ ಎಂಬುದೇ ಈ 60 ನೇ ವರ್ಷದಲ್ಲಿ ನಮ್ಮ ಮುಂದಿರುವ ಸವಾಲು. ಇದು ಖಂಡಿತಾ ಸಾಧ್ಯ.



ಸಾಮರಸ್ಯ. ಆದರೆ ಈ ಸೂಕ್ಷ್ಮ ಸಮತೋಲನವನ್ನು ಕೆಡಿಸ ಹೋದರೆ ಸಾಮಗಾನದ ಬದಲು ಅಪಸ್ವರಗಳು ಹೊರಡಲಾರಂಭಿಸುತ್ತವೆ.

ನಾವು ಈ 60ನೇವರ್ಷಕ್ಕೆ, ಷಷ್ಟ್ಯಬ್ದಿಗೆ ಕಾಲಿಡುತ್ತಿರುವಾಗ ಇಂತಹ ಅಪಸ್ವರಗಳ ಗದ್ದಲವೇ ಹೆಚ್ಚುತ್ತಿದೆ. ಪರಸ್ಪರ ಪೋಷಿಸುತ್ತಾ ಬೆಳೆಯುತ್ತಿರುವ ಕೋಮುವಾದ ಮತ್ತು ಭಯೋತ್ಪಾದನೆ, ತಲೆಯೆತ್ತುತ್ತಿರುವ ಸಂಕುಚಿತವಾದೀ ಮತ್ತು ಪ್ರತ್ಯೇಕತಾವಾದೀ ಪ್ರವೃತ್ತಿಗಳು, ವಿವಿಧ ನಕ್ಸಲೀಯ ಧಾರೆಗಳು ಹರಿಯ ಬಿಟ್ಟಿರುವ ಎಡ-ದುಸ್ಸಾಹಸವಾದಿ ಹಿಂಸಾತ್ಮಕ ಚಟುವಟಿಕೆಗಳು ಇವೆಲ್ಲಾ ಒಂದು ಬಗೆಯ ಅಪಸ್ವರವಾದರೆ, 'ಹೊಳೆಯುವ' ಭಾರತ ಮತ್ತು 'ನರಳುವ' ಭಾರತದ ನಡುವಿನ ಹೆಚ್ಚುತ್ತಿರುವ ಕಂದರ ಇನ್ನೊಂದು ಬಗೆಯದ್ದು. ಸಂಪೂರ್ಣವಾಗಿ ತಡೆಯ ಬಹುದಾದ ಕಾಯಿಲೆಗಳಿಂದ, ಅಪೌಷ್ಟಿಕತೆಯಿಂದ ಪ್ರತಿದಿನ ಸುಮಾರು ಒಂದು ಸಾವಿರ ಮಕ್ಕಳು ಸಾಯುತ್ತಿದ್ದಾರೆ. ದೇಶದ ಜನಸಂಖ್ಯೆಯಲ್ಲಿ 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣ 54ಶೇಕಡಾ. ಇವರಲ್ಲಿ ಮೂರನೆ ಒಂದರಷ್ಟು ಮಂದಿ ನಿರಕ್ಷರಿಗಳಾಗಿಯೆ ಉಳಿಯುತ್ತಿದ್ದಾರೆ, 10ಶೇಕಡಾ ಕೂಡ ಉನ್ನತ ಶಿಕ್ಷಣ ಪ್ರವೇಶಿಸುವುದಿಲ್ಲ. ಜತೆಗೆ ಸಾಮಾಜಿಕ ಹಂದರವನ್ನೇ ಚಿಂದಿಗೊಳಿಸುತ್ತಿರುವ ಸಾಮಾಜಿಕ ದಮನ, ಅನ್ಯಾಯ. ಅತ್ತ ಹೆಚ್ಚುತ್ತಿರುವ ಪ್ರಾದೇಶಿಕ ಆರ್ಥಿಕ ಅಸಮಾನತೆ. ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ, ವಿಘಟನೆಯ ಬೀಜಗಳನ್ನು ಬಿತ್ತುವ ಭೀತಿ ಮೂಡಿಸುತ್ತದೆ.

ಪರ್ಯಾಯದ ಸವಾಲು

ಆದ್ದರಿಂದ ಈ ಹೆಚ್ಚುತ್ತಿರುವ ಅಪಸ್ವರಗಳನ್ನು ಒಂದು ಮಧುರ ಮೇಳವನ್ನಾಗಿ ಪರಿವರ್ತಿಸಲು ನಮಗೆ ಸಾಧ್ಯವೇ ಎಂಬುದೇ ಈ 60 ನೇ ವರ್ಷದಲ್ಲಿ ನಮ್ಮ ಮುಂದಿರುವ ಸವಾಲು. ಇದು ಖಂಡಿತಾ ಸಾಧ್ಯ. ಆದರೆ ಅದಕ್ಕೆ ನಮ್ಮ ದೇಶದ ಧೋರಣೆಯ ದಿಕ್ಕಿನಲ್ಲಿ ಒಂದು ನಿರ್ಣಾಯಕ ಬದಲಾವಣೆ ಅಗತ್ಯ. ಆರ್ಥಿಕ ಧೋರಣೆಗಳು ಕೇವಲ ಕಾರ್ಪೊರೇಟ್ ಲಾಭಗಳ ಬಗ್ಗೆಯಷ್ಟೇ ಯೋಚಿಸದೆ ಜನಗಳ ಕಲ್ಯಾಣದತ್ತ ದಿಕ್ಕು ಬದಲಿಸಬೇಕು. ಎರಡನೆಯದಾಗಿ, ಭಾರತದ ಐಕ್ಯತೆ ಮತ್ತು ಸಮಗ್ರತೆಯಲ್ಲಿ ಯಾವ ಚೌಕಾಸಿಗೂ ಅವಕಾಶವಿರಬಾರದು. ನಮ್ಮ ರಾಜಕೀಯ ಮತ್ತು ಆರ್ಥಿಕ ಸಾರ್ವಭೌಮತೆಯನ್ನು ಅತ್ಯಂತ ಜತನದಿಂದ ಕಾಪಾಡಿಕೊಂಡರೆ ಮತ್ತು ವಿಶ್ವದೊಂದಿಗೆ ಘನತೆಯ ಸಂಬಂಧಗಳನ್ನು ನಿರೂಪಿಸುವ ಒಂದು ಸ್ವತಂತ್ರ ವಿದೇಶಾಂಗ ನೀತಿಯಿಂದ ಮಾತ್ರವೇ ಇದು ಸಾಧ್ಯ. ಮೂರನೆಯದಾಗಿ, ಭಾರತದ ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಬೇಕು. ಇದು ನಮ್ಮ ಶ್ರೀಮಂತ ವೈವಿಧ್ಯತೆಯಲ್ಲಿ ಹಾಸುಹೊಕ್ಕಾಗಿರುವ ಸರ್ವಸಾಮಾನ್ಯ ಎಳೆಗಳನ್ನು ಬಲಪಡಿಸುವ ಮೂಲಕ ಸಾಧ್ಯವೇ ಹೊರತು ವಿವಿಧ ಸ್ವರೂಪಗಳ ಕೋಮುವಾದ ಮತ್ತು ಮೂಲಭೂತವಾದಗಳು ಬಯಸುವಂತೆ ಈ ವೈವಿಧ್ಯತೆಯ ಮೇಲೆ ಒಂದು ಏಕರೂಪತೆಯನ್ನು ಹೇರುವ ಮೂಲಕ ಅಲ್ಲ.

ಆದರೆ ಧೋರಣೆಗಳಲ್ಲಿ ಇಂತಹ ನಿರ್ಣಾಯಕ ಬದಲಾವಣೆ ತರುವುದು ಹೇಗೆ? ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ತಮ್ಮ ವರ್ಗಸ್ವರೂಪವನ್ನು ತೋರಿಸಿವೆ, ಜನಪರ ನೀತಿಗಳನ್ನು ಅನುಸರಿಸಲು ನಿರಾಕರಿಸಿವೆ. ಅಂದರೆ ಈ ಬದಲಾವಣೆ ತರಬಲ್ಲ ಒಂದು ರಾಜಕೀಯ ಪರ್ಯಾಯವನ್ನು ಬಲಗೊಳಿಸಬೇಕಾಗಿದೆ. ನಮ್ಮ ಗಣತಂತ್ರದ 60ನೇ ವರ್ಷದಲ್ಲಿ 15ನೇ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಷಷ್ಟ್ಯಬ್ದಿಯ ಈ ಅವಕಾಶದ ಕಿಟಕಿಯನ್ನು ಒಂದು ಹೊಸ ಮಧುರ ಸಾಮಗಾನದ ಬುನಾದಿಯನ್ನು ನಿರ್ಮಿಸಲು ಬಳಸಬೇಕು. ದೇಶದ ಧೋರಣೆಯ ದಿಕ್ಕಿನಲ್ಲಿ ಇಂತಹ ಒಂದು ಬದಲಾವಣೆಯನ್ನು ತರಲು ಬಿಜೆಪಿ ನೇತೃತ್ವದ ಕೂಟ ಮತ್ತು ಕಾಂಗ್ರೆಸ್ ನೇತೃತ್ವದ ಕೂಟ ಇವೆರಡರಿಂದಲೂ ದೂರವಿರುವ ಒಂದು ರಾಜಕೀಯ ಪರ್ಯಾಯ ಬೇಕು ಎಂಬುದು ಸ್ಪಷ್ಟ.

ನಾವು, ಈ ಗಣತಂತ್ರದ ಜನತೆ, ಈ ಸವಾಲನ್ನು ಎದುರಿಸಬೇಕಾಗಿದೆ. ಆದ್ದರಿಂದ ಇಂತಹ ಒಂದು ಪರ್ಯಾಯವನ್ನು ಜನತಾ ಆಂದೋಲನಗಳ ಮೂಲಕ ಬೆಸೆಯಲು ಬೃಹತ್ ಹೋರಾಟಗಳಿಗೆ ಸಜ್ಜಾಗಬೇಕಾಗಿದೆ. ಇಂತಹ ಹೋರಾಟಗಳನ್ನು ಬಲಗೊಳಿಸುವ ಪ್ರಕ್ರಿಯೆಯ ಮೂಲಕವೇ ನಮ್ಮ ದೇಶದ, ಜನತೆಯ ಅಸ್ತಿತ್ವದ ಒಂದು ಮಧುರ ಮೇಳವನ್ನು ಸ್ಥಾಪಿಸುವ ಅಂತಿಮ ಪರಿಹಾರದತ್ತ, ಅಂದರೆ ಭಾರತದ ಸಮಾಜವಾದಿ ಗಣತಂತ್ರದತ್ತ ಸಾಗಲು ಸಾಧ್ಯ. ಈ ಅಂತಿಮ ಪರಿಹಾರವೆಂದರೆ ಬಂಡವಾಳಶಾಹಿ-ಭೂಮಾಲಕ ಆಳುವ ವರ್ಗಗಳ ಸ್ಥಾನದಲ್ಲಿ ಕಾರ್ಮಿಕ ವರ್ಗದ ನೇತೃತ್ವದ ಎಲ್ಲಾ ದುಡಿಯುವ ಜನಗಳ ಒಂದು ಐಕ್ಯರಂಗವನ್ನು ಪ್ರತಿಷ್ಠಾಪಿಸುವುದು.

ಈ 60ನೇ ವರ್ಷದಲ್ಲಿ ನಾವು ಈ ದಿಕ್ಕಿನಲ್ಲಿ ಹೆಜ್ಜೆಗಳನ್ನಿಡೋಣ.

ಪಿಣರಾಯಿ ಮೇಲೆ ಸಿಬಿಐ ವಿಚಾರಣೆ ಆದೇಶ: ರಾಜಕೀಯ ದುರುದ್ದೇಶಿತ ಕ್ರಮ

ಎಸ್.ಎನ್.ಸಿ. ಲಾವ್ಲಿನ್ ಪ್ರಕರಣದಲ್ಲಿ ಕೇರಳದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಮಾಜಿ ವಿದ್ಯುತ್ ಸಚಿವ ಕಾಂ. ಪಿಣರಾಯಿ ವಿಜಯನ್‌ರ ವಿಚಾರಣೆಗೆ ಸಿ.ಬಿ.ಐ. ಕ್ರಮವಹಿಸಿರುವುದು ರಾಜಕೀಯ ಪ್ರೇರಿತವಾಗಿದೆ. ಹಿಂದೆ ಓಮನ್ ಚಾಂಡಿ ಮುಖ್ಯಮಂತ್ರಿಯಾಗಿರುವಾಗ ಇದೇ ಪ್ರಕರಣವನ್ನು 2006ರಲ್ಲಿ ಸಿಬಿಐ ತನಿಖೆಗೆ ಆದೇಶಿಸಿದ್ದರು. ನಂತರ ವಿಚಕ್ಷಣಾ ವಿಚಾರಣಾ ಆದೇಶದಲ್ಲಿ ಯಾವುದೇ ತಪ್ಪುಗಳು ನಡೆದಿಲ್ಲವೆಂದು ಅವರನ್ನು ಆರೋಪ ಮುಕ್ತರನ್ನಾಗಿಸಿತು.

ಆಗ ಕಾಂ: ಪಿಣರಾಯಿಯವರ ಮೇಲೆ ಮಾಡಲಾಗಿದ್ದ ಆರೋಪವನ್ನು ತೀವ್ರವಾಗಿ ಖಂಡಿಸಿದ್ದ ಸಿಪಿಐ(ಎಂ) ಅದು ಮುಂಬರಲಿರುವ ಲೋಕಸಭಾ ಚುನಾವಣೆಯ ಮೇಲೆ ಕಣ್ಣಿರಿಸಿದ ದುರುದ್ದೇಶದ ಕ್ರಮವೆಂದು ಟೀಕಿಸಿತ್ತು.

ಈಗಲೂ ಲೋಕಸಭೆಯ ಚುನಾವಣೆಯ ಹಿನ್ನೆಲೆಯಲ್ಲಿ ದುರ್ಲಾಭ ಪಡೆಯಬೇಕೆಂದು ಮತ್ತೆ ಅದೇ ಪ್ರಕರಣವನ್ನು ಕೈಗೆತ್ತಿಕೊಳ್ಳಲಾಗಿದೆ. ಕೇಂದ್ರದ ತನಿಖಾ ಸಂಸ್ಥೆಯೊಂದನ್ನು, ತಮ್ಮ ರಾಜಕೀಯ ದುರ್ಲಾಭಕ್ಕೆ ಆಡಳಿತ ಪಕ್ಷವು ಬಳಸಿಕೊಳ್ಳುವುದು ಅತ್ಯಂತ ಸಾರ್ವಜನಿಕ ಗಂಭೀರ ವಿಷಯವಾಗಿದೆ.

ಈ ಪ್ರಶ್ನೆಯನ್ನು ಸಿಪಿಐ(ಎಂ) ಜನರ ನಡುವೆ ಕೊಂಡೊಯ್ಯಲಿದೆ ಮತ್ತು ರಾಜಕೀಯ ಷಡ್ಯಂತ್ರಗಳನ್ನು ಬಯಲಿಗೆಳೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಆರೆಸ್ಸೆಸ್ ಮತ್ತು ಸಂಘ ಪರಿವಾರ ಮಹಾನ್ ಸಂತ ವಿವೇಕಾನಂದರ ಹೆಸರನ್ನು ತನ್ನ ಕೋಮುದ್ವೇಷದ ಪ್ರಚಾರದ ತೆವಲಿಗೆ ದುರ್ಬಳಕೆ ಮಾಡುತ್ತಿದೆ. ನಿಜವಾಗಿಯೂ ವಿವೇಕಾನಂದರ ವಿಚಾರಗಳೇನು? ಅವರ ಹೆಸರು ಹೇಳುವ ಕೋಮುವಾದಿಗಳು ಮಾಡುತ್ತಿರುವುದೇನು?

ವಿವೇಕಾನಂದರ ವಾರಸುದಾರರು ಕೋಮುವಾದಿಗಳಲ್ಲ - ಪ್ರಗತಿಪರರು

ಡಾ. ಜಿ. ಭಾಸ್ಕರ ಮಯ್ಯ

ಆಧುನಿಕ ತತ್ವಶಾಸ್ತ್ರದ ಇತಿಹಾಸದಲ್ಲಿ ಸ್ವಾಮಿ ವಿವೇಕಾನಂದರಿಗೆ ಪ್ರಮುಖವಾದ ಸ್ಥಾನವಿದೆ. ವೇದಾಂತ ದರ್ಶನಕ್ಕೆ ನೂರಾರು ವ್ಯಾಖ್ಯಾನಗಳಿವೆ. ಆದರೆ ಅವುಗಳಲ್ಲಿ ಪ್ರಮುಖ ಸ್ಥಾನವಿರುವುದು 'ಶಾಂಕರ ವೇದಾಂತ'ಕ್ಕೆ. ಆದರೆ, ಶಂಕರರು ವೇದಾಂತ ದರ್ಶನಕ್ಕೆ ವ್ಯಾಖ್ಯಾನ ಬರೆದಿರುವುದು ಭಾವವಾದೀ ದೃಷ್ಟಿಯಿಂದ ಶಂಕರರು ಭಾವವಾದದ ಮೇರು ಶಿಖರ ಎಂಬಲ್ಲಿ ಎರಡು ಮಾತಿಲ್ಲ. ಅವರಿಗೆ ಸರಿಗಟ್ಟುವ ಭಾವವಾಣಿ ದಾರ್ಶನಿಕರು ಪಾಶ್ಚಾತ್ಯ ದರ್ಶನ ಶಾಸ್ತ್ರದಲ್ಲಿ ದೊರಕುವುದಿಲ್ಲ. ಆದರೆ, ವಿವೇಕಾನಂದರು ವೇದಾಂತಕ್ಕೆ ವ್ಯವಹಾರಿಕ ರೂಪವನ್ನು ಕೊಟ್ಟರು. ಈ ಬಗೆಯ ವ್ಯಾಖ್ಯಾನ ಕೂಡಾ ತತ್ವಶಾಸ್ತ್ರಕ್ಕೆ ನವನವೀನ.

ಅಗಾಧ ಪ್ರತಿಭೆ

1863ನೆಯ ಇಸವಿ ಜನವರಿ 12 ರಂದು ಕಲ್ಕತ್ತಾದ ಒಂದು ಕ್ಷತ್ರಿಯ ಕುಟುಂಬದಲ್ಲಿ ಜನಿಸಿದ ವಿವೇಕಾನಂದರು ಅಗಾಧ ಪ್ರತಿಭೆಯ ವ್ಯಕ್ತಿ. ಆ ಕಾಲದಲ್ಲಿಯೇ ಬಿ.ಎ. ಶಿಕ್ಷಣ ಮುಗಿಸಿದ ವಿವೇಕಾನಂದರು (ಮೂಲ ಹೆಸರು ನರೇಂದ್ರನಾಥ) ವಿದ್ಯಾರ್ಥಿ ಜೀವನದಲ್ಲಿ ನಾಸ್ತಿಕರಾಗಿದ್ದರು. ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ ಅವರ ಚಿಂತನ ಕ್ರಮವೇ ಬದಲಾಯಿತು. ರಾಮಕೃಷ್ಣರು ಮಹಾನ್ ಸಂತರಾಗಿದ್ದರೂ ಅನಕ್ಷರಸ್ತರು. ವಿವೇಕಾನಂದರು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯ ಪ್ರಖಾಂಡ ಪಂಡಿತರು. ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು ಒಂದೇ ಜೀವನದ ಎರಡು ಮುಖಗಳು ಅಥವಾ ಒಂದೇ ಸತ್ಯದ ಎರಡು ರೂಪಗಳು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ರಾಮಕೃಷ್ಣರು ಅನುಭೂತಿ ಆದರೆ ವಿವೇಕಾನಂದರು ಅವರ ವ್ಯಾಖ್ಯಾನ ಅಭಿವ್ಯಕ್ತಿ.

ವಿವೇಕಾನಂದರು ಹರ್ಬರ್ತ್ ಸ್ಪೆನ್ಸರ್ ಹಾಗೂ ಜಾನ್ ಸ್ಟುವರ್ಟ್‌ಮಿಲ್ ಅವರ ಪ್ರೇಮಿಯಾಗಿದ್ದರು. ಶೆಲಿ, ವರ್ಡ್ಸ್‌ವರ್ಥರ ದಾರ್ಶನಿಕತೆ, ಹೆಗಲ್‌ನ ವಸ್ತುನಿಷ್ಠ ಆದರ್ಶವಾದ ಹಾಗೂ ಫ್ರಾನ್ಸಿನ ರಾಜ್ಯಕ್ರಾಂತಿ ವಿವೇಕಾನಂದರನ್ನು ತೀವ್ರವಾಗಿ ಪ್ರಭಾವಿಸಿತ್ತು.

ವಿವೇಕಾನಂದರು ಕೇವಲ 39 ವರ್ಷಗಳ ಕಾಲ ಜೀವಿಸಿದ್ದರೂ ಅವರ ಸಂದೇಶ ಇವತ್ತಿನ ಕೋಮುವಾದಿ ರಾಜಕೀಯಕ್ಕೆ ಅತ್ಯಂತ ಪ್ರಬಲವಾದ ಶಸ್ತ್ರ. ರಾಮಮೋಹನ್ ರಾಯ್, ಕೇಶವ ಚಂದ್ರ ಸೇನ್, ದಯಾನಂದ ಸರಸ್ವತಿ, ರಾನಡೆ, ಎನಿಬೆಸೆಂಟ್ ಮತ್ತು ರಾಮಕೃಷ್ಣರು ಹದಮಾಡಿದ ನೆಲದಲ್ಲಿ ವಿವೇಕಾನಂದರು ಅಶ್ವತ್ಥದಂತೆ ಬೆಳೆದು ನಿಂತರು. ಇಂದು ಕೋಮುವಾದಿಗಳು ಆ ಅಶ್ವತ್ಥದ ರೆಂಬೆಕೊಂಬೆಗಳನ್ನು ಕಡಿದು ಯೂಪಸ್ಥಂಭ (ಬಲಿಸ್ಥಂಭ)ವನ್ನಾಗಿ ರೂಪಿಸುತ್ತಿದ್ದಾರೆ.

ವಿವೇಕಾನಂದರ ಬಗ್ಗೆ ರವೀಂದ್ರನಾಥ್ ಟಾಗೋರ್ ಹೇಳಿದ ಮಾತು ಅತ್ಯಂತ ಗಮನಾರ್ಹ. ಅವರು ಹೀಗೆಂದಿದ್ದರು "ಯಾರಾದರೂ ಭಾರತವನ್ನು ತಿಳಿದುಕೊಳ್ಳಲು ಇಷ್ಟಪಡುತ್ತಿದ್ದರೆ ಅವರು ಖಂಡಿತವಾಗಿಯೂ ವಿವೇಕಾನಂದರನ್ನು ಓದಲೇಬೇಕು. ಟಾಗೋರರಂತೆ ಡಾ.ರಾಮಧಾರೀಸಿಂಗ್" ದಿನಕರ್ ಅವರ ಪ್ರಕಾರ ಭಾರತೀಯರಲ್ಲಿ ನಿಜವಾದ ಧರ್ಮ ಎಲ್ಲಿಯವರೆಗೆ ಜೀವಂತವಿರುತ್ತದೋ ಅಲ್ಲಿಯತನಕ ವ್ಯಾಸ ವಾಲ್ಮೀಕಿಯರಂತೆ ವಿವೇಕಾನಂದರು ಅತ್ಯಗತ್ಯವಾಗುತ್ತಾರೆ."

ರೂಢಿ, ಆಡಂಬರ ಮತ್ತು ಬಾಹ್ಯಾಚಾರಗಳಿಂದ ಮೇಲೆದ್ದು ವಿವೇಕಾನಂದರು ಧರ್ಮದ ವಿಶಿಷ್ಟ ವ್ಯಾಖ್ಯೆಯನ್ನು ಮಂಡಿಸಿದರು. ಅದನ್ನೇ ಅವರು ಶಿಕಾಗೋ ಭಾಷಣದಲ್ಲಿ ಸ್ಪಷ್ಟಪಡಿಸಿದ್ದು. ಯುರೋಪ್, ಅಮೇರಿಕಾದಲ್ಲಿ ವಿವೇಕಾನಂದರಿಂದ ಪ್ರಭಾವಿತರಾಗಿ ಅನೇಕರು ಅವರ ಶಿಷ್ಯರಾದರು. ಅವರು ವಿದೇಶಿಯರಿಗೆ ಸಂಯಮ ಮತ್ತು ತ್ಯಾಗದ ಮಹತ್ವವನ್ನು ಸ್ಪಷ್ಟಪಡಿಸಿದರು. ಅಂತೆಯೇ ಅವರ ಧರ್ಮ ಮೀಮಾಂಸೆ ಸ್ಥೂಲವಾಗಿ ಹೀಗಿದೆ.

1. ಧರ್ಮವು ಮನುಷ್ಯನಲ್ಲಿ ಅಡಗಿರುವ 'ದೇವತ್ವ'ದ ವಿಕಾಸ. (ಕೋಮುವಾದಿಗಳ ಪ್ರಕಾರ 'ರಾಕ್ಷಸತ್ವ'ದ ವಿಕಾಸ)

2. ಧರ್ಮವು ಯಾವುದೇ ಅಂಧವಿಶ್ವಾಸ, ಮೂಢನಂಬಿಕೆಗಳಲ್ಲಿ ಇಲ್ಲ. ಅದು ಯಾವುದೇ ಪುಸ್ತಕಗಳಲ್ಲಿ (ಧರ್ಮಗ್ರಂಥಗಳಲ್ಲಿ) ಇಲ್ಲ. ಅದು ಕೇವಲ ಅನುಭೂತಿಯಲ್ಲಿದೆ. ಧರ್ಮ ಯಾವದೇ ಅಲೌಕಿಕತೆಯಲ್ಲಿ ಇಲ್ಲ. ಅದು ಜೀವನದ ಅತ್ಯಂತ ಸ್ವಾಭಾವಿಕ ತತ್ವ. ಆದರೆ ಕೋಮುವಾದಿಗಳ ಪ್ರಕಾರ ಅಂಧವಿಶ್ವಾಸದಲ್ಲೇ ಅದು ಅಡಗಿದೆ. ಒಂದೊ ಬಾಬ್ರಿಮಸೀದಿ, ಬಾಬಾಬುಡನ್‌ಗಿರಿ ದರ್ಗಾದ ಕೆಳಗೆ ಅಡಗಿದೆ. ಇಲ್ಲವೇ ನೂರಾರು, ಸಾವಿರಾರು ಮಸೀದಿಯ ಕೆಳಗೆ ಅಡಗಿಕೊಂಡಿದೆ. ತ್ರಿಶೂಲ, ನಾಮ, ಕೇಸರಿ ಬಾವುಟ ಮತ್ತು ಅಸಹಿಷ್ಣುತೆಯೇ ಇವರ ಧರ್ಮದ ದಿವ್ಯ ಮಂತ್ರ)

3. ಜೀವನ ಮಟ್ಟವು ಎಲ್ಲಿ ಹೀನ ಮಟ್ಟದ್ದಾಗಿರುತ್ತದೋ ಅಲ್ಲಿ ಇಂದ್ರಿಯಗಳ ಆನಂದ ಪ್ರಮುಖವಾಗಿರುತ್ತದೆ. ಊಟದ ಸಮಯದಲ್ಲಿ ತೋಳಗಳು ಮತ್ತು ನಾಯಿಗಳು ಯಾವ ಉತ್ಸಾಹವನ್ನು ತೋರುತ್ತವೆಯೋ ಅಂತಹ ಉತ್ಸಾಹವನ್ನು ಮನುಷ್ಯನು ತೋರುವುದಿಲ್ಲ. (ಆದರೆ, ಕೋಮು ವಾದಿಗಳು ಊಟ ಮಾಡುವುದರಲ್ಲಿ, ಹಲ್ಲೆ ಮಾಡುವುದರಲ್ಲಿ, ಗ್ಯಾಂಗ್ ರೇಪ್ ಮಾಡುವುದರಲ್ಲಿ ಅತ್ಯಂತ ಉತ್ಸಾಹ ತೋರುತ್ತಾರೆ. ನಾಯಿಗಳೂ ಮತ್ತು ತೋಳಗಳು ಮಾತ್ರ ಎಂದಿಗೂ ಇಂತಹ ಇಂದ್ರಿಯ ವಿಕಾರಗಳಿಗೆ ಒಳಗಾಗುವುದಿಲ್ಲ!)

5. ಮನುಷ್ಯನ ಆನಂದಕ್ಕೆ ಆಧಾರ ವಿಚಾರ, ಕಲೆ, ದರ್ಶನ ಮತ್ತು ವಿಜ್ಞಾನ (ಕೋಮುವಾದಿಗಳಿಗೆ ವಿಚಾರ ಬೇಡವೇ ಬೇಡ. ಅವರ ವೈಚಾರಿಕತೆಯ ಆ ಜನ್ಮವೈರಿಗಳು, ಪಿ.ಎನ್.ಜಾ ರವರ ಪುಸ್ತಕವನ್ನು ಪ್ರತಿಬಂಧಿಸಲಾಯಿತು. ಪುಸ್ತಕವನ್ನು ದೇಶದೊಳಗೆ ಬರಲಿಕ್ಕೇ ಬಿಡಲಿಲ್ಲ. 'ವಾಟರ್' ಸಿನೆಮಾದ ಮೇಲೆ ಗಲಭೆ ಎಬ್ಬಿಸಲಾಯಿತು. ಹುಸೈನ್ (ಎಮ್.ಎಫ್) ಚಿತ್ರಗಳನ್ನು ಸುಡಲಾಯಿತು. ಭಾರತಕ್ಕೆ ಬರದಂತೆ ಅವರನ್ನು ಓಡಿಸಲಾಯಿತು. ಕೋಮುವಾದಿಗಳಿಗೆ ವೇದ, ಉಪನಿಷತ್, ಷಡ್‌ದರ್ಶನ ಯಾವುದೂ ಬೇಡ. ಗೋಳ್‌ವಾಲ್ಕರ್ ದರ್ಶನ ಒಂದಿದ್ದರೆ ಸಾಕು.



ಕೋಮುವಾದಿಗಳು ವೈಜ್ಞಾನಿಕ ಮನೋಧರ್ಮದ ಪರಮಶತ್ರುಗಳು. ಆದರೆ ಅವರಿಗೆ ವಿಜ್ಞಾನದ ಲಾಭಗಳೆಲ್ಲವೂ ಬೇಕು!)

6. ವಿವೇಕಾನಂದರು ಭೋಗವಾದಿ ಅಮೇರಿಕನ್ನರಿಗೆ 'ನಿವೃತ್ತಿ ಮಾರ್ಗ'ವನ್ನು ಉಪದೇಶಿಸಿದ್ದರೆ, ಭಾರತೀಯರಿಗೆ 'ಪ್ರವೃತ್ತಿ ಮಾರ್ಗ'ವನ್ನು ಬೋಧಿಸಿದರು. (ಕೋಮುವಾದಿ ಸ್ವಾಮಿಗಳು ಸ್ವತಃ ಭೋಗವಾದಿಗಳಾಗಿರುತ್ತಾ ಠಕ್ಕು ನಿವೃತ್ತಿ ಮಾರ್ಗವನ್ನು ಜನಸಾಮಾನ್ಯರಿಗೆ ಬೋಧಿಸುತ್ತಿದ್ದಾರೆ) ಭಾರತದಲ್ಲಿ ದಾರಿದ್ರ್ಯದ್ದೇ ಸಾಮ್ರಾಜ್ಯ. ಇಲ್ಲಿಯ ಜನ ಹಸಿವಿನಿಂ ಸಾಯುತ್ತಿದ್ದಾರೆ. ಇವರಿಗೆ ನಿವೃತ್ತಿ ಮಾರ್ಗವ ಉಪದೇಶಿಸುವುದೆಂದರೆ ವಿಷಪ್ರಾಶನ ಮಾಡಿಸಿದಂ ಎಂದು ವಿವೇಕಾನಂದರು ಎಚ್ಚರಿಸಿದರು. (ಆಧ ನಮ್ಮ ಕೋಮುವಾದಿಗಳಿಗೆ ಯಾವ ಮಾರ್ಗ ಇಲ್ಲ! ಅವರಿಗೆ ಇರುವುದು ಒಂದೇ ಮಾರ್ಗ. ಅದ ಬರ್ಬರ ವಿಕೃತ ಮನೋವೃತ್ತಿಯ ಗೂಂಡಾ ಮಾರ್ಗ

7. ವಿವೇಕಾನಂದರೆಂದರು ಪಕ್ಕದ ಮನೆಯವ ಉಪವಾಸವಿರುವಾಗ ದೇವಸ್ಥಾನದಲ್ಲಿ ದೇವರಿ ಭೋಗ ಕೊಡುವುದು ಪುಣ್ಯವಲ್ಲ, ಪಾ (ಕೋಮುವಾದಿಗಳ ಪ್ರಕಾರ ಪಕ್ಕದ ಮನೆಯವರ ಮಾತ್ರವಲ್ಲ; ಇಡೀ ದೇಶದ ಬಡಜನ ನಿರ್ನಾಮವಾಗಲಿ; ಏನೇನೂ ತೊಂದರೆಯಲ್ಲ ಆದರೆ ದೇವರ ಹೆಸರಿನಲ್ಲಿ ಎಷ್ಟು ಸಾಧ್ಯವೋ ಅಷ ದೊಂಬಿ ಎಬ್ಬಿಸಬೇಕು. ಹೊಟ್ಟೆಯ ಕೂಳಿಲ್ಲದಿದ್ದರೂ ಚಿಂತಿಲ್ಲ, ಮೂಗಿನಿಂ ತಲೆಯವರೆಗೆ ನಾಮ ಎಳೆದುಕೊಂಡು ತ್ರಿಶೂಲದಿಂ ಇರಿಯಬೇಕು. ಬಡಮುಸ್ಲೀಮರಿಗೆ ಹೊಟ್ಟೆ ಹಿಟ್ಟಿಲ್ಲದಿದ್ದರೂ ಚಿಂತಿಲ್ಲ; ಆದರೆ, ಆತ 'ಅಲ್ ಹೋ ಅಕ್ಬರ್' ಎನ್ನುತ್ತಾ 'ಅಪಾಯ'ದಲ್ಲಿರುವ ಇಸ್ಲಾಮನ್ನು ರಕ್ಷಿಸಬೇಕು.)

8. ಮನುಷ್ಯರು ದುರ್ಬಲರೂ, ಕ್ಷೀಣರೂ ಆಗಿರುವಾಗ ಹೋಮಹವನಗಳಲ್ಲಿ ತುಪ್ಪವನ್ ಸುಡುವುದು ಅಮಾನುಷ ಕರ್ಮವೆಂದ ವಿವೇಕಾನಂದರು ಹೇಳಿದರು.

(ಕೋಮುವಾದಿಗಳು ಕಪೋಲಕಲ್ಪಿತ (ಏಕೆಂದರ ಯಾವ ಶಾಸ್ತ್ರಗಳಲ್ಲೂ ಈ ಯಜ್ಞವಿಲ್ಲ ರಾಮಯಜ್ಞವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ನಡೆಸುತ್ತಾ ಇರುತ್ತಾರೆ. ಹಿಂದೂ-ಮುಸ್ಲಿಂ ಶ್ರದ್ಧಾಕೇಂದ್ರ ಬಾಬಾಬುಡನ್‌ಗಿರಿಯಲ್ಲಿ ಸಮಾಧಿಗಳಿರುವ ಜಾಗದಲ್ಲಿಯೂ ಇವರು ಯಜ್ಞ, ಯಾ ಹೋಮಹವನ ನಡೆಸುತ್ತಾರೆ!)

9. 'ಭಾರತದ ಒಂದೇ ಆಶಾಕಿರಣ ವೆಂದರೆ ಇಲ್ಲಿಯ ಧರ್ಮನಿಷ್ಠ ಬಡಜನತೆ. ಶ್ರೀಮಂತ ಜನರ ದೈಹಿಕವಾಗಿಯೂ ನೈತಿಕವಾಗಿಯೂ ಸತ್ತು ಹೋಗಿದ್ದಾರೆ. (ಆದರೆ, ಕೋಮುವಾದಿಗಳಿಗೆ ಶ್ರೀಮಂತರೇ ಆಧಾರ. ಎನ್‌ಆರ್‌ಐಗಳ ದುಡ್ಡೆಂದರೆ ಇವರಿಗೆ ಪ್ರಾಣ. ಇವರ ಕಿರಾತಕರ್ಮಗಳಿಗೆ ವಿದೇಶಗಳಿಂದ ಹಣದ ಹೊಳೆ ಹರಿದುಬರುತ್ತದೆ)

10. ಶಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಧರ್ಮ ಪ್ರಚಾರ ಮಾಡುವ ಕ್ರೈಸ್ತ ಮಿಶನರಿಗಳ ಬಗೆಗೆ ವಿವೇಕಾನಂದರು ಹೀಗೆಂದಿದ್ದರು.

ನೀವು ಮೂರ್ತಿಪೂಜಕರ ಆತ್ಮವನ್ನು ರಕ್ಷಿಸಲು ಭಾರತಕ್ಕೆ ಧರ್ಮ ಪ್ರಚಾರಕರನ್ನು ಕಳುಹಿಸುತ್ತೀರಿ. ಚರ್ಚುಗಳ ಮೇಲೆ ಚರ್ಚುಗಳನ್ನು ಕಟ್ಟಿಸುತ್ತೀರಿ. ಆದರೆ ಈ ಮೂರ್ತಿಪೂಜಕರ ಹಸಿವಿನ ಜ್ವಾಲೆಯನ್ನು ತಣಿಸಲು ನೀವೇನು ಮಾಡಿದ್ದೀರಿ? ಭಯಾನಕ ಕ್ಷಾಮದಲ್ಲಿ ಭಾರತದ ನಿವಾಸಿಗಳು ಕೂಳಿಲ್ಲದೆ ಸತ್ತರು. ನಿಮ್ಮಿಂದ ಏನೂ ಮಾಡಲಾಗಲಿಲ್ಲ. ಪೂರ್ವದ ಸಂಕಟಗ್ರಸ್ತ ಜನರಿಗೆ ಬೇಕಾಗಿರುವುದು ಧರ್ಮವಲ್ಲ; ರೊಟ್ಟಿ. ಏಶಿಯಾದವರ ಹತ್ತಿರ ಧರ್ಮ ಸಾಕಷ್ಟಿದೆ. ಯಾವ ಜನ ಸಮುದಾಯವು ಹಸಿವಿನಿಂದ ಒದ್ದಾಡುತ್ತಿದೆಯೋ ಅದರ ಎದುರಿಗೆ ಧರ್ಮವನ್ನು

ಬಡಿಸುವುದು ಅವರಿಗೆ ಮಾಡುವ ಅಪಮಾನ.
ರು ರೊಟ್ಟಿ ಚೂರಿಗಾಗಿ ಪರಿತಪಿಸುತ್ತಿದ್ದಾರೋ
ರ ಕೈಗೆ ಧರ್ಮದರ್ಶನದ ಗ್ರಂಥಗಳನ್ನು
ುವುದು ಅವರನ್ನು ಕ್ರೂರ ವ್ಯಂಗ್ಯಕ್ಕೆ
ಡಿಸಿದಂತೆ. (ಆದರೆ, ಕೋಮುವಾದಿಗಳು ದೇಶ
ತನದಿಂದ ಸಾಯುತ್ತಿರುವಾಗ 'ರಾಮರಸಾಯನ'
ಅಮಲು ಪದಾರ್ಥವನ್ನು ಜನಸಾಮಾನ್ಯರಿಗೆ
ತರ ಕುಡಿಸುತ್ತಾ ಬಂದರು. ಬಾಬರಿ ಮಸೀದಿ
ಸವಾಯಿತು. ಆದರೆ, ಹೊಟ್ಟೆಯ ಪ್ರಶ್ನೆ,
ಯುವ ನೀರಿನ ಪ್ರಶ್ನೆ, ಸೂರಿನ ಪ್ರಶ್ನೆ ಯಾರೂ
ಲಿಲ್ಲ. ಆದಿವಾಸಿಗಳ ಕೈಗೆ ತ್ರಿಶೂಲ ಕೊಟ್ಟರು,
ಕುವ ದಾರಿ ಕೊಡಲಿಲ್ಲ.
ಸರಕಾರಿ ಸ್ವಾಮ್ಯದ ಕಂಪನಿಗಳನ್ನು ದಿನನಿತ್ಯ
ರಿದರು. ಗಣಿಕೊರೆದು ಕೋಟ್ಯಾಧಿಪತಿಗಳಾದರು.
ೀ ದುಡ್ಡಿಂದ ಮತ್ತೆ ಜನರಿಗೆ ಕುಡಿಸಿದರು. ಅವರ
ಾರದಲ್ಲೇ ಅಧಿಕಾರದ ಗದ್ದುಗೆಯೇರಿದರು!
ಡಿಯನ್ನು ರದ್ದುಮಾಡಿದರು. ಪಡಿತರ
ವಸ್ಥೆಯನ್ನು ಸಂಪೂರ್ಣವಾಗಿ ನಿಲ್ಲಿಸಲು
ುವಾದಿ ಶೌರಿ ಶಿಫಾರಸ್ಸು ಮಾಡಿದ. ಜನ
ೀ ತತ್ವಾರ ಅನುಭವಿಸುತ್ತಿದ್ದಾಗ ನಮ್ಮ
ೀಮುವಾದಿಗಳು ನದಿಗಳನ್ನೇ ಬಹುರಾಷ್ಟ್ರೀಯ
ಪನಿಗಳಿಗೆ ಮಾರಿದರು. ಚಳಿಯಿಂದ, ಬಿಸಿಲ
ಗೆಯಿಂದ, ಹೊಟ್ಟೆ ಹಸಿವಿನಿಂದ ಜನ ಹುಳ
ಪ್ಪಡಿಗಳಂತೆ ಸಾಯುತ್ತಿದ್ದರೆ ಅಂತಹ ಪೀಡಿತ,
ಂದ ಜನರಿಗೆ ಕೋಮುವಾದಿಗಳು
ೀಧಿಸುವುದು ಒಂದೇ ಮಂತ್ರ "ಜೈ ಶ್ರೀರಾಮ್"
ಲ್ಲಾಹ್ ಹೋ ಅಕ್ಬರ್")

ವೇಕಾನಂದರ ಕೆಲವೊಂದು ಮಾರ್ಮಿಕ ಚಾರಗಳು

ಒಮ್ಮೆ ನಡೆದ ಘಟನೆ. ಯುವಕನೊಬ್ಬ
ವೇಕಾನಂದರ ಬಳಿ ಬಂದು ಹೀಗೆ ಹೇಳಿದ:
ಮೀಜಿ, ನನಗೆ ಭಗವದ್ಗೀತೆಯನ್ನು ಕಲಿಸಿಕೊಡಿರಿ'
ದಕ್ಕೆ ವಿವೇಕಾನಂದರೆಂದರು "ಗೀತೆಯನ್ನು
ಿದುಕೊಳ್ಳಬೇಕಾದ ನಿಜವಾದ ಸ್ಥಳ ಫುಟ್‌ಬಾಲ್
ನ. ಹೋಗು, ಒಂದು ಗಂಟೆ ಚೆನ್ನಾಗಿ ಆಡು.
ೀತೆ ನಿನಗೆ ತನ್ನಿಂದ ತಾನಾಗಿಯೇ
ರ್ಥವಾಗುತ್ತದೆ."
ರಂಪರೆಗಳು ಭಾರತೀಯರನ್ನು
ಲಾಮರನ್ನಾಗಿ, ನಿರ್ಧನರನ್ನಾಗಿ ಮಾಡುವುದನ್ನು
ವೇಕಾನಂದರು ಸಹಿಸುತ್ತಿರಲಿಲ್ಲ. ರೀತಿ, ರಿವಾಜು,

ಪುಟ 10ಕ್ಕೆ



ಬರಾಕ್ ಒಬಾಮ ಹೆಗಲ ಮೇಲೆ ಹಲವು ಪ್ರಶ್ನೆಗಳು

ಅಮೇರಿಕಾ ಸಂಯುಕ್ತ ಸಂಸ್ಥಾನದ 44ನೇ ಅಧ್ಯಕ್ಷರಾಗಿ ಬರಾಕ್ ಹುಸೇನ್ ಒಬಾಮಾ ಅವರ ಅಧಿಕಾರ ಸ್ವೀಕಾರ ಸಮಾರಂಭವನ್ನು ಜಗತ್ತಿನಾದ್ಯಂತ ಕೋಟ್ಯಾಂತರ ಜನರು ವೀಕ್ಷಿಸಿದ್ದು ಮಾತ್ರವಲ್ಲದೆ, ಅಮೇರಿಕಾದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಲಕ್ಷಾಂತರ ಜನರು ವಾಷಿಂಗ್‌ಟನ್‌ನಲ್ಲಿ ಸೇರಿದ್ದರು. ಅವರ ಆಕಾಂಕ್ಷೆ ಸಂಭ್ರಮ ಮುಗಿಲು ಮುಟ್ಟಿತ್ತು.

1961ರಲ್ಲಿ ಒಬಾಮ ಹುಟ್ಟಿದ ಸಂದರ್ಭದಲ್ಲಿ ಅಮೇರಿಕಾದ ಹಲವಾರು ದಕ್ಷಿಣ ರಾಜ್ಯಗಳಲ್ಲಿ ಆಫ್ರಿಕಾ ಮೂಲದ ಅಮೇರಿಕಾದ ಜನರಿಗೆ ಮತದಾನದ ಹಕ್ಕೇ ಇರಲಿಲ್ಲ. 1964ರ ನಾಗರೀಕ ಹಕ್ಕುಗಳ ಕಾಯಿದೆ ಮೂಲಕ ಮಾತ್ರವೇ ಕಪ್ಪು ಜನರಿಗೂ ಸಮಾನಹಕ್ಕು ದೊರೆಯುವಂತಾಯಿತು. ಮತದಾನ ಹಕ್ಕು ಕಾಯಿದೆ 1965 ರಲ್ಲಿ ಜಾರಿಗೆ ಬಂತು. 1967 ರಲ್ಲಷ್ಟೇ ಅಂತರ್ ಜನಾಂಗೀಯ ವಿವಾಹ ನಿರ್ಬಂಧ ಕಾನೂನು ತೆಗೆಯಲಾಯಿತು. 70ರ ದಶಕದ ಪೂರ್ವಾರ್ಧದಲ್ಲಿ ಹಣದ ಬದಲಾವಣೆಗಾಗಿ ಆಫ್ರಿಕಾ ಮೂಲದ ಅಮೇರಿಕನ್ನರು ಬೀದಿಗಳಲ್ಲಿ ಅಲೆಯುವುದು ಸಾಮಾನ್ಯವಾಗಿತ್ತು. ಇಂದು, ಬದಲಾವಣೆಗಾಗಿ ನಡೆದ ಮತದಾನದಲ್ಲಿ ಆಫ್ರಿಕಾ ಮೂಲದ ಒಬಾಮ ಶ್ವೇತಭವನವನ್ನು ಪ್ರವೇಶಿಸುವಂತಾಯ್ತು. ಒಂದು ಹಂತದ ಚರಿತ್ರೆಯನ್ನು ಇದು ನಿರ್ಮಾಣ ಮಾಡಿತೆಂದೇ ಹೇಳಬಹುದು. ಆದರೆ ಬಹು ಮುಖ್ಯವಾದ ಇನ್ನೊಂದು ಹಂತವನ್ನು ಇನ್ನೂ ತಲುಪಿಲ್ಲ.

ಮಿದುಳಿನ ಮೇಲೆ ಭಾರ

"ಮನುಷ್ಯರು ತಮ್ಮ ಇತಿಹಾಸವನ್ನು ತಾವೇ ನಿರ್ಮಿಸುತ್ತಾರೆ, ಆದರೆ ಆದರೆ ಅದನ್ನು ತಮಗೆ ಇಷ್ಟ ಬಂದಂತೆ ಮಾಡುವುದಿಲ್ಲ; ಅದನ್ನು ಅವರು ತಾವೇ ಆರಿಸಿಕೊಂಡ ಪರಿಸ್ಥಿತಿಗಳಲ್ಲಿ ಮಾಡುವುದಿಲ್ಲ, ಆದರೆ ನೇರವಾಗಿ ಎದುರಿಗೆ ನಿಂತಿರುವ, ಭೂತಕಾಲದಿಂದ ಸಾಗಿ ಬಂದಿರುವ ಪರಿಸ್ಥಿತಿಗಳಲ್ಲಿ ನಿರ್ಮಿಸುತ್ತಾರೆ. ಎಲ್ಲಾ ಸತ್ತ ಪೀಳಿಗೆಗಳ ಪರಂಪರೆ ಒಂದು ದುಃಸ್ವಪ್ನದಂತೆ ಬದುಕಿರುವವರ ಮೆದುಳಿನ ಮೇಲೆ ಭಾರ ಹಾಕಿರುತ್ತದೆ" ಎಂದು ಒಂದೊಮ್ಮೆ ಮಾರ್ಕ್ಸ್ ಹೇಳಿದ್ದರು.

ಒಬಾಮರಿಗೆ ಹಿಂದಿನ ಪರಂಪರೆ ತಗಲಿಕೊಂಡಿದೆ. ತನ್ನ ಹಿಡಿತದಲ್ಲಿ ಜಗತ್ತಿನಲ್ಲಿ ಏಕಧ್ರುವೀಕರಣ ಸಾಧಿಸಬೇಕೆಂಬ ಅಮೇರಿಕಾ ಸಾಮ್ರಾಜ್ಯಶಾಹಿಯ ಹಂಬಲ; ಜಗತ್ತಿನಲ್ಲಿ ಯಾವುದೇ ಸ್ವತಂತ್ರ, ಸ್ವಾವಲಂಬಿ ದೇಶದ ವಿರುದ್ಧ ಯುದ್ಧ ಸಾರಬಹುದೆಂಬ ರಣತಂತ್ರ; 'ಭಯೋತ್ಪಾದನೆಯ ವಿರುದ್ಧ ಜಾಗತಿಕ ಯುದ್ಧ' ಎಂಬ ಹೆಸರಿನಲ್ಲಿ ಯಾವುದೇ ದೇಶದ ವಿರುದ್ಧ ಮಿಲಿಟರಿ ದಾಳಿ ನಡೆಸಿ ಆಕ್ರಮಿಸಿಕೊಳ್ಳುವ ಸ್ವಯಂಘೋಷಿತ ಹಕ್ಕು; ಕುಖ್ಯಾತ 'ಪ್ರಭುತ್ವದ ಭಯೋತ್ಪಾದನೆ'ಯನ್ನು ಜಾರಿಗೊಳಿಸಿದ ಅಮೇರಿಕಾದ ವಿವಿಧ ಸರ್ಕಾರಗಳು ಇಂತಹ ಪರಂಪರೆ ಅವರನ್ನು ತಗಲಿಕೊಂಡಿದೆ. ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನ ಹೇರಿದ ಕ್ರೂರ ಪದ್ಧತಿಯನ್ನು ಮುಂದುವರಿಸುವುದಾಗಿ ಒಬಾಮಾ ಅವರೇ ಹೇಳಿದ್ದಾರೆ.

ಅಮೇರಿಕಾವು ಇಸ್ರೇಲ್‌ಗೆ ನೀಡಿದ ಬೆಂಬಲದ ಪರಿಣಾಮವಾಗಿ 20ನೇ ಶತಮಾನವಿಡೀ ಪ್ಯಾಲೆಸ್ತೈನ್ ತನ್ನ ತಾಯ್ನಾಡಿನಿಂದ ವಂಚಿತವಾಗಬೇಕಾಯಿತು. ವಿಶ್ವ ಸಂಸ್ಥೆಯು ಪೂರ್ವ ಜೆರುಸಲೇಂ ಪ್ಯಾಲೆಸ್ತೈನ್‌ನ ರಾಜಧಾನಿಯಾಗಬೇಕೆಂದು ಷರತ್ತು ಹಾಕಿದರೂ ಇಡೀ ಜೆರುಸಲೇಂ ಇಸ್ರೇಲಿನ ರಾಜಧಾನಿಯಾಗಬೇಕೆಂದು ಒಬಾಮ ಘೋಷಿಸಿದ್ದಾರೆ. ಈ ನಿಲುವು ಈಗ ಬದಲಾಗುತ್ತದೆಯೇ?

ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ (ಎನ್‌ಪಿಟಿ) ಹಾಗೂ ಸಮಗ್ರ ಅಣು ಪರೀಕ್ಷಾ ನಿಷೇಧ ಒಪ್ಪಂದ (ಸಿಟಿಬಿಟಿ) ಗಳಿಗೆ ಭಾರತವು ಸಹಿ ಹಾಕಬೇಕೆಂದು ಒತ್ತಾಯಿಸಲಾಗುವುದೇ? ಭಾರತ-ಅಮೆರಿಕಗಳ ನಡುವಿನ ಅಣು ಒಪ್ಪಂದವು ಈ ಅಂಶಗಳೊಂದಿಗೆ ಜೋಡಣೆಗೊಂಡಿರುವುದರಿಂದ ಈ ವಿಚಾರಗಳಲ್ಲಿ ಗಂಭೀರ ಪರಿಣಾಮಗಳಾಗಲಿವೆ. ಕಾಶ್ಮೀರ ವಿವಾದಕ್ಕೆ ಸಂಬಂಧಪಟ್ಟಂತೆ ಯಾವುದೇ ಮೂರನೇ ದೇಶದ ಮಧ್ಯಪ್ರದೇಶವನ್ನು ಭಾರತ ಒಪ್ಪುವುದಿಲ್ಲ ಎಂದು ಹೇಳಿದರೂ ಅದನ್ನು 'ಬಗೆ ಹರಿಸಲು' ಉತ್ಸುಕನಾಗಿರುವುದಾಗಿ ಒಬಾಮಾ ಹೇಳಿದ್ದಾರೆ. ತಾಲಿಬಾನ್ ವಿರುದ್ಧ ಮಿಲಿಟರಿ ದಾಳಿಯನ್ನು ಮುಂದುವರಿಸಲು ಪಾಕಿಸ್ತಾನದ ನಿರಂತರ ಸಹಾಯ ಬೇಕಾಗಿರುವ ಹಿನ್ನೆಲೆಯಲ್ಲಿ ಒಬಾಮ ಇದನ್ನು ಘೋಷಿಸಿದ್ದಾರೆ ಎಂಬುದನ್ನು ಅರ್ಥ



ಮಾಡಿಕೊಳ್ಳಬೇಕು. ಇಂತಹ ಕಾರಣಗಳಿಂದಾಗಿಯೇ ಮುಂಬೈ ಭಯೋತ್ಪಾದನಾ ದಾಳಿಯ ಕುರಿತಾಗಿ ಅಮೇರಿಕಾ ಪಾಕಿಸ್ತಾನದ ಮೇಲೆ ಹೆಚ್ಚಿನ ಒತ್ತಡ ಹೇರುತ್ತಿಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ವಾಲ್‌ಸ್ಟ್ರೀಟ್ ಮುಖ್ಯವೇ ಅಥವಾ...?

ಒಬಾಮರನ್ನು ಆಯ್ಕೆ ಮಾಡುವುದರ ಮೂಲಕ ಅಮೇರಿಕಾದ ಮತದಾರರು ಚರಿತ್ರೆಯನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಒಬಾಮ ಚರಿತ್ರೆ ನಿರ್ಮಾಣ ಮಾಡುತ್ತಾರೆಯೋ ಇಲ್ಲವೇ ಎಂಬುದನ್ನು ಮುಂದಿನ ದಿನಗಳು ನಿರ್ಧರಿಸಲಿವೆ. ಮೇಲೆ ಹೇಳಿದ ಪ್ರಶ್ನೆಗಳು ಮತ್ತು ಪ್ರಮುಖವಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಇವುಗಳನ್ನು ಒಬಾಮ ಹೇಗೆ ನಿರ್ವಹಿಸುತ್ತಾರೆ ಎಂಬುದು ಪ್ರಮುಖ ಪ್ರಶ್ನೆ. ಒಬಾಮ ಒಮ್ಮೆ ಹೇಳಿದ್ದರು 'ನಮ್ಮ ಜಿಡಿಪಿ (ಒಟ್ಟು ಆಂತರಿಕ ಉತ್ಪಾದನೆ) ಕುಸಿತ ಆಕಸ್ಮಾತ್ತಾಗಿ ಆಗಿಲ್ಲ. ವಾಲ್‌ಸ್ಟ್ರೀಟ್ (ಷೇರು ಮಾರುಕಟ್ಟೆ) ಗೆ ಆದ್ಯತೆ, ಮೈನ್ ಸ್ಟ್ರೀಟ್ (ಇತರೆ ಉದ್ಯಮಗಳು) ನಂತರ ಎಂಬ ಬುಶ್ ಆಡಳಿತದ ನೀತಿಗಳೇ ಇದಕ್ಕೆ ಕಾರಣ ಅಂದರೆ ಅಂತರರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಸೂಪರ್ ಲಾಭವನ್ನು ಹುಡುಕುತ್ತಾ ಜೂಜುಕೋರ ಚಟುವಟಿಕೆಗಳಿಗೆ ಮಾನ್ಯತೆ ನೀಡುವುದೇ ಇದಕ್ಕೆ ಕಾರಣ ಎಂಬುದನ್ನು ಒಬಾಮಾ ಗುರುತಿಸಿದ್ದಾರೆ.

ಮುಂದಿನ 20 ವರ್ಷಗಳ ಆರ್ಥಿಕ ಬೆಳವಣಿಗೆಗಳು ಹಿಂದಿನ 20 ವರ್ಷಗಳ ಬೆಳವಣಿಗೆಗಳಂತೆ ಇರುವುದಿಲ್ಲ ಎಂದು ಒಬಾಮ ಒಮ್ಮೆ ಹೇಳಿದ್ದರು. ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಇಂದಿನ ಆರ್ಥಿಕತೆಯ ಗ್ರಾಹಕರು ಹೆಚ್ಚು ಖರ್ಚು ಮಾಡಬೇಕೆಂಬ ತತ್ವದ ಮೇಲೆ ಆಧಾರಿತವಾಗಿದೆ; ಆದರೆ ಸುಲಭ ಸಾಲದ ದಿನಗಳು ಮಾಯವಾಗಿವೆ. ಆದ್ದರಿಂದ ಹೊಸ ಆರ್ಥಿಕತೆಯ ದಾರಿಯನ್ನು ಹುಡುಕಬೇಕಾಗಿದೆ. ಅದೇ ಸಂದರ್ಭದಲ್ಲಿ ಬುಶ್ ಆಡಳಿತವು 10.3 ಟ್ರಿಲಿಯ ಅಂದರೆ 10,30,000 ಕೋಟಿ ಡಾಲರಿನ ಸಾಲವನ್ನು ಹೇರಿ ಹೋಗಿದೆ(ರೂಪಾಯಿಗಳಲ್ಲಿ 1 ಡಾಲರಿಗೆ 50 ರೂ.ಎಂದಾದರೆ 5,15,00,000 ಕೋಟಿ ರೂ.ಆಗುತ್ತದೆ) ಈ ಹಿನ್ನೆಲೆಯಲ್ಲಿ ಆರ್ಥಿಕ ಸಮತೋಲನವನ್ನು ಕಾಯ್ದುಕೊಳ್ಳುವುದು ಕಷ್ಟದಾಯಕವಾಗಿದ್ದು, ಈ ವರ್ಷದ ಬಜೆಟ್‌ನಲ್ಲಿ 1 ಟ್ರಿಲಿಯ ಡಾಲರ್ ಅಥವಾ 1,00,000 ಕೋಟಿ ಡಾಲರ್‌ಗೂ ಹೆಚ್ಚು (ರೂಪಾಯಿಗಳಲ್ಲಿ 50,00,000 ಕೋಟಿ ರೂ.) ಖೋತಾ ಆಗಬಹುದೆಂದು ಅಂದಾಜು ಮಾಡಲಾಗಿದೆ.

'ನೀರ ಮೇಲಣ ಗುಳ್ಳೆ' ಎಂಬ ಅರಿವು...

1930ರ ದಶಕದಲ್ಲಿ ಉಂಟಾದ ತೀವ್ರ ಆರ್ಥಿಕ ಬಿಕ್ಕಟ್ಟಿನ (Great depression) ನಂತರ ಅಂದಿನ ಅಧ್ಯಕ್ಷ ರೂಸ್‌ವೆಲ್ಟ್ ಮಾಡಿದಂತೆ 'ಹೊಸ ನೀತಿ'ಯನ್ನು ಅನುಸರಿಸುವ ಅವಕಾಶವೂ ಒಬಾಮ ಅವರಿಗಿದೆ. ಇದನ್ನು ಮಾಡಬೇಕೆಂದಾದಲ್ಲಿ ಹಣಕಾಸು ಬಂಡವಾಳ ಪ್ರೇರಿತ ಹೊಸ ಉದಾರೀಕರಣ ನೀತಿಯು ಕೇವಲ 'ನೀರ ಮೇಲಣ ಗುಳ್ಳೆ' ಎಂಬುದನ್ನು ಗುರುತಿಸಿ ಅದು ಇಂದಿನ ಬಿಕ್ಕಟ್ಟಿಗೆ ಕಾರಣ ಎಂಬುದನ್ನು ಅಂದಾಜು ಮಾಡಬೇಕು.

ಇಂತಹ ಹಿನ್ನೆಲೆಯಲ್ಲಿ ಒಬಾಮಾ ಅವರು ಪರ್ಯಾಯ ಧೋರಣೆಯನ್ನು ಅನುಸರಿಸುತ್ತಾರೆಯೇ ಅಥವಾ ಈ ಬಿಕ್ಕಟ್ಟನ್ನು ಹೇರಿದ ಅಂತರರಾಷ್ಟ್ರೀಯ ಬಂಡವಾಳದ ದೈತ್ಯರ ಪ್ರಯತ್ನಗಳಿಗೆ ಮಣಿದು ಮೂರನೇ ಜಗತ್ತಿನ ರಾಷ್ಟ್ರಗಳ ಜನರ ಮೇಲೆ ಇನ್ನಷ್ಟು ಹೊರೆಯನ್ನು ಹೇರುತ್ತಾರೆಯೇ ಎಂಬುದನ್ನು ಕಾದುನೋಡಬೇಕಾಗಿದೆ. ಒಬಾಮ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದರ ಮೇಲೆ ಅಮೇರಿಕಾ ಸಾಮ್ರಾಜ್ಯಶಾಹಿಯ ಬಗ್ಗೆ ಜಗತ್ತಿನ ಜನರು ಪ್ರತಿಕ್ರಿಯಿಸುತ್ತಾರೆ. ಅಮೇರಿಕಾದ ಹೊರಗಡೆ ಇರುವ ಪರಿಸ್ಥಿತಿಯ ಬಗ್ಗೆ ಕಣ್ಣು ಮುಚ್ಚಿ ಇರಲು ಸಾಧ್ಯವಿಲ್ಲ ಎಂದು ಒಬಾಮಾ ಘೋಷಿಸಿದ್ದಾರೆ.

ಅಮೇರಿಕಾದ ಮುಖಂಡನ ನಿರ್ಧಾರವು, ಆ ದೇಶದ ಹೊರಗಡೆ ಜೀವಿಸುತ್ತಿರುವ ಶೇ.95ಕ್ಕೆ ಹೆಚ್ಚು ಜನರು ಯುದ್ಧ ಅಥವಾ ಶಾಂತಿ, ಉತ್ತಮ ಜೀವನ ಅಥವಾ ಬಡತನ, ಉನ್ನತ ಸಂಸ್ಕೃತಿ ಅಥವಾ ಕೊಳಕು ಸಂಸ್ಕೃತಿ ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಸೂಚಿಸುತ್ತದೆ.

'ಚಿರತೆ ಜಾಗ'

ಈ ಬದಲಾವಣೆಗಳು ಜಗತ್ತನ್ನು ಉತ್ತಮಪಡಿಸುವತ್ತ ಹೆಜ್ಜೆ ಇಡುತ್ತದೆಯೇ? 'ನಮಗೆ ಬದಲಾವಣೆ ಸಾಧ್ಯ' ಎಂಬ ಘೋಷಣೆಯಲ್ಲಿ ಒಬಾಮಾ ಆಯ್ಕೆಯಾಗಿದ್ದಾರೆ. ಅಮೇರಿಕಾ ಸಾಮ್ರಾಜ್ಯಶಾಹಿಯ ಹಿಂದಿನ ಅನುಭವವು 'ಚಿರತೆ ತನ್ನ ಸ್ಥಾನ ಬದಲಿಸುವುದಿಲ್ಲ' ಎಂಬಂತಿತ್ತು. ಹಾಗೊಂದು ವೇಳೆ ಆದರೆ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟ ಮುಂದುವರಿಯುತ್ತದೆ.

■ ಸೀತಾರಾಂ ಯೆಚೂರಿ

ವಿವೇಕಾನಂದರ ವಾರಸುದಾರರು........

ಪುಟ 9 ರಿಂದ

ಸಂಕೇತಗಳು ಮತ್ತು ಮೂರ್ತಿಗಳೊಂದಿಗಿನ ಸಂಬಂಧವನ್ನು ತ್ಯಜಿಸುವುದರಿಂದಲೇ ನಮಗೆ ಶ್ರೇಷ್ಠ ಭಕ್ತಿ ಮತ್ತು ನಿಜವಾದ ಪ್ರೇಮ ದೊರಕುತ್ತದೆ. ಈ ಮಟ್ಟವನ್ನು ತಲುಪಿದವನಿಗೆ ಧರ್ಮಗ್ರಂಥ ಗಳಲ್ಲಾಗಲಿ, ಸಂಪ್ರದಾಯ ಗಳಲ್ಲಾಗಲಿ ಯಾವುದೇ ಮೌಲ್ಯ ಕಾಣಿಸುವುದಿಲ್ಲ. ಎಲ್ಲಾ ಸಂಪ್ರದಾಯಗಳು ಮತ್ತು ಆಚರಣೆಗಳೂ ಆತನಲ್ಲಿಯೇ ಇರುತ್ತವೆ. ಹಾಗಿರುವಾಗ ಆತ ಯಾವುದೇ ಸಂಪ್ರದಾಯ ಅಥವಾ ಆಚರಣೆಯನ್ನಾದರೂ ಏತಕ್ಕೆ ಮಾಡಬೇಕು? ಅಂಥ ಮನುಷ್ಯ ಯಾವುದೇ ದೇವಸ್ಥಾನ ಅಥವಾ ಚರ್ಚಿಗೆ ಹೋಗುವುದಿಲ್ಲ. ಏಕೆಂದರೆ ಎಲ್ಲಾ ಮಂದಿರಗಳೂ ಚರ್ಚುಗಳೂ ಆತನಲ್ಲಿಯೇ ಇವೆ.

"ದೇವಸ್ಥಾನ ಮತ್ತು ಮಸೀದಿ ಕಟ್ಟುವುದರಲ್ಲಿ ಧರ್ಮವಿಲ್ಲ. ಒಟ್ಟಿಗೆ ಸೇರಿ ಸಾರ್ವನಿಕವಾಗಿ ಉಪಾಸನೆ ಮಾಡುವುದಕ್ಕೆ ಧರ್ಮವೆನ್ನುವುದಿಲ್ಲ. ಸಭೆಗಳಲ್ಲಾಗಲೀ, ವ್ಯಾಖ್ಯಾನಗಳಲ್ಲಾಗಲೀ, ಪುಸ್ತಕಗಳಲ್ಲಾಗಲೀ, ಶಬ್ದಗಳಲ್ಲಾಗಲೀ, ಧರ್ಮ ಇಲ್ಲವೇ ಇಲ್ಲ. ಧರ್ಮದ ಅನುಭವದ ಮೊದಲ ಆದರ್ಶವೇ ತ್ಯಾಗ". ವಿವೇಕಾನಂದರ ಈ ಮಾತು ಗಳನ್ನು ಭಾರತೀಯರು ಅರ್ಥ ಮಾಡಿಕೊಂಡಿದ್ದರೆ ಕೋಮುವಾದಿಗಳ ಬಲೆಗೆ ಬೀಳುತ್ತಿರಲಿಲ್ಲ. ರಾಮ ಹುಟ್ಟಿದ್ದೇ 'ಈ ಜಾಗದಲ್ಲಿ' ಎಂಬ ಉನ್ಮಾದದ ಅಲೆ ಏಳುತ್ತಿರಲಿಲ್ಲ' ಭಾರತ ಕೋಮುವಾದದಿಂದ ಫ್ಯಾಸಿಸಮ್‌ನೆಡೆಗೆ ಬೆಳೆದು ಬರುತ್ತಿರಲಿಲ್ಲ. ವಿವೇಕಾನಂದ ರೆಂದರು.

"ಇನ್ನೊಂದು ಮಾತು ಅತ್ಯಂತ ಮಹತ್ವದ್ದು. ಅದನ್ನು ನಾನು ಗುರುವಿನಿಂದ ಕಲಿತೆ. ಅದು ಎಷ್ಟೊಂದು ಸುಂದರವಾದ ಸತ್ಯವೆಂದರೆ ಜಗತ್ತಿನ ಧರ್ಮಗಳಲ್ಲಿ ಯಾವುದೂ ಒಂದು ಇನ್ನೊಂದಕ್ಕೆ ವಿರುದ್ಧವಾಗಿಲ್ಲ. ಎಲ್ಲಾ ಧರ್ಮಗಳು ಅಮರ ಸನಾತನ ಧರ್ಮದ ವಿವಿಧ ಹವಲುಗಳು. ಒಂದೇ ಸನಾತನ ಧರ್ಮವು ಅನಂತ ಕಾಲದಿಂದಲೂ ಇದೆ. ಮುಂದೆಯೂ ಇರುವುದು. ಆದ್ದರಿಂದಲೇ ನಾವು ಎಲ್ಲಾ ಧರ್ಮಗಳನ್ನು ಸಮಾನ ಗೌರವದಿಂದ ಕಾಣಬೇಕು. ಧರ್ಮದೊಳಗೆ ವ್ಯಾಪಾರ ಮತ್ತು ವ್ಯಾಪಾರದ ಸಿದ್ಧಾಂತವು ಸೇರಿದರೆ ಧರ್ಮವು ನಾಶವಾಗುತ್ತದೆ.

"ಧರ್ಮ ಪ್ರವರ್ತಕರ ವ್ಯಕ್ತಿಗತ ಶಕ್ತಿ ಸಾಮರ್ಥ್ಯ ಗಳಿಗನುಸಾರವಾಗಿ ಪ್ರತ್ ಪ್ರತ್ಯೇಕ ಧರ್ಮದ ರೂಪವು ನಿಶ್ಚಿತವಾಗಿರುತ್ತದೆ. ಒಬ್ಬ ಮನುಷ್ಯದ ಧರ್ಮವು ಆತನ ನಿರಂತರ ಕ್ರಿಯಾಶೀಲತೆ ಮತ್ತು ಕರ್ಮದಿಂದ ಪ್ರಕಟವಾಗುತ್ತದೆ. ಒಂದು ಧರ್ಮದಲ್ಲಿ ಅನನ್ಯ ಭಕ್ತಿ ಇದ್ದರೆ, ಇನ್ನೊಂದರಲ್ಲಿ ರಹಸ್ಯವಾದೀ ಆದ್ಯಾತ್ಮಿಕತೆ, ಮಗದೊಂದರಲ್ಲಿ ದಾರ್ಶನೀಕತೆ ಈ ರೀತಿ ಧರ್ಮದ ಬಾಹ್ಯ ರೂಪಗಳು ಬೇರೆ ಬೇರೆ. "ನಿನ್ನ ಮಾರ್ಗ ತಪ್ಪು" ಎಂದು ನಾವು ಇನ್ನೊಂದು ಧರ್ಮದವರಿಗೆ ಹೇಳುವುದು ಸಂಪೂರ್ಣವಾಗಿ ತಪ್ಪು. ಏಕೆಂದರೆ ಸತ್ಯಕ್ಕೆ ನಾನಾ ರೂಪಗಳಿವೆ. ಬೇರೆ ಬೇರೆ ದಿಕ್ಕಿನಿಂದ ನೋಡುವಾಗ ಸತ್ಯವು ಬೇರೆ ಬೇರೆಯಾಗಿ ಕಾಣಿಸುತ್ತದೆ".



ವಿವೇಕಾನಂದರು ಭಾರತೀಯರಿಗೆ ಕೊಟ್ಟ ಸಂದೇಶ ಹೀಗಿದೆ. "ಮುಂದಿನ ಐವತ್ತು ವರ್ಷಗಳ ತನಕ ಭಾರತ ಮಾತೆಯನ್ನು ಬಿಟ್ಟು ಬೇರೇನನ್ನು ಧ್ಯಾನಿಸಕೂಡದು. ಭಾರತ ಮಾತೆಯನ್ನು ಬಿಟ್ಟು ಉಳಿದೆಲ್ಲಾ ದೇವರುಗಳು ಸುಳ್ಳು. ಅವುಗಳನ್ನೆಲ್ಲಾ ನಿಮ್ಮ ಮನಸ್ಸಿನಿಂದ ಹೊರಗೆಸೆಯಿರಿ. ಇದೇ ದೇವಿ. ಈ ನಾಡಿನ ಜನರೇ ನಮ್ಮ ವಾಸ್ತವಿಕ ದೇವಿ. ಎಲ್ಲಾ ಕಡೆಯೂ ಅವಳ ಕೈಗಳೇ ಕಾಣಿಸುತ್ತಿವೆ. ಎಲ್ಲಾ ಕಡೆಯೂ ಆಕೆಯ ಕಾಲುಗಳೇ ಕಾಣಿಸುತ್ತವೆ. ಎಲ್ಲಾ ಕಡೆಯೂ ಅವಳದ್ದೇ ಕಿವಿಗಳು. ಎಲ್ಲದರ ಮೇಲೂ ಆಕೆಯ ಪ್ರತಿಬಿಂಬವೇ ಆವರಿಸಿದೆ. ಬೇರೆ ಎಷ್ಟು ದೇವರುಗಳಿದ್ದಾರೋ ಅವರೆಲ್ಲಾ ನಿದ್ರೆಯಲ್ಲಿದ್ದಾರೆ. ಈ ವಿರಾಟ್ ದೇವತೆ ನಮ್ಮೆದುರು ಪ್ರತ್ಯಕ್ಷ. ಈ ದೇವತೆಯನ್ನು ಬಿಟ್ಟು ನಾವು ಇನ್ನಾವ ದೇವತೆಯನ್ನು ಪೂಜಿಸಬೇಕು?" ಆ ಕಾಲದಲ್ಲಿ ಸ್ವಾತಂತ್ರ್ಯ ಚಳುವಳಿಯ ಕುರುಹೂ ಇಲ್ಲ. ಅಂತಹ ಕಾಲದಲ್ಲಿ ವಿವೇಕಾನಂದರ ದೇಶಪ್ರೇಮದ ಮೇಲಿನ ಮಾತುಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ.

ವೇದಾಂತದ ಮೆದುಳು ಇಸ್ಲಾಂನ ಶರೀರ...!

ತಮ್ಮ ಗುರು ರಾಮಕೃಷ್ಣ ಪರಮಹಂಸರ ಬಗ್ಗೆ ವಿವೇಕಾನಂದರ ಈ ಮಾತುಗಳನ್ನು ನೋಡಿ.

"ನನ್ನ ಗುರುವನ್ನು ನೋಡಿ ನಾನು ತಿಳಿದೆ. ಈ ಜೀವನದಲ್ಲೇ ಮನುಷ್ಯ ಪೂರ್ಣತ್ವವನ್ನು ಪಡೆಯಲಿಲ್ಲ. ಆ ಮುಖಾರವಿಂದರಿಂದ ನಾನು ಎಂದೂ ಯಾವುದೇ ನಿಂದಾ ವಾಕ್ಯವನ್ನು ಕೇಳಲಿಲ್ಲ. ರೋಷವನ್ನು ಕಂಡೇ ಇಲ್ಲ. ಅವರ ಕಣ್ಣುಗಳಲ್ಲಿ ದೋಷಕ್ಕೆ ಸ್ಥಾನವೇ ಇರಲಿಲ್ಲ. ಒಳಿತನ್ನು ಬಿಟ್ಟು ಅವರು ಬೇರೇನನ್ನು ಕಾಣರು..... ಹಲವಾರು ವರ್ಷ ನಾನು ಆ ಮಹಾಪುರುಷನ ಜತೆಗಿದ್ದೆ. ಆತ ಎಂದೂ ಯಾವುದೇ ಧರ್ಮದ ಬಗೆಗೆ ಒಂದೇ ಒಂದು ನಿಂದಾವಾಕ್ಯವನ್ನು ಹೇಳಿದ್ದನ್ನು ನಾನು ಕೇಳಿಲ್ಲ. ಎಲ್ಲರ ಬಗೆಗೂ ಆತನ ಮನಸ್ಸಿನಲ್ಲಿ ಸಮಾನ ಭಾವನೆಯಿತ್ತು. ಅವರು ಯಾರನ್ನೂ ನಿಂದಿಸುತ್ತಿರಲಿಲ್ಲ. ಬದಲಿಗೆ ಅವರಲ್ಲಿನ ಒಳ್ಳೆಯತನವನ್ನಷ್ಟೇ ನೋಡುತ್ತಿದ್ದರು.

ಇಂತಹ ಮಹಾನ್ ಸಂತ ರಾಮಕೃಷ್ಣಪರಮಹಂಸರು ಆರು ತಿಂಗಳುಗಳ ಕಾಲ ವಿಧಿವತ್ತಾಗಿ ಮುಸ್ಲಿಮನಾಗಿ ಇಸ್ಲಾಮಿನ ಸಾಧನೆಯನ್ನು ಮಾಡಿದ್ದರು. ಈ ಸಂಸ್ಕಾರದ ಪರಿಣಾಮವಾಗಿಯೇ ಗುರುಶಿಷ್ಯರೀರ್ವ ರಲ್ಲಿಯೂ ಇಸ್ಲಾಮಿನ ಬಗೆಗೆ ಗೌರವಾಧರ ಗಳಿದ್ದವು.

ಇಲ್ಲಿ ಒಂದು ರೋಚಕ ಪ್ರಸಂಗವನ್ನು ಉಲ್ಲೇಖಿಸಲು ಬಯಸುತ್ತೇನೆ. ಅದು ಮುಸ್ಲಿಮ್ ದೊರೆಗಳು ಮಂದಿರಗಳನ್ನು ಒಡೆದುಹಾಕಿದ ಪ್ರಸಂಗದ ಕುರಿತು ಪ್ರಸ್ತಾಪ ಬಂದಾಗ ನಡೆದುದು. ಈ ವಿಚಾರವನ್ನು ಸಿಸ್ಟರ್ ನಿವೇದಿತಾ ತನ್ನ "my master" ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ವಿವೇಕಾನಂದರು ಸಮಾಧಿ ಸ್ಥಿತಿಯಿಂದ ಎದ್ದ ನಂತರ ನಿವೇದಿತಾರೊಡನೆ ಹೀಗೆಂದರು.

"ಮುಸ್ಲಿಂ ದೊರೆಗಳು ಏಕೆ ಹಿಂದೂ ಮಂದಿರಗಳನ್ನು ಒಡೆದು ಹಾಕಿದರು? ಅವರ ದೇವೀ ದೇವತೆಗಳನ್ನು ಭ್ರಷ್ಟಗೊಳಿಸಿದರು ಎಂಬುದನ್ನು ಯೋಚಿಸಿ ಯೋಚಿಸಿ ಮನಸ್ಸು ಕ್ಷೋಭೆಗೊಳ್ಳುತ್ತಿತ್ತು. ಆದರೆ ಇಂದು ತಾಯಿ (ಕಾಳಿಕಾ ಮಾತೆ) ನನ್ನನ್ನು ಸಮಾಧಾನಪಡಿಸಿದಳು. ಆಕೆ ನನ್ನೊಡನೆಂದಳು. ನಾನು ನನ್ನ ಮೂರ್ತಿ ಗಳನ್ನು ಇಟ್ಟುಕೊಳ್ಳುತ್ತೇನೆ. ಇಲ್ಲವೇ ಒಡೆದುಹಾಕುತ್ತೇನೆ. ಇದು ನನ್ನ ಇಷ್ಟ. ಈ ವಿಚಾರವನ್ನು ನೀನ್ಯಾಕೆ ಯೋಚಿಸಿ ಚಿಂತಿಸುತ್ತಿ?

ಇಸ್ಲಾಮ್ ಮತ್ತು ಹಿಂದೂ ಧರ್ಮದ ಮಿಲನವನ್ನು ವಿವೇಕಾನಂದರು ಅತ್ಯುನ್ನತ ಘಟ್ಟದಲ್ಲಿ ಗ್ರಹಿಸಿದ್ದರು. ವೇದಾಂತವು ಜ್ಞಾನಕ್ಕೆ ಸಂಬಂಧಿಸಿದುದು. ಅದರಲ್ಲಿ ತ್ಯಾಗ ಮತ್ತು ವೈರಾಗ್ಯವು ಪ್ರಧಾನವಾಗಿದೆ. ಇಸ್ಲಾಂ ಮುಖ್ಯವಾಗಿ ಭಕ್ತಿ ಮಾರ್ಗಕ್ಕೆ ಸಂಬಂಧಿಸಿದುದು. ಅದು ದೇಹ ದಂಡನೆಗೆ, ಸನ್ಯಾಸಕ್ಕೆ ಮಾನ್ಯತೆ ಕೊಡುವುದಿಲ್ಲ. ವಿವೇಕಾನಂದರ ಪ್ರಕಾರ ವೇದಾಂತವು ಶುದ್ಧ ನಿವೃತ್ತಿ ಮಾರ್ಗಿಯಾಗಿದ್ದರೂ ಇಸ್ಲಾಮಿನ ಪ್ರವೃತ್ತಿ ಮಾರ್ಗದೊಡನೆ ಅದಕ್ಕೆ ಯಾವ ವಿರೋಧವೂ ಇಲ್ಲ. ಅಲ್ಲದೆ, ಇಸ್ಲಾಮಿನ ವ್ಯಾವಹಾರಿಕತೆಯಿಲ್ಲದಿದ್ದರೆ ವೇದಾಂತದಿಂದ ಜನರಿಗೆ ಯಾವ ಉಪಯೋಗವೂ ಆಗದು. ಆದ್ದರಿಂದಲೇ ಇರಬೇಕು. 1898 ರಲ್ಲಿ ವಿವೇಕಾನಂದರು ಹೀಗೆಂದಿದ್ದರು.

"ಹಿಂದು ಧರ್ಮ ಮತ್ತು ಇಸ್ಲಾಂ ಒಂದಾಗುವುದರಲ್ಲಿಯೇ ನಮ್ಮ ಜನ್ಮಭೂಮಿಯ ಕಲ್ಯಾಣವಿದೆ. ವೇದಾಂತದ ಮಿದುಳು ಮತ್ತು ಇಸ್ಲಾಮಿನ ಶರೀರ ಒಂದುಗೂಡುವುದರಿಂದ ಯಾವ ಧರ್ಮವು ತಲೆಯೆತ್ತುತ್ತದೆಯೋ ಅದು ಭಾರತಕ್ಕೆ ಆಶಾಕಿರಣ"

ಇಂತಹ ಮಹಾನ್ ವಿಚಾರಧಾರೆಯ ವಿವೇಕಾನಂದರು ಭಾರತದ ಏಕತೆ ಮತ್ತು ಅಖಂಡತೆಯ ಅದ್ವಿತೀಯ ಹರಿಕಾರರು. ಅದಕ್ಕೆ ಇಂದು ದೇಶವನ್ನು ಒಡೆಯುವ ಕೋಮುವಾದಿಗಳು ವಿವೇಕಾನಂದರನ್ನು ತಮಗೆ ಬೇಕು ಬೇಕಾದಂತೆ ಬಳಸಿಕೊಳ್ಳುವುದನ್ನು ನೋಡಿದರೆ ಇದು ಖಂಡಿತವಾಗಿಯೂ ನಮ್ಮ ಅಪೂರ್ವ ಪರಂಪರೆಯ ಮೇಲೆ ನಡೆಯುತ್ತಿರುವ ಅತ್ಯಾಚಾರ. ಸೈತಾನನ ಬಾಯಿಯಲ್ಲಿ ಏಕೆ ಬೈಬಲ್ಲಿನ ಮಾತುಗಳು ಬರುತ್ತಿವೆಯೆಂಬುದನ್ನು ನಮ್ಮ ಸಂಗಾತಿಗಳು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದು ಬೈಬಲ್ಲಿನ ಮಾತುಗಳಲ್ಲ, ಬದಲಿಗೆ ಸೈತಾನನ ಮಾತುಗಳು ಎಂಬುದನ್ನು ಹಗಲಿನಷ್ಟು ಸ್ಪಷ್ಟ.

ವೃತ್ತಿ ಶಿಕ್ಷಣ (ಸಿಇಟಿ) ಸೀಟು ಹಂಚಿಕೆ...

ಪುಟ 5 ರಿಂದ

ದುರಂತರವೆಂದರೆ 2006ರಲ್ಲಿ ಕೆಲ ಕಾಲೇಜ್‌ಗಳನ್ನು ಹೊರತುಪಡಿಸಿ ಉಳಿದಂತೆ ಆ ಹಣ ಬಿಡುಗಡೆಯಾಗಿಲ್ಲ. ಇದರಿಂದ ಆ ವಿದ್ಯಾರ್ಥಿಗಳು ಕಾಲೇಜ್‌ಗಳಲ್ಲಿ ಕಿರುಕುಳ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳು ಕಾಲೇಜ್ ತೊರೆಯುತ್ತಿದ್ದಾರೆ. ಶಂಕರಮೂರ್ತಿಯವರ ಬಿಜೆಪಿ ಸರ್ಕಾರವೇ ಸಬ್ಸಿಡಿ ಜಾರಿಗೊಳಿಸದೇ ಇರೋದು ಮಹಾ ಮೋಸವಲ್ಲದೆ ಬೇರೇನು?

ಸಾಮಾಜಿಕ ನ್ಯಾಯದ ವಿರೋಧಿಗಳು


ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಸಹಾಯವಾಗಲೆಂದು ಸಂವಿಧಾನದ ಆಶಯದ ಈಡೇರಿಕೆಗಾಗಿ 'ವಿದ್ಯಾರ್ಥಿ ವೇತನ' ವನ್ನು ಬಹು ಹಿಂದಿನಿಂದಲೂ ನೀಡಲಾಗುತ್ತಿತ್ತು. ಅದು ವಿದ್ಯಾರ್ಥಿಗಳಿಗೆ ಆಸರೆಯಾಗುತ್ತಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರ 'ವಿದ್ಯಾರ್ಥಿ ವೇತನ' ವನ್ನು ಬಿಡುಗಡೆ ಮಾಡಿಲ್ಲ. ಆ ಕಾರಣಕ್ಕಾಗಿ ಕಾಲೇಜ್ ಆಡಳಿತ ಮಂಡಳಿಗಳು ವಿದ್ಯಾರ್ಥಿಗಳಿಗೆ ಕಿರುಕುಳ ನೀಡುತ್ತಿವೆ. 'ವಿದ್ಯಾರ್ಥಿ ವೇತನ' ವನ್ನು ಬಿಡುಗಡೆಗೊಳಿಸದೆ ವಿದ್ಯಾರ್ಥಿಗಳಿಗೆ ಹಿಂಸಿಸುತ್ತಿರುವ ಸರ್ಕಾರ ಬಡ ದಲಿತ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಾ 'ಸಾಮಾಜಿಕ ನ್ಯಾಯದ ವಿರೋಧಿ'ಯಾಗಿ ವರ್ತಿಸುತ್ತಿದೆ.

ಇವುಗಳಿಗೆಲ್ಲ ಪರಿಹಾರ

ಈ ರೀತಿ ಸ್ಥಿತ್ಯ ಹಲವಾರು ಸಮಸ್ಯೆಗಳಲ್ಲಿ ವೃತ್ತಿ ಶಿಕ್ಷಣದ ವಿದ್ಯಾರ್ಥಿಗಳು ಸಿಲುಕಿದ್ದಾರೆ. ಖಾಸಗಿ ಕಾಲೇಜ್‌ಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವಂತಹ ಕೇಂದ್ರಿಯ ಶಾಸನ' ದ ರಚನೆಯಾದರೆ ಇದಕ್ಕೆ ಶಾಶ್ವತ ಪರಿಹಾರವಾಗಲಿದೆ. ದೃಢ ನಿರ್ಧಾರದ ಮೂಲಕ ಸರ್ಕಾರ 75:25 ಸೀಟು ಹಂಚಿಕೆಗೆ ತೀರ್ಮಾನ ಮಾಡಬೇಕು. ಸಾಮರ್ಥ್ಯಕ್ಕೆ ತಕ್ಕಂತೆ ಶುಲ್ಕ ನಿಗದಿಗೆ ಸರ್ಕಾರ ತೀರ್ಮಾನ ಮಾಡಿ ಸಾಮಾಜಿಕ ನ್ಯಾಯ ಕಡೆಗಣಿಸುತ್ತಿರುವ ಕಾಲೇಜ್ ಮಂಡಳಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಮೂಲಭೂತ ಸೌಲಭ್ಯಗಳಿಲ್ಲದ ಕಾಲೇಜ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಖಾಸಗಿ ಕಾಲೇಜ್‌ಗಳ ಬದಲು ಹೊಸ ಸರ್ಕಾರಿ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜ್ ಸ್ಥಾಪಿಸಬೇಕು. ಈ ಬೇಡಿಕೆಗಳು ಈಡೇರಿದರೆ ಮಾತ್ರ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಲಿದೆ.

ಇದಕ್ಕೆ ಚಳುವಳಿಯೇ ಉತ್ತರ

ಖಾಸಗಿ ಆಡಳಿತ ಮಂಡಳಿ ಪ್ರತಿನಿಧಿಗಳು ಮತ್ತು ಕೆಲ ಮಠಾಧೀಶರುಗಳ ಹಿಡಿತದಲ್ಲಿರುವ ಈ ಸರ್ಕಾರ ಬಡವರ ಪರ ನಿಂತು ಈ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸಾಧ್ಯವಿಲ್ಲ. ಹೀಗಾಗಿ ಈಗಾಗಲೇ ಈ ಅನ್ಯಾಯಕ್ಕೆ ಒಳಗಾಗಿರುವ ವಿದ್ಯಾರ್ಥಿ-ಪೋಷಕರು ಐಕ್ಯ ಚಳುವಳಿ ರೂಪಿಸಬೇಕಿದೆ. ಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳು ಐಕ್ಯ ಚಳುವಳಿ ರೂಪಿಸಬೇಕಿದೆ. ವೃತ್ತಿ ಶಿಕ್ಷಣ ಬಿಕ್ಕಟ್ಟಿನ ನಿವಾರಣೆಗಾಗಿ 'ಭಾರತ ವಿದ್ಯಾರ್ಥಿ ಫೆಡರೇಷನ್' (ಎಸ್‌ಎಫ್‌ಐ) ಹಿಂದಿನಿಂದಲೂ ನಿರ್ಣಾಯಕ ಹೋರಾಟ ರೂಪಿಸುತ್ತಾ ಬಂದಿದ್ದು, ಇತ್ತೀಚೆಗೆ ನಡೆದ ಸೀಟು ಹಂಚಿಕೆ ಖಾಸಗಿ ಕಾಲೇಜುಗಳ ಪರವಾಗಿದ್ದು, ಇದನ್ನು ವಿರೋಧಿಸಿ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡುತ್ತಿದೆ. ವಿದ್ಯಾರ್ಥಿ ಸಮುದಾಯ ಪ್ರತಿಭಟನೆ ಮೂಲಕ ಈ ಸರ್ಕಾರಕ್ಕೆ ಉತ್ತರ ನೀಡಲು ತಯಾರಾಗಬೇಕಿದೆ.



ಕಾಂ. ಇ. ಬಾಲಾನಂದನ್ : ಅಗಲಿದ ಕಾರ್ಮಿಕವರ್ಗದ ಮಹಾಚೇತನ

ಒಬ್ಬ ಕಾರ್ಮಿಕನಾಗಿ, ಸ್ವಯಂ ಪರಿಶ್ರಮದಿಂದ ಕ್ರಾಂತಿಕಾರಿ ರಾಷ್ಟ್ರನಾಯಕನಾಗಿ ಬೆಳೆದ ಬಾಲಾನಂದನ್‌ರವರು ಕಾರ್ಮಿಕ ವರ್ಗದ ವಿಶಾಲ ಚಳುವಳಿಗೆ, ಉನ್ನತ ರಾಜಕೀಯ ಪ್ರಜ್ಞೆಗಾಗಿ ಶ್ರಮಿಸಿದವರು. ಅವರು ಬೆಳೆದ ಬಗೆಯ ಪರಿಚಯ

ವಿ.ಜೆ.ಕೆ.ನಾಯರ್‌ರವರಿಂದ

ಇ. ಬಾಲಾನಂದನ್ 1978ರಲ್ಲಿ ಸಿಪಿಐ(ಎಂ)ನ ಜಲಂಧರ್ ಸಮ್ಮೇಳನದ ಸಂದರ್ಭದಲ್ಲಿ ಆಯ್ಕೆಯಾದ ಪಾಲಿಟ್ ಬ್ಯೂರೋ ಸದಸ್ಯರಲ್ಲೇ ಒಬ್ಬ ಅಪರೂಪದ ಸದಸ್ಯರಾಗಿದ್ದರು. ಅದು ಸಿಪಿಐ(ಎಂ) ಪಕ್ಷವು ತುರ್ತು ಪರಿಸ್ಥಿತಿಯ ನಂತರದ ಸನ್ನಿವೇಶದಲ್ಲಿ ತನ್ನ ಹಳೆಯ ಧೋರಣೆಯನ್ನು ವಿಮರ್ಶಿಸಿ ಹೊಸ ಧೋರಣೆ ಅಂಗೀಕರಿಸಿದ ಸಂದರ್ಭವಾಗಿತ್ತು. ಇ.ಬಾಲನಂದನ್ ಅವರು ಪಕ್ಷದ ಇತಿಹಾಸದಲ್ಲಿ ಮಹತ್ವದ ಸಂಧಿಕಾಲವಾದ 18ನೇ ಮಹಾಧೀವೇಶನದ (ದೆಹಲಿ, 2005) ವರೆಗೂ ಮುಂದುವರೆದರು.

ಕಾರ್ಮಿಕನಾಗಿದ್ದು ಈ ಮಟ್ಟಕ್ಕೇರಿದ ಅಪರೂಪದ ಹಾಗೂ ಬಹುಶಃ ಏಕೈಕ ಪಾಲಿಟ್ ಬ್ಯೂರೋ ಸದಸ್ಯರು, ಇವರದು ಸಿಐಟಿಯುವಿನ ಸಂಸ್ಥಾಪಕ ಅಧ್ಯಕ್ಷರಾದ ಬಿ.ಟಿ.ರಣದಿವೆಯವರು ವಹಿಸಿದ ಪಾತ್ರದಂತಿರಲಿಲ್ಲ. ಬಿ.ಟಿ.ಆರ್‌ರವರು ಆರು ದಶಕಗಳಿಗೂ ಹೆಚ್ಚು ಕಾಲ ಕಾರ್ಮಿಕ ಚಳುವಳಿಯನ್ನು ಮುನ್ನಡೆಸಿದ ಪರ್ವತ ಸದೃಶ್ಯ ವ್ಯಕ್ತಿ. ಅವರು ವರ್ಗ ಹೋರಾಟ ಅದರಲ್ಲೂ ಸಿಐಟಿಯು ರಚನೆಯ ನಂತರ ಎರಡು ದಶಕಗಳ ಕಾಲ ಅದರ ಸೈದ್ಧಾಂತಿಕ ನಾಯಕರೂ ಮತ್ತು ಪ್ರಾಯೋಗಿಕವಾದ ನಾಯಕರೂ ಆಗಿ ನೇತೃತ್ವ ನೀಡಿದವರು. ಬಾಲಾನಂದನ್ ಅವರು ಒಬ್ಬ ವಿನಯ, ಸರಳ, ಸಾಮಾನ್ಯ ಕಾರ್ಮಿಕರಾಗಿ ಉಳಿದರು ಮತ್ತು ಚಳುವಳಿಯ ಗುರಿಯ ಕಡೆಗೆ ಇತರರನ್ನು ದುಡಿಸುವ ಮುಖಂಡರು ಆದರು. ಅವರು ನಮಗೆ ಯಾವಾಗಲೂ ಕೂಡ ಸಿಐಟಿಯು ಕೇವಲ ಕೇಂದ್ರ ಕಾರ್ಮಿಕ ಸಂಘಟನೆ ಮಾತ್ರವಲ್ಲ, ಭಾರತದ ಕಾರ್ಮಿಕ ಸಂಘಗಳ 'ಕೇಂದ್ರ' ಎಂಬುದನ್ನು ನೆನಪಿಸುತ್ತಿದ್ದರು. ಅವರು ಯಾವಾಗಲೂ 'ಕೇಂದ್ರ' ಎಂಬ ಪದಕ್ಕೆ ಒತ್ತು ನೀಡುತ್ತಿದ್ದರು. ದೇಶದಲ್ಲಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳು ಜಾರಿಯಾದ ಅವಧಿಯಲ್ಲಿ ಡಾ: ಎಂ.ಕೆ.ಪಂಧೆಯವರಿಗೆ ದಾರಿಬಿಟ್ಟು ಜವಾಬ್ದಾರಿಯಿಂದ ಬಿಡುಗಡೆಯಾಗುವವರೆಗೆ ಅಂದರೆ 2004ರವರೆಗೆ ವಾಸ್ತವಿಕವಾಗಿ ಅವರೇ ಚಳುವಳಿಯನ್ನು ಮುನ್ನಡೆಸಿದರು.

ಬಾಲಾನಂದನ್ ಅವರು ಇತ್ತೀಚಿಗಷ್ಟೇ 'ನಡೆದು ಮುಗಿಸಿದ ದಾರಿಗಳು' (ನಡೆನ್ನು ತೀರ್ತ ವಾಜಿಕ್ಕಲ್) ಎಂಬ ತಮ್ಮ ಆತ್ಮಚರಿತ್ರೆಯನ್ನು ಬರೆದರು. ಅದು ಜನವರಿ 6, 2009 ರಂದು ಪ್ರಕಟಗೊಂಡಿತು. ಆದರೆ ಅದಾಗಿ ಹದಿನೈದು ದಿನ ಕಳೆಯುವ ಮೊದಲೇ ಅವರು ತಮ್ಮ ನಡಿಗೆಯನ್ನು ನಿಲ್ಲಿಸಿದರು. ಮುಂದೆ ಹೇಳಲಾಗಿರುವ ವಿಚಾರಗಳು ಅವರೇ ತಮ್ಮ ಆತ್ಮಕತೆಯಲ್ಲಿ ಹೇಳಿಕೊಂಡಿರುವಂತಹವು.

ಅನುಕೂಲಸ್ಥ ಹಿಂದುಳಿದ ವರ್ಗದ ಮನೆಯಲ್ಲಿ

ಬಾಲಾನಂದನ್‌ರವರು ಕೇರಳ ರಾಜ್ಯದ, ಕೊಲ್ಲಮ್‌ನ ಶಕ್ತಿಕುಲಂಗರದಲ್ಲಿ ಆರ್ಥಿಕವಾಗಿ ತಕ್ಕ ಮಟ್ಟಿಗೆ ಅನುಕೂಲಸ್ಥರಾದ ಹಿಂದುಳಿದ ಸಮುದಾಯಕ್ಕೆ ಸೇರಿದ ಕುಟುಂಬದಲ್ಲಿ ಜನಿಸಿದರು. ಆದರೆ ಅವರ ತಂದೆಯವರು ತಮ್ಮ ಪತ್ನಿಯನ್ನು ಮಗುವನ್ನು ತೊರೆದು ಮತ್ತೊಂದು ಮದುವೆಯಾದ್ದರಿಂದ ಆರ್ಥಿಕವಾಗಿ ತೊಂದರೆಗೆ ಸಿಲುಕಿದರು. ಬಾಲಾನಂದನ್‌ರವರು ಹಿರಿಯ ಪ್ರಾಥಮಿಕ ಶಾಲೆಯ ಪರೀಕ್ಷೆ ಬರೆಯುವ ಮುಂಚೆಯೇ ಶಾಲೆ ಬಿಡುವಂತಾಯಿತು. ನಂತರ ಅವರ ಮಾವನ ಅಂಗಡಿಯಲ್ಲಿ ಕೆಲಸ ಮಾಡಿದರು... ಕೆಲಸ ಹುಡುಕುತ್ತಾ ನೀಲಗಿರಿಗೆ ತೆರಳಿದರು ಮತ್ತು ಕೂನೂರ್ ಮತ್ತು ಕೊಯಮುತ್ತೂರಿನ ಗುತ್ತಿಗೆಗಾರರೊಂದಿಗೆ ಕೆಲಸ ಮಾಡಿದರು. ನಂತರ ಅವರು ಕೈಗಾರಿಕೆಗಳು ಬೆಳೆದು ಬರುತ್ತಿದ್ದ ಪ್ರದೇಶವಾದ ಆಲ್ವೇಸ್‌ಗೆ ಬಂದರು. ಆ ನಂತರದಲ್ಲಿ 'ಇಂಡಿಯನ್ ಅಲ್ಯೂಮಿನಿಯಂ ಕಂಪನಿ' ಎಂದು ಕರೆಯದ ಕಟ್ಟಡದ ಗುತ್ತಿಗೆದಾರರಲ್ಲಿ ಅವರು ಕೆಲಸಕ್ಕೆ ಸೇರಿದರು. ಅವರು ಮಧ್ಯದಲ್ಲೇ ಶಾಲೆ ಬಿಟ್ಟರೂ ಜೀವನ ಪ್ರಾಯೋಗಿಕ ಜ್ಞಾನವನ್ನು ಗಳಿಸಿ ಹಾಗೂ ನಂತರ ಅವರು ಕಾರ್ಖಾನೆಯಲ್ಲಿ ಅತ್ಯಂತ ನುರಿತ ಎಲೆಟ್ರಿಷಿಯನ್ ಎಂದು ಹೆಸರಾದರು. ಬಾಲಾನಂದನ್ ಅವರ ಮುಖ್ಯವಾದ ಕೆಲಸ ವಿದ್ಯುತ್ ಬಳಕೆಯ ಆಧಾರದ ಮೇಲೆ ಅಲ್ಯುಮಿನಿಯಂ ಅನ್ನು ಉತ್ಪಾದಿಸುವುದಾಗಿತ್ತು. ಟ್ರಾವಂಕೂರ್ ಸಂಸ್ಥಾನಕ್ಕೆ ಸೇರಿದ ಆ ಆಲ್ವೇಸ್ ಪ್ರದೇಶದಲ್ಲಿ ಕೈಗಾರಿಕೆಗಳು ವೇಗವಾಗಿ ಬೆಳೆದು ಬಂದವು. ಈ ಕೈಗಾರಿಕಾ ಬೆಳವಣಿಗೆಯಿಂದಾಗಿ ಆಲೆಪ್ಪಿ, ಆಲ್ವೆಸ್‌ಗಳಲ್ಲಿ ಕಾರ್ಮಿಕ ವರ್ಗವೂ ಬೆಳೆಯಿತು ಮತ್ತು ಕಮ್ಯೂನಿಸ್ಟ್ ಪಕ್ಷವೂ ಕಾರ್ಮಿಕ ವರ್ಗದ ನಡುವೆ ಬೆಳೆಯಿತು.

ಅಲೆಪ್ಪಿಯ ನಾರು ಉದ್ದಿಮೆಯ ಕಾರ್ಮಿಕರ

ಪುಟ 15ಕ್ಕೆ

ಬಾಲಾನಂದನ್ ಬದುಕು - ಪ್ರಮುಖ ಘಟ್ಟಗಳು

- ಜನನ: 1925
- ಕಾರ್ಮಿಕ ಚಳುವಳಿಯ ಆರಂಭ : 1941
- ಕಮ್ಯೂನಿಸ್ಟ್ ಪಕ್ಷಕ್ಕೆ ಸೇರ್ಪಡೆ: 1943
- ಸಿಐಟಿಯು ಕೇರಳ ಕಾರ್ಯದರ್ಶಿ/ ಅಖಿಲ ಭಾರತ ಕಾರ್ಯದರ್ಶಿ ಮಂಡಳಿ ಸದಸ್ಯರು : 1970
- ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದು : 9ನೇ ಮಹಾಧಿವೇಶನ 1972, ಮಧುರೈ
- ಪಾಲಿಟ್‌ಬ್ಯೂರೋ ಸದಸ್ಯರು : 10ನೇ ಮಹಾಧಿವೇಶನ 1978 - 2005
- ಸಿಐಟಿಯು ಅಖಿಲ ಭಾರತ ಅಧ್ಯಕ್ಷರು : 1990 - 2002
- ಎರಡು ಬಾರಿ ಕೇರಳ ವಿಧಾನಸಭಾ ಸದಸ್ಯರು : 1967-69, 1970-76
- ಲೋಕಸಭಾ ಸದಸ್ಯರು: 1988, 2000
- ಎರಡು ಅವಧಿಗೆ ರಾಜ್ಯಸಭಾ ಸದಸ್ಯರು: 1988, 2000
- ಭೂಗತವಾಸ: ನಾಲ್ಕೂವರೆ ವರ್ಷ
- ಜೈಲುವಾಸ: 5 ವರ್ಷ
- ನಾಲ್ಕರು ಮಕ್ಕಳು
- ಮಡದಿ: ಸರೋಜಿನಿ ಬಾಲಾನಂದನ್
- ಮರಣ : ಜನವರಿ 19, 2009

ಕಾರ್ಮಿಕ ವರ್ಗದ ಆದರ್ಶಪೂರ್ಣ ನಾಯಕ - ಪ್ರಕಾಶ್‌ಕಾರಟ್

ಇ.ಬಾಲಾನಂದನ್‌ರವರು 65 ವರ್ಷಕ್ಕೂ ಹೆಚ್ಚು ಕಾಲ ಕಾರ್ಮಿಕ ವರ್ಗಕ್ಕಾಗಿ ಶ್ರಮಿಸಿ ತಮ್ಮ 84ನೇ ವಯಸ್ಸಿನಲ್ಲಿ ಮೃತರಾಗಿದ್ದಾರೆ.

ಬಾಲಾನಂದನ್‌ರವರ ಜೀವನವು ಕಾರ್ಮಿಕವರ್ಗದ ಚಳುವಳಿಯನ್ನೇ ಸಂಕೇತಿಸುತ್ತದೆ. ಕೇರಳದ ಹಾಗೂ ಕಾರ್ಮಿಕ ವರ್ಗದ ಚಳುವಳಿಯ ವಿಶಾಲ ಐಕ್ಯತೆಗೆ ಶ್ರಮಿಸುವವರಾಗಿ ಅವರು ಖ್ಯಾತರಾಗಿದ್ದರು. ನಂತರದ ದಿನಗಳಲ್ಲಿ ಸಿಐಟಿಯು ವಿನ ಅಖಿಲ ಭಾರತ ಕೇಂದ್ರದ ಭಾಗವಾಗಿ ತಮ್ಮ ಸುದೀರ್ಘ ನಾಯಕತ್ವದ ಅವಧಿಯಲ್ಲಿಯೂ ಅವರು ಕಾರ್ಮಿಕ ವರ್ಗದ ಐಕ್ಯ ಚಳುವಳಿಗಾಗಿ ನಿರಂತರವಾಗಿ ಶ್ರಮಿಸಿದರು. ಕೇರಳ ವಿಧಾನಸಭಾ ಸದಸ್ಯರಾಗಿ ಹಾಗೂ ನಂತರ ಪಾರ್ಲಿಮೆಂಟ್ ಸದಸ್ಯರಾಗಿ ಅವರು ಈ ಸಂಸದೀಯ ವೇದಿಕೆಗಳಲ್ಲಿ ಕಾರ್ಮಿಕ ವರ್ಗದ ಪ್ರಶ್ನೆಗಳನ್ನು ದೃಢವಾಗಿ ಚರ್ಚೆಗೆ ಎತ್ತಿದರು.

ಸೋವಿಯತ್ ಒಕ್ಕೂಟದ ಪತನ ಹಾಗೂ ರಶ್ಯಾದಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯೂ ಅವರ ಕ್ರಾಂತಿಕಾರಿ ಬದ್ಧತೆಯನ್ನು ವಿಚಲಿತಗೊಳಿಸಲಿಲ್ಲ. ಇದಕ್ಕೆ ಅವರ ಕಾರ್ಮಿಕ ವರ್ಗದ ದೃಷ್ಟಿಕೋನವೇ ಕಾರಣ. ಬಂಡವಾಳಶಾಹಿಯು ಶೋಷಣಾಯುಕ್ತವಾದದ್ದು ಹಾಗೂ ಅದೊಂದು ಸುಲಿಗೆಕೋರ ವ್ಯವಸ್ಥೆ, ಅದನ್ನು ಕಿತ್ತೆಸೆಯಬೇಕು ಮತ್ತು ಕಿತ್ತೆಸೆಯಲು ಸಾಧ್ಯ ಎಂಬ ಬಗ್ಗೆ ಅವರ ನಂಬಿಕೆ ಅತ್ಯಂತ ದೃಢವಾಗಿತ್ತು.

ಸಿಐಟಿಯು ಅ.ಭಾ. ಅಧ್ಯಕ್ಷರಾಗಿ ಅವರು ಸಿಐಟಿಯು ವಿನ ಪ್ರತಿಯೊಂದು ಜನರಲ್ ಕೌನ್ಸಿಲ್ ಸಭೆಗಳಲ್ಲೂ ವಿಶ್ವ ಬಂಡವಾಳಶಾಹಿಯ ಬಿಕ್ಕಟ್ಟು ಹಾಗೂ ನವ ಉದಾರೀಕರಣ ನೀತಿಗಳ ವಿರುದ್ಧದ ಜಾಗತಿಕ ಹೋರಾಟಗಳ ಕುರಿತು ಗಮನ ಸೆಳೆಯುತ್ತಿದ್ದರು. ಅವರ ಕೊನೆಗಾಲದಲ್ಲಿ ಬಾಲಾನಂದನ್‌ರವರು ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿರುವುದನ್ನು ಕಂಡರು. ಹಣಕಾಸು ಬಂಡವಾಳ ಚಾಲಿತವಾದ ಸಾಮ್ರಾಜ್ಯಶಾಹಿ ಜಾಗತೀಕರಣವು ಶಾಶ್ವತವಾಗಿ ಉಳಿಯಲಾರದಂಥದ್ದು ಎಂಬ ಅವರ ನಂಬಿಕೆಯು ದೃಢಪಟ್ಟಿದ್ದನ್ನು ನೋಡಿ ಅವರಿಗೆ ಎಷ್ಟೋ ತೃಪ್ತಿಯಾಗಿರಬೇಕು.

1989-91 ರ ಅವಧಿಯಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯು ಗಂಭೀರ ಸೈದ್ಧಾಂತಿಕ ಸವಾಲನ್ನು ಒಡ್ಡಿತು. ಬಾಲಾನಂದನ್‌ರವರು ತಮ್ಮ ಕಾಲು ಶತಮಾನಗಳ ಪಕ್ಷದ ಕೇಂದ್ರ ಭಾಗವಾಗಿ ಈ ಸವಾಲನ್ನೆದುರಿಸಿದ ಸಾಮೂಹಿಕ ನಾಯಕತ್ವದ ಭಾಗವಾಗಿದ್ದರು. ಅವರು ಈ ಪರಿಸ್ಥಿತಿಯನ್ನು ಮಾರ್ಕ್ಸ್‌ವಾದಿ - ಲೆನಿನ್‌ವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿದರು. ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ದುರ್ಬಲಗೊಳಿಸುವ ಪ್ರಯತ್ನದ ವಿರುದ್ಧ ಹಾಗೂ ಮಾರ್ಕ್ಸ್‌ವಾದ ವಿರೋಧಿ ಸಿದ್ಧಾಂತವನ್ನು ಎದುರಿಸುವ ನಿಟ್ಟಿನಲ್ಲಿ ಸಿಪಿಐ(ಎಂ) ತನ್ನ ನಿಲುವುಗಳನ್ನು ರೂಪಿಸುವ ಪ್ರಕ್ರಿಯೆಗೆ ಅವರು ತಮ್ಮ ಕೊಡುಗೆ ನೀಡಿದರು. ಅವರು ಕೇವಲ ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವುದಷ್ಟನ್ನೇ ಮಾಡುವ 'ಟ್ರೇಡ್ ಯೂನಿಯನಿಸಂ'ಗೆ ಬಲಿ ಬೀಳಲಿಲ್ಲ. ಕಾರ್ಮಿಕ ವರ್ಗದ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷ ಮುಂಚೂಣಿ ಪಾತ್ರವಹಿಸಬೇಕೆಂದು ನಂಬಿದ್ದರು.

ಒಬ್ಬ ಕಮ್ಯುನಿಸ್ಟನಾಗಿ ಬಾಲಾನಂದನ್ ಅವರ ಬದುಕು ಹಾಗೂ ಅವರು ತಮ್ಮನ್ನು ತಾವೇ ಹೇಗೆ ಸೈದ್ಧಾಂತಿಕವಾಗಿ ಸಜ್ಜುಗೊಳಿಸಿಕೊಂಡರು, ಸ್ವಯಂ ಅಧ್ಯಯನ ನಡೆಸಿದರು ಎಂಬುದು ಒಬ್ಬ ಕಮ್ಯೂನಿಸ್ಟ್ ಹಾಗೂ ಒಬ್ಬ ಕಾರ್ಮಿಕ ವರ್ಗದ ನಾಯಕ ಹೇಗೆ ತನ್ನನ್ನು ತಾನು ಸ್ವಯಂ ಸಜ್ಜುಗೊಳಿಸಿಕೊಳ್ಳಬೇಕೆಂಬುದಕ್ಕೆ ಒಂದು ಪಾಠದಂತಿದೆ. ಅಧಿಕೃತವಾದ ಶಿಕ್ಷಣವನ್ನು 8ನೇ ತರಗತಿಗೆ ಬಿಡಬೇಕಾಗಿ ಬಂದರೂ ಸಹ ಕಾರ್ಮಿಕವರ್ಗದ ಚಳುವಳಿಯ ಮೂಲಕ ಹಾಗೂ ಸ್ವಯಂ ಅಧ್ಯಯನದ ಮೂಲಕ ಅವರು ಅಧ್ಯಯನದ ಪರಿಶ್ರಮವನ್ನು ಮುಂದುವರಿಸಿದರು. ಕಾರ್ಮಿಕ ವರ್ಗದ ನಾಯಕರು ಹೇಗೆ ಬೆಳೆದುಬರುತ್ತಾರೆಂಬುದಕ್ಕೂ ಬಾಲಾನಂದನ್‌ರವರ ಬದುಕು ಒಂದು ಉದಾಹರಣೆಯಾಗಿದೆ.

ಬಾಲಾನಂದನ್‌ರವರು ನೆಮ್ಮೆಲ್ಲರಿಗೂ ಪ್ರೀತಿಪಾತ್ರರಾದ 'ಸ್ವಾಮಿ'ಯಾಗಿಯೇ ಪರಿಚಿತರು. 1985 ರಲ್ಲಿ ನಾನು ಪಕ್ಷದ ಕೇಂದ್ರಕ್ಕೆ ಸೇರಿದ ನಂತರ ಎರಡು ದಶಕಗಳ ಕಾಲ ನಾನು ಅವರೊಂದಿಗೆ ಕೆಲಸ ಮಾಡಿದ್ದೇನೆ. 'ಸ್ವಾಮಿ' ಕೇವಲ ಒಬ್ಬ ಕಾಮ್ರೇಡ್ ಮಾತ್ರವಲ್ಲದೇ ಒಬ್ಬ ಸ್ನೇಹಿತರೂ ಆಗಿದ್ದರು. ಅವರ ಸದಭಿರುಚಿಯ ಹಾಸ್ಯಪ್ರಜ್ಞೆ, ತಮಾಷೆಯ ಪ್ರವೃತ್ತಿಯಿಂದಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅವರು ತಮ್ಮ ಕೊನೆಗಾಲದ ಅನಾರೋಗ್ಯವನ್ನು ಧೀರ ಸಂಯಮದಿಂದ, ಕಷ್ಟ ಸಹಿಷ್ಣುತೆಯಿಂದ ಎದುರಿಸಿದರು. ತನ್ನದೆಲ್ಲವನ್ನು ಕಾರ್ಮಿಕವರ್ಗಕ್ಕಾಗಿ ಸಮರ್ಪಿಸಿಕೊಂಡ ನಾಯಕರೊಬ್ಬರು ಕಮ್ಯೂನಿಸ್ಟ್ ಪಕ್ಷ ಹಾಗೂ ಕಾರ್ಮಿಕ ಚಳುವಳಿಗೆ ಮಹತ್ತರವಾದ ಕೊಡುಗೆ ನೀಡಿದ ತೃಪ್ತಿಯೊಂದಿಗೆ ಬದುಕು ಮುಗಿಸಿದ್ದಾರೆ. ○

ಕಟ್ಟಡ ಕಟ್ಟುವವರು ಇತಿಹಾಸ ನಿರ್ಮಿಸಿದರು.....

ಪುಟ 6 ರಿಂದ

ಕಡಿಮೆ ಸಂಗ್ರಹವಾಗಲಿದ್ದು, ರಾಜ್ಯದ 10 ಲಕ್ಷ ಕಟ್ಟಡ ಕಾರ್ಮಿಕರು ಇದರಿಂದ ಬಾಧಿತರಾಗಲಿದ್ದಾರೆ. ಕಲ್ಯಾಣ ಮಂಡಳಿಯ ಸಮರ್ಪಕ ಕಾರ್ಯ ನಿರ್ವಹಣೆಗೆ ಸಿಬ್ಬಂದಿಗಳ ನೇಮಕಾತಿ ನಡೆಯಬೇಕು ಎಂದರು.

ರಾಜ್ಯ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಎನ್.ವೀರಾಸ್ವಾಮಿ ಉಪಾಧ್ಯಕ್ಷ ಜಿ.ಎನ್.ನಾಗರಾಜ್ ಕೂಡಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮತ್ತೋರ್ವ ಉಪಾಧ್ಯಕ್ಷ ಬಿ.ಎಂ.ಭಟ್, ಸ್ವಾಗತ ಸಮಿತಿಯ ಅಧ್ಯಕ್ಷ ಕೆ.ಆರ್.ಶ್ರೀಯಾನ್ ಕಾರ್ಯದರ್ಶಿ ವಸಂತ ಆಚಾರಿ ಉಪಸ್ಥಿತರಿದ್ದರು.

ತನ್ನ ಇತಿಹಾಸದಲ್ಲಿ ಅಚ್ಚಳಿಯದ ದಿನವನ್ನಾಗಿ ಜನವರಿ 19ನ್ನು ದಾಖಲಿಸಿಕೊಂಡ ಮಂಗಳೂರು ನಗರವು ಕಟ್ಟಡ ಕಾರ್ಮಿಕರು ನೀಡಿದ ಹೊಸ ಸ್ಫೂರ್ತಿ, ಹುರುಪುಗಳೊಂದಿಗೆ, ಕೋಮುವಾದಿಗಳಿಂದ ತನಗಂಟಿರುವ ಕಳಂಕವನ್ನು ತೊಡೆದು ಹಾಕಲು ಮೈ ಕೊಡವಿ ಎದ್ದು ನಿಂತಿದೆ. ಒಳ್ಳೆಯ ನಾಳೆಯ ದಿನಗಳ ನಿರೀಕ್ಷೆಯಲ್ಲಿ.

ಸಮ್ಮೇಳನವನ್ನು ಮೆರಗುಗೊಳಿಸಿದ ಮಾಧ್ಯಮಗಳು

ಇತ್ತೀಚಿನ ದಿನಗಳಲ್ಲಷ್ಟೇ ಸುದ್ದಿ ಮಾಡುತ್ತಿರುವ ಸಂಘಟನೆಯಾದ ಕಟ್ಟಡ ಕಾರ್ಮಿಕರ ಅಖಿಲ ಭಾರತ ಸಮ್ಮೇಳನಕ್ಕೆ ಇಷ್ಟೊಂದು ಪ್ರಚಾರ ಸಿಕ್ಕೀತೆಂದು ಯಾರೂ ಭಾವಿಸಿರಲಿಲ್ಲ. ಸಮ್ಮೇಳನದ ಉದ್ಘಾಟನಾ ಸಮಾರಂಭ ಮತ್ತು ರ್‍ಯಾಲಿ ಬಹಿರಂಗಸಭೆಗಳ ಬಗ್ಗೆ ನಗರದ ಎಲ್ಲಾ ಟಿ.ವಿ. ಮತ್ತು ಪತ್ರಿಕಾಕೋದ್ಯಮಗಳು ವ್ಯಾಪಕ ಪ್ರಚಾರ ನೀಡಿದವು. ಇತ್ತೀಚಿನ ದಿನಗಳಲ್ಲಿ ಒಂದು ನಿರ್ದಿಷ್ಟ ಕಾರ್ಯಕ್ರಮಕ್ಕೆ ಪ್ರಚಾರ ಸಿಕ್ಕಿರುವುದು ಗಮನೀಯವೆಂಬುದು ಮಂಗಳೂರು ನಾಗರೀಕರ ಅನಿಸಿಕೆ. ಪ್ರತಿಯೊಂದು ಪತ್ರಿಕೆಯೂ ಎರಡರಿಂದ ಮೂರು ಛಾಯಾಚಿತ್ರಗಳೊಂದಿಗೆ ಸುದೀರ್ಘ ವರದಿಯನ್ನು ಪ್ರಕಟಿಸಿದವು. ರಾಷ್ಟ್ರೀಯ ಟಿ.ವಿ.ಮಾಧ್ಯಮಗಳೂ ಸಮ್ಮೇಳನಕ್ಕೆ ಪ್ರಾಶಸ್ತ್ಯ ನೀಡಿದವು. ಸ್ಥಳೀಯ ಟಿ.ವಿ. ಛಾನೆಲ್‌ಗಳಲ್ಲೆವೂ ಸುದ್ದಿಯನ್ನು ವಿಶೇಷ ಮರು ಪ್ರಸಾರ ಮಾಡಿದವು. ಕರಾವಳಿಯ ಒಂದು ಜನಪ್ರಿಯ ಟಿ.ವಿ.ಚಾನಲ್ ಒಂದು ಸಮ್ಮೇಳನದ 2 ದಿನಗಳ ಬಳಿಕ 'ನಿರ್ಮಾಣ ಮಾಡುವವರನ್ನು ನಿರ್ನಾಮ ಮಾಡಬೇಡಿ' ಎಂಬ ಹೆಸರಿನಲ್ಲಿ ಅರ್ಧ ತಾಸಿನ ವಿಶೇಷ ಕಾರ್ಯಕ್ರಮ ಪ್ರಸಾರ ಮಾಡಿತು.

'ವಿಜಯಕರ್ನಾಟಕ' ಪತ್ರಿಕೆಯು ಮೆರವಣಿಗೆಕಾರರ ಶಿಸ್ತುಬದ್ಧತೆಯನ್ನು ಕೊಂಡಾಡಿದರೆ, 'ಕರಾವಳಿ ಅಲೆ'ಯು ಮಂಗಳೂರಿನಲ್ಲಿ ಬೆಳೆಯುತ್ತಿರುವ ಪ್ರಗತಿಪರ ಚಳುವಳಿಯೆಂದು ಗುರುತಿಸಿತು. ಬೇರೆಯವರಿಗೆ ಮನೆ ಕಟ್ಟಿದ ನಮಗೆ ಗುಡಿಸಲೇ ಗತಿ' ಎಂಬ 'ಹಿಂದೂ' ಪತ್ರಿಕೆಯ ಸುದೀರ್ಘ ವರದಿ ಗಮನ ಸೆಳೆದವು.ಪ್ರಜಾವಾಣಿ ಪತ್ರಿಕೆ 'ಕೆಂಪಾದವೋ... ' ಎಂದರೆ, ಸಂಜೆವಾಣಿ 'ಕೆಂಬಾವುಟ ಜಿಂದಾಬಾದ್'... ಎಂದಿತು. ಟೈಮ್ ಆಫ್ ಇಂಡಿಯಾ 'ಏಕತೆಯ ರ್‍ಯಾಲಿ' ಎಂದು ಚಿತ್ರ ಪ್ರಕಟಿಸಿತು.

ಒಟ್ಟಾರೆಯಾಗಿ ಶ್ರೀಸಾಮಾನ್ಯ ಬದುಕಿನ ಬವಣೆಗಳ ಬಗ್ಗೆ ವಿಮುಖರಾಗಿ ಸರಕು ಕಾರ್ಪೋರೇಟ್ ಸಂಸ್ಕೃತಿಗೆ ಮಾಧ್ಯಮಗಳು ಒತ್ತು



ಕೊಡುತ್ತಿರುವ ಸಂದರ್ಭದಲ್ಲಿ ಮಂಗಳೂರಿನ ಮಾಧ್ಯಮಗಳು ಈ ಬಾರಿ ಅಸಂಘಟಿತ ದುಡಿಯುವ ಜನಸಾಮಾನ್ಯರ ಬಗ್ಗೆ ವಿಶೇಷ ಕಾಳಜಿಯಿಂದ ವರದಿ ಮಾಡಿದುದು ಸರ್ವತ್ರ ಮೆಚ್ಚುಗೆಗೆ ಪಾತ್ರವಾಯಿತು.

ಚುನಾವಣಾ ಕಣಕ್ಕೆ

ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ಅಸಂಘಟಿತ ಕಾರ್ಮಿಕರ ವಿರೋಧಿ ನೀತಿ ಅನುಸರಿಸುತ್ತಿವೆ. ಹೀಗಾಗಿ ಮುಂದಿನ ಮೂರು ತಿಂಗಳ ಕಾಲ ಲೋಕಸಭಾ ಚುನಾವಣಾ ಪೂರ್ವ ಆಂದೋಲನವನ್ನು ಹಮ್ಮಿಕ್ರೊಳ್ಳಲಾಗುತ್ತಿದೆ. ಕಟ್ಟಡ ನಿರ್ಮಾಣ ಕಾರ್ಮಿಕರ ಕುಟುಂಬವನ್ನು ಭೇಟಿಯಾಗಿ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳಿಗೆ ಮತ ನೀಡುವಂತೆ ಮನವಿ ಮಾಡಲಾಗುವುದು ಎಂದು ಚಕ್ರಬರ್ತಿ ತಿಳಿಸಿದರು.

ಕೇಂದ್ರದ ಯುಪಿಎ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು ಕಟ್ಟಡ ಕಾರ್ಮಿಕರ ಪರ ಕೇಂದ್ರ ಸರ್ಕಾರ ಇಲ್ಲ. ಅಸಂಘಟಿತ ಕಾರ್ಮಿಕರ ಮಸೂದೆಯನ್ನು ದೇಶದ ಕೆಲವೇ ಕೆಲವು ರಾಜ್ಯಗಳು ಮಾತ್ರ ಜಾರಿಗೆ ತಂದಿದ್ದು, ಉಳಿದ ರಾಜ್ಯಗಳು ಜಾರಿಗೊಳಿಸದಿದ್ದಲ್ಲಿ ಕೇಂದ್ರ ಮೌನವಹಿಸಿದೆ ಎಂದರು.

'ಅಸಂಘಟಿತರಿಗೆ ಲಾಲಿ ಪಪ್'

ಬಜೆಟ್‌ನಲ್ಲಿ ಹಣ ನೀಡದ ಕೇಂದ್ರ ಸರ್ಕಾರ ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವ ಕಾರಣ ಅಸಂಘಟಿತ ಕಾರ್ಮಿಕರ ಮಸೂದೆ ಮಂಡಿಸುವ ಮೂಲಕ ಅಸಂಘಟಿತ ಕಾರ್ಮಿಕರಿಗೆ 'ಲಾಲಿಪಪ್' ಆಸೆ ತೋರಿಸಿದೆ ಎಂದು ಚಕ್ರಬರ್ತಿ ಟೀಕಿಸಿದರು.

ಸಿಡಬ್ಲ್ಯೂಎಫ್‌ಐಯ ಉಪಾಧ್ಯಕ್ಷ ಕೆ.ವಿ.ಜೋಸ್ ಮಾತನಾಡುತ್ತಾ ಕೇರಳದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಹೋರಾಟದ ಪರಂಪರೆಯೇ ಇದೆ. ಹೀಗಾಗಿಯೇ ಕೇರಳದ ಎಡರಂಗ ಸರ್ಕಾರ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದೆ. ಅಲ್ಲಿ 1 ಲಕ್ಷ ಮಂದಿಗೆ ಪೆನ್ಷನ್ ಲಭಿಸುತ್ತಿದೆ. ಒಂದು ಲಕ್ಷ 60 ಸಾವಿರ ಮಂದಿಗೆ ಕ್ಷೇಮ ನಿಧಿ ಸವಲತ್ತು ಇದೆ. ಅಪಘಾತ ಪರಿಹಾರವನ್ನು 2 ಲಕ್ಷ ರೂ.ಗಳಿಗೆ ಏರಿಸಲಾಗಿದೆ. 2010ರ ಒಳಗಾಗಿ ಕೇರಳದಲ್ಲಿ ಪ್ರತಿಯೊಬ್ಬರಿಗೂ ಮನೆಯನ್ನು ಕಟ್ಟಿಕೊಡಲು ಸರ್ಕಾರ ನಿರ್ಧರಿಸಿರುವುದು ನಿರ್ಮಾಣ ಕ್ಷೇತ್ರಕ್ಕೆ ಆಶಾದಾಯಕ ಎಂದರು.

ಸಿಡಬ್ಲ್ಯೂಎಫ್‌ಐಯ ಅಧ್ಯಕ್ಷ ಸಿಂಗಾರುವೇಲು, ಇನ್ನೊರ್ವ ಮುಂದಾಳು ಆಂಧ್ರಪ್ರದೇಶದ ಪೊಟ್ಟಂ ರಾಜು, ರಾಜ್ಯ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎನ್.ವೀರಾಸ್ವಾಮಿ, ಅಂಗನವಾಡಿ ನೌಕರರ ಮುಂದಾಳು ವರಲಕ್ಷ್ಮಿ ಸಮಾರಂಭದಲ್ಲಿ ಮಾತನಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಕೆ.ಆರ್.ಶ್ರೀಯಾನ್ ಪ್ರತಿನಿಧಿಗಳಿಗೆ ಸ್ವಾಗತ ಕೋರಿದರು. ಬಿ.ಮಾಧವ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನಕ್ಕೆ ಸ್ಫೂರ್ತಿಯುತ ಚಾಲನೆ ನೀಡಿದ ಉದ್ಘಾಟನಾ ಸಮಾರಂಭ

ಕರ್ನಾಟಕ ರಾಜ್ಯದಲ್ಲಿ 10 ಲಕ್ಷ ಕಟ್ಟಡ ಕಾರ್ಮಿಕರು ದುಡಿಯುತ್ತಿದ್ದಾರೆ. ಅಸಂಘಟಿತ ವಲಯದ ಬಹುದೊಡ್ಡ ವಿಭಾಗವಾದ ಕಟ್ಟಡ ಕಾರ್ಮಿಕರ ದುಃಖದುಮ್ಮಾನ ಅಭದ್ರತೆಯ ಬದುಕಿಗೆ ಆಸರೆಯಾದದ್ದು ಸಿಐಟಿಯು. ಸುಮಾರು 2003ರಲ್ಲಿ ಬೆಂಗಳೂರು, ಮಂಗಳೂರು, ಉಡುಪಿ ಮತ್ತಿತರ ಕಡೆ ಸಿಐಟಿಯು ನಾಯಕತ್ವದಲ್ಲಿ ಸಂಘಟನೆಯ ಕೆಲಸಗಳು ಆರಂಭಗೊಂಡವು. ಫಲವಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಫೆಡರೇಷನ್ ಹುಟ್ಟಿಕೊಂಡಿತು. ಫೆಡರೇಷನ್ ನಡೆಸಿದ ಹೋರಾಟದ ಫಲವಾಗಿ 2006ರಲ್ಲಿ 40 ಸಾವಿರ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿ ಮಾಡಿಕೊಂಡಿದ್ದಾರೆ.

ಇಂತಹ ಎಳೆಯ ಕಾರ್ಮಿಕ ಸಂಘಟನೆಯ ಪ್ರಥಮ ರಾಜ್ಯ ಸಮ್ಮೇಳನವನ್ನು ನಡೆಸುವ ಮಹತ್ವದ ಜವಾಬ್ದಾರಿ ಮಂಗಳೂರಿನ ಸಂಗಾತಿಗಳ ಹೆಗಲ ಮೇಲೆ ಬಿತ್ತು. ಜವಾಬ್ದಾರಿಯನ್ನು ಸವಾಲಾಗಿ ತೆಗೆದುಕೊಂಡ ಮಂಗಳೂರಿನ ವಿವಿಧ ಕಾರ್ಮಿಕ, ನೌಕರರ ಸಂಘಟನೆಗಳು ಹಿರಿಯ ಸಂಗಾತಿ ಕೆ.ಆರ್. ಶ್ರೀಯಾನ್ ಅಧ್ಯಕ್ಷತೆಯಲ್ಲಿ ಸಂಗಾತಿ ವಸಂತ ಆಚಾರಿಯವರ ಕಾರ್ಯದರ್ಶಿ ಜವಾಬ್ದಾರಿಯಲ್ಲಿ ಅಲ್ಪ ಕಾಲಾವಧಿಯಲ್ಲಿ ಅಚ್ಚುಕಟ್ಟಾಗಿ ಸಮ್ಮೇಳನವನ್ನು ಚಿರಸ್ಮರಣೀಯಗೊಳಿಸಲು ಶ್ರಮಪಟ್ಟಿತು. ಅನುಭವದ ಕೊರತೆಯಿರುವ ಕಟ್ಟಡ ಕಾರ್ಮಿಕ ಸಂಗಾತಿಗಳಿಗೆ ಇತರ ವಿಭಾಗದ ಕಾರ್ಮಿಕ ಸಂಗಾತಿಗಳು, ಮಧ್ಯಮವರ್ಗದ ನೌಕರರ ಸಂಘಟನೆಗಳು ಬೆಂಗಾವಲಾಗಿ ನಿಂತವು. ನಿರೀಕ್ಷೆ, ಶ್ರಮ ಹುಸಿಯಾಗಲಿಲ್ಲ. ಪ್ರಥಮ ರಾಜ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸು ಕಂಡು ಕರ್ನಾಟಕದ ರಾಜ್ಯದ ಕಾರ್ಮಿಕ ಚಳುವಳಿಯ ಇತಿಹಾಸದ ಪುಟಗಳಿಗೆ ಸೇರ್ಪಡೆಯಾಯಿತು.

ಉತ್ಸಾಹಭರಿತ ಚಾಲನೆ

ಜನವರಿ 18 ರಂದು ಬೆಳಿಗ್ಗೆ ಕಾಂ:ಪಿ.ರಾಮಚಂದ್ರ ರಾವ್ ನಗರ (ಮಂಗಳಾದೇವಿ ಬಳಿಯ ಕುಲಾಲಭವನ) ಕೆಲವು ತಳಿರುತೋರಣಗಳಿಂದ ಕಂಗೊಳಿಸುತ್ತಿತ್ತು. 10.30ಕ್ಕೆ ಸರಿಯಾಗಿ ಕೇಂದ್ರ ನಾಯಕರುಗಳ ಉಪಸ್ಥಿತಿಯಲ್ಲಿ ಫೆಡರೇಷನ್ ಅಧ್ಯಕ್ಷ ಬಿ.ಮಾಧವ ಧ್ವಜಾರೋಹಣ ಮಾಡಿದಾಗ ಮುಗಿಲು ಮುಟ್ಟುವ ಘೋಷಣೆಗಳು. ಹುತಾತ್ಮ ಸಂಗಾತಿಗಳಿಗೆ ಕೆಂಪು ವಂದನೆ ಬಳಿಕ ಕಾಂ:ಸೂರ್ಯ ನಾರಾಯಣ್ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ಆರಂಭ.

ಭಾರತ ನಿರ್ಮಾಣ ಕಾರ್ಮಿಕರ ಫೆಡರೇಷನ್(ಸಿಡಬ್ಲ್ಯೂಎಫ್‌ಐ) ಪ್ರಧಾನ ಕಾರ್ಯದರ್ಶಿ ಕಾಂ:ದೇಬಾಂಜನ್ ಚಕ್ರವರ್ತಿ ಸಮ್ಮೇಳನಕ್ಕೆ ತಮ್ಮ ಉದ್ಘಾಟನಾ ಮಾತುಗಳ ಮೂಲಕ ಸ್ಫೂರ್ತಿಯುತ ಚಾಲನೆ ನೀಡಿದರು. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ನಿರ್ಮಾಣ ಕ್ಷೇತ್ರದ ಮೇಲೂ ಬಿದ್ದಿದ್ದು, ಈ ಕ್ಷೇತ್ರದಲ್ಲೂ ಕೆಲಸ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಶೇ.15 ರಿಂದ 20 ರಷ್ಟು ಕಡಿಮೆ ಕೂಲಿಯಲ್ಲಿ ಬಲವಂತವಾಗಿ ಕೆಲಸ ಮಾಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದ ಅವರು ನಿರ್ಮಾಣ ಕ್ಷೇತ್ರದ ಶೇ.60 ಮಾರುಕಟ್ಟೆಯನ್ನು ವಿದೇಶಿ ಕಂಪನಿಗಳು ಆವರಿಸಿವೆ. ಈ ಕಂಪನಿಗಳು ತಮ್ಮ ದೇಶದಲ್ಲಿ ಶೇ.5 ಕೂಡಾ ಲಾಭಗಳಿಸಲು ಸಾಧ್ಯವಾಗಿಲ್ಲ. ಆದರೆ ನಮ್ಮ ದೇಶದಲ್ಲಿ ಶೇ.20 ರಷ್ಟು ಲಾಭಗಳಿಸುತ್ತಿವೆ. ತಮ್ಮ ದೇಶದ ಕಾರ್ಮಿಕರು, ಯಂತ್ರೋಪಕರಣಗಳೊಂದಿಗೆ ಬರುವ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶದ ನಿರ್ಮಾಣ ಕ್ಷೇತ್ರದ ಸಾಮಗ್ರಿಗಳ ಉದ್ದಿಮೆಗೂ ಹಾನಿಯುಂಟು ಮಾಡಿ ಲಾಭವನ್ನು ಮಾತ್ರ ತಮ್ಮ ದೇಶಕ್ಕೆ ಕೊಂಡೊಯ್ಯುತ್ತಿವೆ ಎಂದು ಚಕ್ರವರ್ತಿ ಆರೋಪಿಸಿದರು.

ಮುಂದುವರೆದ ದೇಶಗಳ ಹಣಕಾಸು ಬಿಕ್ಕಟ್ಟಿನ ದುಷ್ಪರಿಣಾಮಗಳು ಈಗ ನಮ್ಮಲ್ಲಿಯೂ ಕಾಣಲಾರಂಭಿಸಿದೆ. ಲಕ್ಷಾಂತರ ಕಾರ್ಮಿಕರು ಕೆಲಸ ಕಳಕೊಳ್ಳುವ ಭೀತಿ ನಿಜವಾಗುತ್ತಿದೆ. ಈಗಾಗಲೇ ಸುಮಾರು 10 ಲಕ್ಷ ಉದ್ಯೋಗಗಳು ಇಲ್ಲವಾಗಿವೆ ಎಂದು ಅಂದಾಜು ಮಾಡಲಾಗಿದೆ. ಅದು ಒಂದು ಕೋಟಿಯನ್ನು ತಲುಪಬಹುದು ಎಂದು ಅಸ್ಸೋಚಾಮ್ ಅಂದಾಜು ಹಾಕಿದೆ.

ಭಾರತದ ಮೇಲೂ ಜಾಗತಿಕ ಬಿಕ್ಕಟ್ಟಿನ ಕರಿನೆರಳು


ಮುಂದುವರೆದ ಬಂಡವಾಳಶಾಹಿ ದೇಶಗಳನ್ನು ತತ್ತರಗೊಳಿಸಿದ ಜಾಗತಿಕ ಹಣಕಾಸು ಬಿಕ್ಕಟ್ಟು ಭಾರತವನ್ನು ಅವುಗಳಷ್ಟು ತಟ್ಟಿಲ್ಲ. ನಮ್ಮ ಪರಿಸ್ಥಿತಿ ಇತರ ಹಲವು ದೇಶಗಳಿಗಿಂತ ಉತ್ತಮವಾಗಿದೆ. ಆ ದೇಶಗಳಲ್ಲಿ ಖಾಸಗಿ ಬ್ಯಾಂಕುಗಳು ಅಂತರ್‌ರಾಷ್ಟ್ರೀಯ ಗೋಜಲಿನಲ್ಲಿ ಆಳವಾಗಿ ಸಿಲುಕಿಕೊಂಡಂತೆ ಭಾರತದಲ್ಲಿ ಆಗಿಲ್ಲ. ಏಕೆಂದರೆ ನಮ್ಮ ದೇಶದ ನವ-ಉದಾರವಾದಿಗಳು ಶತಪ್ರಯತ್ನ ಪಟ್ಟರೂ ಇಲ್ಲಿನ ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಅವರಿಗಾಗಿಲ್ಲ. ಹಣಕಾಸು ಚಟುವಟಿಕೆಗಳ ಮೇಲೆ ಇನ್ನೂ ಸಾಕಷ್ಟು ನಿಯಂತ್ರಣಗಳು ಇವೆ. ಇದಕ್ಕೆ ಬಹು ಮುಖ್ಯವಾಗಿ ಕಾರ್ಮಿಕ ಸಂಘಗಳ, ಎಡ ಪಕ್ಷಗಳ ಹಾಗೂ ಕಾರ್ಮಿಕರ, ನೌಕರರ ಚಳುವಳಿಗಳ ಒತ್ತಡಗಳು ಕಾರಣ. ಹಣಕಾಸು ವ್ಯವಸ್ಥೆಯಲ್ಲಿ ಪರಿಣಾಮಕಾರಿ ನಿಯಂತ್ರಣಗಳನ್ನು ಉಳಿಸಿಕೊಳ್ಳಲು ಸತತ ಹೋರಾಟಗಳು ನಡೆದಿವೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರಗಳು ಬಯಸಿದಂತೆ 'ಹಣಕಾಸು ವಲಯದ ಸುಧಾರಣೆ'ಗಳನ್ನು ಜಾರಿಗೊಳಿಸಲು ಬಿಟ್ಟಿದ್ದರೆ ಈ ಜಾಗತಿಕ ಹಣಕಾಸು ಬಿಕ್ಕಟ್ಟಿನ ಪರಿಣಾಮಗಳು ಇನ್ನಷ್ಟು ವಿನಾಶಕಾರಿಯಾಗಿರುತ್ತಿದ್ದವು.

ಆದರೂ, ಭಾರತದಲ್ಲೂ ಶೇರು ಮಾರುಕಟ್ಟೆಗಳು ಕುಸಿದಿವೆ. ಇದಕ್ಕೆ ಮುಖ್ಯ ಕಾರಣ ವಿದೇಶಿ ಸಾಂಸ್ಥಿಕ ಹೂಡಿಕೆದಾರರು. ಕಳೆದ ವರ್ಷ 1740 ಕೋಟಿ ಡಾಲರುಗಳಷ್ಟು ಹಣ ಹೂಡಿದ್ದ ಅವರು ಈ ವರ್ಷ ಸುಮಾರಾಗಿ ನಾಪತ್ತೆಯಾದಂತಿದೆ. 2008ರಲ್ಲಿ ಅವರು 1310 ಕೋಟಿ ಡಾಲರು(ಸುಮಾರು 65000ಕೋಟಿ ರೂಪಾಯಿಗಳು) ಮಾರಿದ್ದಾರಂತೆ! ಡಾಲರಿಗೆ ಎದುರಾಗಿ ರೂಪಾಯಿ ಮೌಲ್ಯ 20 ಶೇ. ಇಳಿಯಿತು. ಭಾರತೀಯ ರಿಸರ್ವ್ ಬ್ಯಾಂಕ್ ಒಂದು ದಿನಕ್ಕೆ 200 ಕೋಟಿ ಡಾಲರುಗಳಷ್ಟು ಮಾರಬೇಕಾಗಿ ಬಂತು. ಇದರಿಂದ ಭಾರತದ ವಿದೇಶೀ ವಿನಿಮಯ ಮೀಸಲು ಇಳಿಮುಖಗೊಂಡಿದೆ.

ರಫ್ತು ಮಾರುಕಟ್ಟೆಯಲ್ಲಿ ಇಳಿಕೆ

ಭಾರತದ ಆರ್ಥಿಕದ ಮೇಲೆ ಜಾಗತಿಕ ಹಿಂಜರಿತದ ನಿಜವಾದ ಪರಿಣಾಮ ಕಾಣುತ್ತಿರುವುದು ನಮ್ಮ ರಫ್ತು ಮಾರುಕಟ್ಟೆಯಲ್ಲಿ ಮತ್ತು ಕೈಗಾರಿಕಾ ಬೆಳವಣಿಗೆಯ ಕ್ಷೇತ್ರದಲ್ಲಿ. ಮುಂದುವರೆದ ದೇಶಗಳಲ್ಲಿ



ಆರ್ಥಿಕದ ನಿಧಾನಗತಿಯಿಂದ ಅವುಗಳು ಆಮದುಗಳಲ್ಲಿ ಕಡಿತ ಮಾಡುತ್ತಿವೆ. ಇದು ನಮ್ಮ ರಫ್ತು ಮಾರುಕಟ್ಟೆಯನ್ನು ತಟ್ಟುತ್ತಿದೆ. ನಮ್ಮ ರಫ್ತು ಆಧಾರಿತ ಉದ್ದಿಮೆಗಳು ಭಾಗಶಃ ಅಥವ ಪೂರ್ಣವಾಗಿ ಮುಚ್ಚಿಹೋಗುತ್ತಿವೆ.

ರಫ್ತುಗಳು ನಮ್ಮ ಒಟ್ಟು ಆಂತರಿಕ ಉತ್ಪನ್ನದಲ್ಲಿ 22 ಶೇ. ಪಾಲು ನೀಡುತ್ತವೆ. ನವಂಬರ್ 2008ರಲ್ಲಿ ನಮ್ಮ ರಫ್ತುಗಳ ಡಾಲರ್ ಮೌಲ್ಯ 1150 ಕೋಟಿ. ನವಂಬರ್ 2007ರಲ್ಲಿ ಇದು 1270 ಕೋಟಿ ಡಾಲರುಗಳು. ಅಂದರೆ ಸುಮಾರು 10 ಶೇ. ಇಳಿಕೆಯಾಗಿದೆ. 5000ಕೋಟಿ ಡಾಲರುಗಳಷ್ಟು ಆದಾಯದ ಮಾಹಿತಿ ತಂತ್ರಜ್ಞಾನ ವಲಯ ನಮ್ಮ ರಫ್ತಿನ 16 ಶೇ.ದಷ್ಟು ಕೊಡುತ್ತಿತ್ತು. ಈಗ ಅದರ ಆದಾಯ ಅರ್ಧಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇಳಿದಿದೆ ಎಂದು ಅಂದಾಜು ಮಾಡಲಾಗಿದೆ.ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವೂ 2007ಕ್ಕೆ ಹೋಲಿಸಿದರೆ 0.4ಶೇ. ಇಳಿದಿದೆ. ಹೀಗೆ ಇಳಿಕೆಯಾಗುತ್ತಿರುವುದು ಕಳೆದ 15 ವರ್ಷಗಳಲ್ಲಿ ಇದೇ ಮೊದಲು. ಅದರಲ್ಲೂ ತಯಾರಿಕಾ ವಲಯದಲ್ಲಿ 1.2ಶೇ.ದಷ್ಟು ಇಳಿಕೆಯಾಗಿದೆ. ಅಕ್ಟೋಬರ್ 2007ರಲ್ಲಿ 13.8ಶೇ. ಬೆಳವಣಿಗೆ ದಾಖಲಾಗಿತ್ತು. ಅದೀಗ 12.6ಶೇ. ಕ್ಕೆ ಇಳಿದಿದೆ. ವಾಣಿಜ್ಯ ಬೆಳೆಗಳ ಬೆಲೆಗಳೂ ಕುಸಿದಿವೆ.

ಇದರಿಂದಾಗಿ ಲಕ್ಷಾಂತರ ಕಾರ್ಮಿಕರು ಉದ್ಯೋಗ ಕಳಕೊಳ್ಳುವ ಭೀತಿ ನಿಜವಾಗುತ್ತಿದೆ. ಕಳೆದ ವರ್ಷವೇ ತಿರುಪ್ಪೂರ್ ಒಂದರಲ್ಲೇ 40 ಸಾವಿರ ಗಾರ್ಮೆಂಟ್ ಕಾರ್ಮಿಕರು ಉದ್ಯೋಗ ಕಳಕೊಂಡಿದ್ದಾರೆ, ಸಿದ್ಧ ಉಡುಪುಗಳು ಮಾತ್ರವಲ್ಲ, ಚರ್ಮ ಮತ್ತು ಆಭರಣ ಉದ್ದಿಮೆಗಳಲ್ಲೂ ರಫ್ತು ಆರ್ಡರುಗಳು ಕಡಿಮೆಯಾಗಿವೆ ಎಂದು ಸರಕಾರ ಒಪ್ಪಿಕೊಂಡಿದೆ.

ಉದ್ಯೋಗ ನಷ್ಟ ಆರಂಭವಾಗಿದೆ

ಜಾಗತಿಕ ಹಣಕಾಸು ಬಿಕ್ಕಟ್ಟಿನ ಬಿಸಿ ಬೆಂಗಳೂರಿನ ಆರು ಲಕ್ಷ ಗಾರ್ಮೆಂಟ್ ಕಾರ್ಮಿಕರನ್ನು ತಕ್ಷಣವೇ ತಟ್ಟಿದೆ. ಅಮೆರಿಕ, ಯುರೋಪುಗಳಲ್ಲಿ ಜನ ಸಿದ್ಧ ಉಡುಪುಗಳ ಖರೀದಿಯನ್ನು ಕಮ್ಮಿ ಮಾಡಿರುವುದರಿಂದ ಇಲ್ಲಿನ ಗಾರ್ಮೆಂಟ್ ಉದ್ದಿಮೆಗೆ ಆರ್ಡರುಗಳ ಪ್ರಮಾಣ 10ಶೇಕಡಾದಷ್ಟು ಇಳಿದಿದೆ. ಇದರಿಂದ ದೊಡ್ಡ ಘಟಕಗಳು ಲೇ-ಆಫ್ ಆರಂಭಿಸಿವೆ. ಹಲವು ಸಣ್ಣ ಘಟಕಗಳು ಮುಚ್ಚಿ ಕಾರ್ಮಿಕರು ಉದ್ಯೋಗ ಕಳಕೊಂಡಿದ್ದಾರೆ. ಕೆಲವೆಡೆ ದಿನಗೂಲಿಗಳು ಇಳಿದಿವೆ. 147ರೂ. ಇದ್ದದ್ದು 120ರೂ.ಗೆ ಇಳಿದಿದೆ. 'ಸಂಬಳ ಕಮ್ಮಿಯೆನಿಸಿದರೆ ಕೆಲಸ ಬಿಡಬಹುದು' ಎಂದು ಹೇಳಲಾಗುತ್ತಿದೆಯಂತೆ.

ಕರ್ನಾಟಕ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರ ಪ್ರಕಾರ ಈ ಹಣಕಾಸು ವರ್ಷದ ಉತ್ತರಾರ್ಧದಲ್ಲಿ ವ್ಯಾಪಾರ-ವ್ಯವಹಾರಗಳಲ್ಲಿ 20 ರಿಂದ 25 ಶೇಕಡಾ ಇಳಿಕೆಯಾಗಬಹುದು. ಕೆಲವು ರಫ್ತುದಾರರಿಗೆ ವರ್ಷದ ಕೊನೆಯ ವರೆಗೆ ಆರ್ಡರುಗಳಿವೆ. ಆಮೇಲೆ ಆರ್ಡರ್ ಪುಸ್ತಕ ಖಾಲಿಯಾಗಿದೆ. ಇನ್ನು ಕೆಲವರ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆಯಂತೆ. ಯುರೋಪು, ಅಮೆರಿಕಾದಿಂದ ಬರಬೇಕಾದ ಹಣ ಬರುತ್ತಿಲ್ಲ, ಅವನ್ನು ಮುಂದೂಡಲಾಗುತ್ತಿದೆ. ಆಟೋಮೊಬೈಲ್ ಉದ್ದಿಮೆ ತೀವ್ರ ಬಿಕ್ಕಟ್ಟಿಗೆ ಒಳಗಾಗುತ್ತಿದೆ. ಅದರಿಂದಾಗಿ ಆಟೋ ಬಿಡಿಭಾಗಗಳ ಘಟಕಗಳು ತೀವ್ರ ಸಂಕಟ ಎದುರಿಸುತ್ತಿವೆ. ವಿದೇಶಿ ಕಾರು ತಯಾರಕರು ಆರ್ಡರುಗಳನ್ನು ಮುಂದೂಡುತ್ತಿದ್ದಾರೆ ಅಥವಾ ರದ್ದು ಮಾಡುತ್ತಿದ್ದಾರೆ. ರಫ್ತು ಬೆಲೆಗಳೂ ಕುಸಿಯುತ್ತಿವೆ. ಈ ಹಿನ್ನೆಲೆಯಲ್ಲಿ ವಿದೇಶಗಳ ಕೆಲವು ಆಮದುದಾರರು ಈಗಾಗಲೇ ಆಗಿರುವ ಕಾಂಟ್ರಾಕ್ಟುಗಳನ್ನು ಪರಿಷ್ಕರಿಸಬೇಕು ಎಂದು ಕೇಳುತ್ತಿದ್ದಾರೆ. ಗುಜರಾತಿನಲ್ಲಿ ಮುತ್ತು-ರತ್ನಗಳ ವ್ಯಾಪಾರದಲ್ಲಿ ಒಂದು ಲಕ್ಷ ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಸಣ್ಣ ಪ್ರಮಾಣದ ಉದ್ದಿಮೆ ವಲಯದಲ್ಲಂತೂ ಎಲ್ಲೆಲ್ಲೂ ಕರಾಳ ಛಾಯೆ ಹರಡಿದೆ.

ಈಗಾಗಲೇ ಸುಮಾರು 10 ಲಕ್ಷ ಉದ್ಯೋಗಗಳು ಇಲ್ಲವಾಗಿವೆ ಎಂದು ಅಂದಾಜು ಮಾಡಲಾಗಿದೆ. ಅದು ಒಂದು ಕೋಟಿಯನ್ನು ತಲುಪಬಹುದು ಎಂದು ಅಸ್ಸೋಚಾಮ್ ಅಂದಾಜು ಹಾಕಿದೆ. ಇತ್ತೀಚಿನ ವರೆಗೂ ನಮ್ಮ ಸರಕಾರೀ ವಕ್ತಾರರು ಭಾರತದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ 10 ಶೇ. ತಲುಪುತ್ತದೆ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಅದೀಗ 2008-09ರಲ್ಲಿ 7ಶೇ. ಕ್ಕೆ ಇಳಿಯುತ್ತಿದೆ. 2009ರಲ್ಲಿ ಅದು ಇನ್ನಷ್ಟು ತೀವ್ರಗೊಳ್ಳಬಹುದೆಂಬ ಆತಂಕವೂ ಇದೆ. ಇವೆಲ್ಲಾ ಸಹಜವಾಗಿಯೇ ಉದ್ಯೋಗಗಳು, ಉದ್ಯೋಗದ ಪರಿಸ್ಥಿತಿಗಳು ಮತ್ತು ಕಾರ್ಮಿಕರ, ಜನಸಾಮಾನ್ಯರ ಆದಾಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಇದೆಲ್ಲಾ ಭಾರತವನ್ನು ಕೂಡಾ ಆರ್ಥಿಕ ಹಿಂಜರಿತದತ್ತ ತಳ್ಳಬಹುದು ಎಂಬ ಆತಂಕ ಸಹಜವಾಗಿಯೇ ಮೂಡಿದೆ.

ಫೆಬ್ರವರಿ 5 : ಅಸಂಘಟಿತ ಕಾರ್ಮಿಕರ ಬೆಂಗಳೂರು ಚಲೋ

ಅಸಂಘಟಿತ ಕಾರ್ಮಿಕರ ಬವಣೆಗಳ ವಿರುದ್ಧ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನೇತೃತ್ವದಲ್ಲಿ ಬೆಂಗಳೂರು ಚಲೋ ನಡೆಯಲಿದೆ. ಕಾರ್ಮಿಕರ ಬದುಕನ್ನು ನಿರ್ಲಕ್ಷಿಸುತ್ತಿರುವ ಕರ್ನಾಟಕ ಬಿಜೆಪಿ ಸರ್ಕಾರವನ್ನು ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಒತ್ತಾಯಿಸಲು ರಾಜ್ಯದ ಮೂಲೆ ಮೂಲೆಗಳಿಂದ ಬರುತ್ತಿರುವ ಕಾರ್ಮಿಕ ದಂಡನೊಂದಿಗೆ ನೀವು ಸೇರಿ, ಬೆಂಗಳೂರಿಗೆ ಬನ್ನಿ.

50 ಲಕ್ಷ ಸಹಿ ಸಂಗ್ರಹ ಚಳುವಳಿ - 50 ಸಾವಿರ ಜನರ ಬೃಹತ್ ರ್‍ಯಾಲಿ

ಈ ಸಿಐಟಿಯು ಕರೆಯನ್ನು ಯಶಸ್ವಿಗೊಳಿಸಿ

ಜನವರಿ 30 ರಾಜ್ಯಾದ್ಯಂತ ಪ್ರತಿಭಟನೆ

ಹುಬ್ಬಳ್ಳಿಯ ಬಾಂಬ್ ಸ್ಫೋಟದ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಭಯೋತ್ಪಾದನೆ ಹೆಸರಿನಲ್ಲಿ ಕೋಮುದ್ವೇಷ ಬೆಳೆಯುವುದನ್ನು ತಡೆಯಲು, ಕರಾವಳಿ ಅಲೆ ಪತ್ರಿಕೆಯ ಮೇಲಿನ ದಾಳಿಯನ್ನೂ ಒಳಗೊಂಡಂತೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಬ್ಬಾಳಿಕೆ ವಿರೋಧಿಸಿ ರಾಜ್ಯಾದ್ಯಂತ ಮಹಾತ್ಮಗಾಂಧೀಜಿ ಹುತಾತ್ಮರಾದ ದಿನವಾದ ಜನವರಿ 30 ರಂದು ರಾಜ್ಯಾದ್ಯಂತ ಪ್ರತಿಭಟನಾ ಧರಣಿ. ಬೆಂಗಳೂರಿನಲ್ಲಿ 30 ರಂದು ಬೆಳಿಗ್ಗೆ 11 ಗಂಟೆಗೆ ಗಾಂಧಿ ಪ್ರತಿಮೆಯ ಬಳಿ ಭಾಗವಹಿಸುವವರು ಸುಭಾಷಿಸಿ ಅಲಿ ಮುಂತಾದವರು.

ಜಗದಗಲ

ಶರತ್‌ಚಂದ್ರ

ಇಸ್ರೇಲಿ ನಾಯಕರ ವಿರುದ್ಧ ಅಂತರ್ರಾಷ್ಟ್ರೀಯ ಕೋರ್ಟಿಗೆ ದೂರು

ಗಾಝಾದಲ್ಲಿ ನಿಲ್ಲದ ಇಸ್ರೇಲಿ ನರಮೇಧದಲ್ಲಿ ಈಗಾಗಲೇ 1400 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಗಾಝಾದ ಶೇ. 15 ರಷ್ಟು ಮೂಲಸೌಕರ್ಯಗಳು ನಾಶವಾಗಿವೆ. 140


ಮ್ಯಾಡ್ರಿಡ್

ಕೋಟಿ ಡಾಲರಿನಷ್ಟು ಆಸ್ತಿ ಪಾಸ್ತಿ ನಾಶವಾಗಿದೆ. ಆದರೂ ಇಸ್ರೇಲ್ ಈ ವರೆಗೆ ಕದನವಿರಾಮದ ಅಂತರ್ರಾಷ್ಟ್ರೀಯ ಒತ್ತಾಯಕ್ಕೆ ಮಣಿದಿಲ್ಲ. ಬುಶ್ ತಮ್ಮ ವಿದಾಯದ ಕಾಣಿಕೆಯಾಗಿ ಗಾಝಾ ಕದನ ವಿರಾಮಕ್ಕೆ ಕರೆ ಕೊಡುವ ಭದ್ರತಾ ಸಮಿತಿ ನಿರ್ಣಯ ವಿರುದ್ಧ ವಿಟೋ ಬಳಸಿದರು. ಹೊಸ ಅಧ್ಯಕ್ಷ ಒಬಾಮಾ ಈ ವರೆಗೆ ಈ ಬಗ್ಗೆ ಚಕಾರವೆತ್ತಿಲ್ಲ. ಆದರೆ ಈ ಇಸ್ರೇಲಿ ಹಠಮಾರಿತನದಿಂದಾಗಿ ಅದರ ತನ್ನ ಎಲ್ಲಾ ಬೆಂಬಲಿಗರನ್ನು ಕಳೆದುಕೊಂಡಿದೆ - ಅಮೆರಿಕದ ಸರ್ಕಾರ ಬಿಟ್ಟು. ಈವರೆಗೆ 'ತಟಸ್ಥ'ರಾಗಿದ್ದವರೂ ಗಾಝಾ ನರಮೇದದ ವಿರುದ್ಧ ತಮ್ಮ ದನಿಯೆತ್ತಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ ತೀವ್ರವಾಗಿ ಖಂಡಿಸಿದೆ. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಸಹ ಗಾಝಾದಲ್ಲಿ ವಿಶ್ವಸಂಸ್ಥೆಯ ಪರಿಹಾರ ಕೇಂದ್ರಗಳ ಮೇಲೆ ದಾಳಿಯನ್ನು ಖಂಡಿಸಿ ಈ ಬಗ್ಗೆ ಸ್ವತಂತ್ರ ಅಂತರ್ರಾಷ್ಟ್ರೀಯ ತನಿಖೆ ಆಗಬೇಕು ಎಂದು ಹೇಳಿದ್ದಾರೆ. ಯುದ್ಧ ಅಪರಾಧಗಳಿಗಾಗಿ ಇಸ್ರೇಲಿ ನಾಯಕರನ್ನು ಅಂತರ್ರಾಷ್ಟ್ರೀಯ ಕೋರ್ಟಿನ ಎದುರು ವಿಚಾರಣೆಗೆ ಗುರಿಪಡಿಸಬೇಕು ಎಂಬ ಒತ್ತಾಯಕ್ಕೆ ಭಾರೀ ಅಂತರ್ರಾಷ್ಟ್ರೀಯ ಬೆಂಬಲ ದೊರಕುತ್ತಿದೆ. 'ಮಾನವ ಹಕ್ಕುಗಳ ವಾಚ್' ಎಂಬ ಅಂತರ್ರಾಷ್ಟ್ರೀಯ ಸಂಘಟನೆ ಇದನ್ನು ಬೆಂಬಲಿಸಿದೆ. ಅಮೆರಿಕಾ ಮತ್ತು ಇಸ್ರೇಲ್ ಅಂತರ್ರಾಷ್ಟ್ರೀಯ ಕೋರ್ಟಿನ ಅಧಿಕಾರ ಮನ್ನಿಸುವ ಒಪ್ಪಂದಕ್ಕೆ ಸಹಿ ಹಾಕಿಲ್ಲದಿದ್ದರೂ, ಯಾವುದೇ ಗಂಭೀರ ನರಮೇಧ ಮತ್ತು ಯುದ್ಧ ಅಪರಾಧ ಎಸಗುವ ವ್ಯಕ್ತಿಗಳ ವಿಚಾರಣೆ ನಡೆಸಲು ಅವಕಾಶ ಇದೆ. ಆದಕ್ಕೆ ಬೊಲಿವಿಯಾ ಅಧ್ಯಕ್ಷ ಅಧಿಕೃತವಾಗಿ ಈ ಬಗ್ಗೆ ಅಂತರ್ರಾಷ್ಟ್ರೀಯ ಕೋರ್ಟಿಗೆ ದೂರು ಸಲ್ಲಿಸಿದ್ದಾರೆ. ವೆನೆಝುವೇಲಾ ಮತ್ತು ಬೊಲಿವಿಯಾ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ ಕಡಿದು ಕೊಂಡಿವೆ. ಇಸ್ರೇಲಿನ ವಿರುದ್ಧ ಇಡೀ ಲ್ಯಾಟಿನ್ ಅಮೆರಿಕನ್ ದೇಶಗಳ ಸಮುದಾಯ ಸಾಮಾನ್ಯ ನೀತಿ ಅನುಸರಿಸಿ ಸಾಮೂಹಿಕ ಕಾರ್ಯಾಚರಣೆಗೆ ತೊಡಗಲಿವೆ ಎಂದು ಬೊಲಿವಿಯಾ ಅಧ್ಯಕ್ಷರು ಹೇಳಿದ್ದಾರೆ.


ಲಂಡನ್




ಸಿಯೋಲ್

ಗಾಝಾ ನರಮೇಧದ ವಿರುದ್ಧ ಜಗದಗಲ ಭಾರೀ ಪ್ರತಿಭಟನೆಗಳು

ಅರಬ್ ಜನತೆ ಕೋಪದಿಂದ ಕುದಿಯುತ್ತಿದ್ದಾರೆ. ಕಳೆದ ವಾರ ಜಗದಗಲಕ್ಕೂ ಲಕ್ಷಾಂತರ ಜನ ಭಾರೀ ಪ್ರತಿಭಟನೆಗಳನ್ನು ಮಾಡಿದರು. ಸ್ಪೈನ್ ನಿಂದ ಇಂಡೋನೇಶ್ಯಾ, ಬೊಲಿವಿಯಾದಿಂದ ಕೊರಿಯಾಯಾವರೆಗೆ ಭಾರೀ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ಇಲ್ಲಿ ಇರುವ ಹಲವು ಫೋಟೋಗಳು ಇದಕ್ಕೆ ಸಾಕ್ಷಿ.


ಮ್ಯಾಂಡ್ರಿಡ್


ಇಸ್ತಾಂಬುಲ್

ಸ್ಪೈನ್‌ನ ರಾಜಧಾನಿ ಮೆಡ್ರೀಡ್‌ನಲ್ಲಿ ನಡೆದ ಅತಿ ದೊಡ್ಡ ಪ್ರತಿಭಟನೆಯಲ್ಲಿ ಎರಡು ವರೆ ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಗಾಝಾ ಈಗ ನಾಜೀ ಕ್ಯಾಂಪು ಎಂಬುದು ಪದೇ ಪದೇ ಪೋಸ್ಟರುಗಳಲ್ಲಿ ಘೋಷಣೆಗಳಲ್ಲಿ ಕೇಳಿ ಬಂತು.

ಲಂಡನ್‌ನಲ್ಲಿ ಹಲವು ದಿನಗಳಿಂದ ಇಸ್ರೇಲಿ ರಾಯಭಾರ ಕಚೇರಿಯ ಎದುರು ನಡೆಯುತ್ತಿದ್ದ ಪ್ರತಿಭಟನೆ ತಾರಕಕ್ಕೆ ತಲುಪಿ ಒಂದು ಲಕ್ಷಕ್ಕೂ ಹೆಚ್ಚಿನ ಜನ ಸೇರಿದಾಗ ಅವರನ್ನು ತಡೆಯಲು ಪ್ರಯತ್ನಿಸಿದ ಪೋಲೀಸರ ಜತೆ ಭಾರೀ ಘರ್ಷಣೆ ಮತ್ತು ಹಿಂಸಾಚಾರ ನಡೆಯಿತು.

ಯುರೋಪಿನಲ್ಲಿ ಜರ್ಮನಿ, ಇಟಲಿ, ನಾರ್ವೇ ಇತ್ಯಾದಿ ದೇಶಗಳ ಹಲವು ನಗರಗಳಲ್ಲಿ ನೂರಾರು ಪ್ರತಿಭಟನಾ ಪ್ರದರ್ಶನಗಳು ನಡೆದ ವರದಿಗಳು ಬಂದಿವೆ.

ಏಶ್ಯದಲ್ಲಿ ಅತಿ ದೊಡ್ಡ ಪ್ರದರ್ಶನ ನಡೆದದ್ದು ಇಂಡೋನೇಶ್ಯಾದ ರಾಜಧಾನಿ ಜಕಾರ್ತಾದಲ್ಲಿ.

ದಕ್ಷಿಣ ಕೊರಿಯಾದ ಸಿಯೋಲ್ ನಲ್ಲಿ ಸಹ ದೊಡ್ಡ ಪ್ರದರ್ಶನ ನಡೆಯಿತು.

ಅರಬ್ ದೇಶಗಳಲ್ಲಂತೂ ಪ್ರತೀ ದಿನ ಆಕ್ರೋಶದ ಪ್ರತಿಭಟನೆಗಳು ಕಂಡು ಬಂದಿವೆ.



ತೆಹರಾನ್


ಜಕಾರ್ತ

ತಪ್ಪು-ಒಪ್ಪು

ಸಮುದಾಯ ಪದಾಧಿಕಾರಿಗಳು

ಜನವರಿ 11, 2009 ರ 'ಜನಶಕ್ತಿ' ಸಂಚಿಕೆ 2 ರಲ್ಲಿ ಸಮುದಾಯ ರಾಜ್ಯ ಸಮ್ಮೇಳನದ ವರದಿ ಪ್ರಕಟವಾಗಿದ್ದು, ಆದರಲ್ಲಿ ಶಶಿಧರ ಬಾರಿಘಾಟ್, ಬೆಂಗಳೂರು, ಡಿ.ಬಿ.ಬಡಿಗೇರ ಹರಪನಹಳ್ಳಿ ಇವರುಗಳು ಸಹ ಕಾರ್ಯದರ್ಶಿಗಳೆಂದು ಪ್ರಕಟವಾಗಿದೆ. ವಾಸ್ತವವಾಗಿ ಅವರುಗಳು ರಾಜ್ಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಗಮನಿಸಲು ಕೋರಿದೆ.

'ಪರ್ಯಾಯ' ವಲ್ಲ 'ಶಕ್ತಿ'

ಜನವರಿ 25, 2009ರ ದಿನಾಂಕದ 'ಜನಶಕ್ತಿ' ಸಂಚಿಕೆ 4 ರಲ್ಲಿ ಪುಟ 7 ರಲ್ಲಿ 'ಮೂರನೇ ಪರ್ಯಾಯ ಒಗ್ಗೂಡುತ್ತಿರುವ ಶಕ್ತಿ' ಎಂಬ ಲೇಖನವಿದೆ. ಇಲ್ಲಿ 'ಮೂರನೇ ಪರ್ಯಾಯ' ಎಂಬುದಕ್ಕೆ ಬದಲಿಗೆ 'ಮೂರನೇ ಶಕ್ತಿ' ಎಂದು ಗ್ರಹಿಸಬೇಕಾಗಿದೆ ಕೋರಿದೆ.

ಸಂ.

ಶಿರಾ : ಜಾಗೃತಿ ಸಮಾವೇಶ, ವಿಭಜನೆಯ ವೇಶ

ಕರ್ನಾಟಕವನ್ನು ಕೋಮುದ್ವೇಷದ ಕುಂಡವನ್ನಾಗಿಸಬೇಕೆಂದು ಸಂಘ ಪರಿವಾರ ತೀರ್ಮಾನಿಸಿದಂತಿದೆ. ಶಾಂತಿ-ಸೌಹಾರ್ದತೆ-ನಾಗರೀಕರ ನೆಮ್ಮದಿಗೆ ಬೆಳೆಯುತ್ತಿರುವಾಗ, ಆ ದಾವಾಗ್ನಿಯನ್ನು ಆರಿಸದೇ ಇನ್ನಷ್ಟು ಉರಿಸುವ ಯತ್ನಗಳು ನಡೆದಿವೆ. ಈಗ ರಾಜ್ಯದಲ್ಲಿ 'ಹಿಂದೂ ಜನಜಾಗೃತಿ ಸಮಾವೇಶ' ಗಳೆಂಬ ಉತ್ಸವ ಕೇವಲ ಧಾರ್ಮಿಕ ಸ್ವರೂಪದಲ್ಲಿರದೇ ಕೋಮುವಾದದ ಕಿಚ್ಚುಹಚ್ಚುವ ರಾಜಕೀಯ ಸ್ವರೂಪ ಪಡೆದಿದೆ. ರಾಜ್ಯದಾದ್ಯಂತ ಇಂತಹ ಪ್ರಯತ್ನಗಳಿಗೆ ಜನರ ಸ್ಪಂದನ ಕಡಿಮೆ ಎಂಬ ವರದಿಗಳಿವೆ. ತುಮಕೂರು ನಗರದಲ್ಲಿಯೇ ಕೇವಲ ಒಂದೆರಡು ಸಾವಿರ ಜನರನ್ನು ಸೇರಿಸಲು ಸಾಧ್ಯವಾಗಲಿಲ್ಲ. ಕುಣಿಗಲ್ ತಾಲ್ಲೂಕಿನಲ್ಲಿ ಹೆಚ್ಚೆಂದರೆ ನಾಲ್ಕು ನೂರು ಜನವಂತೆ. ಆದರೆ ಸಂಘ ಪರಿವಾರದ ಯತ್ನ ನಿಂತಿಲ್ಲ. ಲೋಕಸಭೆ ಚುನಾವಣೆವರೆಗೂ ನಿಲ್ಲುವುದೂ ಇಲ್ಲ. ಆ ನಂತರ - ನಿಲ್ಲಲಿಕ್ಕಿಲ್ಲ! ಅದರಂತೆ ಜನವರಿ 23ರ ಶುಕ್ರವಾರದಂದು ಶಿರಾ ನಗರದಲ್ಲಿ ಆರ್.ಎಸ್.ಎಸ್. ಆಯೋಜಿಸಿದ್ದ ಹಿಂದೂ ಸಮಾಜೋತ್ಸವಕ್ಕೂ ಇದೇ ಗತಿಯಲ್ಲಿದ್ದರೆ?

ಅದಕ್ಕಾಗಿ ಮಧ್ಯಾಹ್ನ 'ಶೋಭಾಯಾತ್ರೆ' ನಗರದ ಹಳೇ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುತ್ತಿತ್ತು. ಅದು ಮುಸ್ಲಿಮರೇ ಅತ್ಯಧಿಕ ವಾಸವಿರುವ ಪ್ರದೇಶಕ್ಕೆ ಬಂದಾಗ ಅಲ್ಲಿ ನಮಾಜ್ ನಡೆಯುತ್ತಿತ್ತು. ಅಲ್ಲಿನ ಪಾರ್ಕ್ ಮೊಹಲ್ಲಾದೊಳಗೆ ಮೆರವಣಿಗೆ ಹೋಗಲೇಬೇಕೆಂದು ಮೆರವಣಿಗೆಕಾರರು ಪಟ್ಟು ಹಿಡಿದಿದ್ದಾರೆ.

ಇದನ್ನು ಪೋಲೀಸರು ನಿರಾಕರಿಸಿ ನಿಗದಿತ ದಾರಿಯಲ್ಲೇ ಸಾಗಿರಿ ಎಂದು ಹೇಳಿದ್ದಾರೆ. ಮುಸ್ಲಿಂ ಮುಖಂಡರೂ ಕೂಡ ಬೇಡವೆಂದು ಮನವಿ ಮಾಡಿದ್ದಾರೆ. ಆದರೆ ಇದನ್ನು ಕೇಳದ ಸಂಘ ಪರಿವಾರ ಅಲ್ಲಿ ಹೋಗುವುದಾಗಿ ಹೇಳಿ ಒಳಗೆ ನುಗ್ಗಿದ್ದಾರೆ. ಅದು ಸಣ್ಣ ಓಣಿ. ಹಾದಿಯಲ್ಲಿ ಹೋಗುವುದೇ ಕಷ್ಟ. ಈ ನಡುವೆಯೇ ಕಲ್ಲು ತೂರಾಟ ಆರಂಭವಾಗಿದೆ. ಎರಡು ಗುಂಪುಗಳೂ ಪರಸ್ಪರ ಕಲ್ಲು ತೂರಾಟಕ್ಕಿಳಿದಿದ್ದಾರೆ. ಗಲಭೆ ಹೆಚ್ಚಾಗಿ ಒಬ್ಬಾತನಿಗೆ ಚೂರಿ ಇರಿತವಾದ ವರದಿ ಇದೆ. ಆರು ಗಂಟೆಗೆ ಸಮಾವೇಶ ಆರಂಭವಾಗಬೇಕು. ಆಗ ಗುಂಪೊಂದು ಬೀದಿಗಿಳಿದು ಖಾಸಗಿ ಬಸ್ ನಿಲ್ದಾಣದ ಬಳಿಯ ಎಂಟು ಅಂಗಡಿಗಳನ್ನು ಆಯ್ದು ಬೆಂಕಿ ಹಚ್ಚಿ ಸುಟ್ಟಿದ್ದಾರೆ. ಅವರು ಮುಸ್ಲಿಮರಿಗೆ ಸೇರಿದ ಅಂಗಡಿಗಳು. ನಂತರ ಕಲ್ಲು ತೂರಾಟ, ಗಲಭೆ ಮುಂದುವರೆದಿದೆ. ಈಗ ಕಲಮು 144 ನಿಷೇದಾಜ್ಞೆ ಹೇರಲಾಗಿದೆ, ಸ್ಥಿತಿ ನಿಯಂತ್ರಣದಲ್ಲಿದೆ ಎಂದು ಪೋಲಿಸ್ ವರಿಷ್ಠಾಧಿಕಾರಿ ಹೇಳಿದ್ದಾರೆ. ಆದರೆ ಅದು ಬೂದಿ ಮುಚ್ಚಿದ ಕೆಂಡ.

ಶಿರಾದಲ್ಲಿ ಇಂತಹ ಗಲಭೆ ಸೃಷ್ಟಿಸಿದರೆ ಅದು ತುಮಕೂರು ಜಿಲ್ಲೆ ಮಾತ್ರವಲ್ಲದೇ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೂ ಪ್ರಭಾವಿಸುತ್ತವೆ ಎಂಬುದು ಲೆಕ್ಕಾಚಾರ ಎಂದು ಸಂಘ ಪರಿವಾರದ ನಡೆ ನುಡಿ ಚೆನ್ನಾಗಿ ಗೊತ್ತಿರುವವರು ಹೇಳುತ್ತಾರೆ. ಇದು ಸುಳ್ಳೇನಲ್ಲ. ಈಗ ಎಲ್ಲವೂ ಎಲ್ಲಾ ದಾರಿಗಳೂ ಕೃತ್ಯಗಳೂ ಸೇರುವುದು ಅಲ್ಲಿಗೆ. ಅಡ್ವಾಣಿ ಪ್ರಧಾನಿಯಾಗಿಸುವಲ್ಲಿಗೆ!. ಲೋಕಸಭೆ ಸೀಟುಗಳು ಕನಿಷ್ಠ ರಾಜ್ಯದಿಂದ 25 ಗಳಿಸಬೇಕೆಂಬಲ್ಲಿಗೆ . ಇದೀಗ ಬಂದ ಸುದ್ದಿ - ಬೆಂಕಿ ಹಚ್ಚಿದವರೇ ಕೇಸ್ ಹಾಕಿದ್ದಾರೆ.

ಅಗಲಿದ ಚೇತನ............

ಪುಟ 11ರಿಂದ

ನಡುವಿನ ಕಮ್ಯುನಿಸ್ಟ್ ಮುಖಂಡರು-ಅಲ್ವೇಸ್‌ನ ಕಾರ್ಮಿಕರು ಕಾರ್ಮಿಕ ಸಂಘಗಳ ಅಡಿಯಲ್ಲಿ ಸಂಘಟಿತರಾಗಲು ಸಹಾಯ ಮಾಡಿದರು. ಇಂಡಾಲ್ (INDAL) ನ ಒಬ್ಬ ಅತ್ಯಂತ ನುರಿತ ಕಾರ್ಮಿಕರಾಗಿದ್ದ ಇ.ಬಾಲಾ ನಂದನ್‌ರವರು ತಮ್ಮ ಕಾರ್ಖಾನೆಯಲ್ಲಿ ಮಾತ್ರವೇ ಅಲ್ಲ ತಮ್ಮ ಪ್ರದೇಶದ ಇತರ ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸುವುದರಲ್ಲೂ ನುರಿತವರಾಗಿ ಬೆಳೆದರು.

ಕೇವಲ 20 ವರ್ಷದ ಯುವಕ ಬಾಲಾನಂದನ್ ಟ್ರಾವಂಕೂರಿನ ಅತ್ಯಂತ ತೀವ್ರತಮ ಹೋರಾಟಗಾರರೂ ಹಾಗೂ ರಾಜಕೀಯ ಬದ್ಧತೆಯುಳ್ಳವರು ಆದ ಕಾರ್ಮಿಕರ ನಾಯಕರಾಗಿ ಬೆಳೆದು ಬಂದರು.

ಬಾಲಾನಂದನ್‌ರವರು ಅಲ್ಯೂಮಿ ನಿಯಂ ಕಾರ್ಖಾನೆ ಕಾರ್ಮಿಕರ ಮುಖಂಡರಾಗಿದ್ದಾಗ ಒಮ್ಮೆ ಕಾರ್ಮಿಕ ಚಳುವಳಿಯ ಇತರ ಸ್ವಯಂ ಸೇವಾ ಸಂಗಾತಿಗಳೊಂದಿಗೆ ಕಾರ್ಖಾನೆಯ ಜನರಲ್ ಮ್ಯಾನೇಜರ್ ಕಛೇರಿಗೆ ಹೋದರಂತೆ, ಕೆನಡಾ ದೇಶದ ಆ ಜನರಲ್ ಮ್ಯಾನೇಜರ್ ಕಿಟಕಿಯಿಂದ ಎಗರಿ ಓಡಿ ಹೋದನಂತೆ...!!

ಬಾಲಾನಂದನ್‌ರವರಿಗಾಗಲಿ, ಅವರ ಜೊತೆಗಿದ್ದವರಿಗಾಗಲಿ ಯಾರ ಮೇಲೂ ಆಕ್ರಮಣ ಮಾಡುವ ಉದ್ದೇಶವೇನಿರಲಿಲ್ಲ. ಅವರೆಲ್ಲಾ ಕಾಂ: ಬಿ.ವಿ.ಥಾಮಸ್ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದವರು. ಬಾಲಾನಂದನ್ ಮತ್ತು ಟಿ.ವಿ.ಥಾಮಸ್ ರವರು ಅಳವಡಿಸಿಕೊಂಡ ಧೋರಣೆ 'ತ್ರಿಪಕ್ಷಿಯತೆ' (ಕಾರ್ಮಿಕ, ಮಾಲೀಕ, ಸರ್ಕಾರದ ಪ್ರತಿನಿಧಿಗಳು ಸೇರಿ ಚರ್ಚಿಸಿ ಸಮಸ್ಯೆ ಪರಿಹಾರಕ್ಕೆ ಯತ್ನಿಸುವ ವಿಧಾನ) ಅದು ಇದೆ ಅಲ್ವೇಸ್ ಪ್ರದೇಶದಲ್ಲಿ ರೂಪುಗೊಂಡಿತು.

1946 ಸೆಪ್ಟೆಂಬರ್ 28ರಂದು ಕೊಲ್ಲಮ್‌ನಲ್ಲಿ ನಡೆದ ಟ್ರಾವಂಕೂರ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಸಂಸ್ಥಾಪನಾ ಸಮ್ಮೇಳನದ ಸಂದರ್ಭದಲ್ಲಿ ಕಾಂ: ಬಾಲಾನಂದನ್ ಕೂಡ ಒಬ್ಬ ಮುಖಂಡರಾಗಿದ್ದರು. ಈ ಸಮ್ಮೇಳನವು ಕರೆ ನೀಡಿದ ಸಾರ್ವತ್ರಿಕ ಮುಷ್ಕರವು ಟ್ರಾವಂಕೂರು ಸಂಸ್ಥಾನ ಮುಂದೆ ಸ್ವಾತಂತ್ರ್ಯ ಗಳಿಸಿದಾಗ ಭಾರತ ಒಕ್ಕೂಟದ ಭಾಗವಾಗಬೇಕೆಂಬ ರಾಜಕೀಯ ಬೇಡಿಕೆಯಾಗಿ ಪರಿವರ್ತಿತವಾಯಿತು.

ಸಹಸ್ರಾರು ಜನರು ತೀವ್ರತರವಾದ ಈ ಹೋರಾಟಕ್ಕೆ ಸೇರಿದರು. ಇದರ ಒಂದು ಪರಿಣಾಮವೇ ಪುನ್ನಪ್ರ ವಯಲಾರ್ ಬಂಡಾಯ. ಈ ಬಂಡಾಯವನ್ನು ಹತ್ತಿಕ್ಕಲು ದಿವಾನ್ ಸರ್.ಸಿ.ಪಿ.ರಾಮಸ್ವಾಮಿ ಅಯ್ಯಂಗಾರ್ ತೀವ್ರ ದಮನ ನಡೆಸಿದನು. ನೂರಾರು ಕಾರ್ಯಕರ್ತರು ಹುತಾತ್ಮರಾದರು. ಅಲ್ವೇಸ್‌ನಲ್ಲಿ ಮುಷ್ಕರದ ನೇತೃತ್ವದ ವಹಿಸಿದ್ದ ಬಾಲಾನಂದನ್‌ರನ್ನು ಜೈಲಿಗಟ್ಟಲಾಯಿತು.


ಟ್ರಾವಂಕೂರ್ ಪ್ರಾಂತದ - ರಾಜಕೀಯವಾಗಿ ಸಂಘಟಿತವಾದ ಕಾರ್ಮಿಕ ವರ್ಗದ ಈ ಹೋರಾಟವು ಕಮ್ಯೂನಿಸ್ಟ್ ಪಕ್ಷದ ಮುಂದಿನ ಸಾಧನೆಗೆ ಭದ್ರಬುನಾದಿ ಹಾಕಿತು. ಇದಾದ ಹತ್ತು ವರ್ಷಗಳ ತರುವಾಯ 1957ರಲ್ಲಿ ಕೇರಳದಲ್ಲಿ ಇ.ಎಂ.ಎಸ್. ನೇತೃತ್ವದ ಕಮ್ಯೂನಿಸ್ಟ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿತು.

ಇ.ಎಂ.ಎಸ್. ಮಂತ್ರಿ ಮಂಡಳವು ಅಲಪುಜ್ಹಾದಲ್ಲಿ ವಯಲಾರ್ ಹೋರಾಟದ ಹುತಾತ್ಮರ ಸ್ಮಾರಕ ನಿರ್ಮಿಸಲಾಗಿರುವ ಜಾಗದಲ್ಲಿ ಪ್ರಮಾಣ ವಚನ ಸ್ವೀಕರಿಸಿತು. 'ಹುತಾತ್ಮರು ಮತ್ತೆ ಎದ್ದು ಬರುತ್ತಾರೆ ಮತ್ತು ಹೋರಾಟದ ಜ್ವಾಲೆಯನ್ನು ದೇಶದುದ್ದಗಲ ಹರಡುತ್ತಾರೆ ಮತ್ತು ವಿಮೋಚನೆಗಾಗಿ ಹೋರಾಡುತ್ತಾರೆ' ಎಂದು ಮಹಾಕವಿಗಳು ಬರೆದಿದ್ದಾರೆ.

ಕಾಂ: ಇ.ಬಾಲಾನಂದನ್ ವಾಸ್ತವವಾಗಿ ಇಂತಹ ಈ ಹುತಾತ್ಮ ಸಂಗಾತಿಗಳ ಅಚ್ಚಿನಲ್ಲಿ ತಯಾರಾದವರು. ಹುತಾತ್ಮ ಸಂಗಾತಿಗಳ ತ್ಯಾಗ ಬಲಿದಾನದಿಂದಾಗಿ ಹೋರಾಟದ ಕಿಚ್ಚು ದೇಶದ ಮೂಲೆ ಮೂಲೆಗೂ ಹರಡಿತು. 1978ರಲ್ಲಿ ಬಾಲಾನಂದನ್ ಪಾಲಿಟ್‌ಬ್ಯೂರೋಗೆ ಆಯ್ಕೆಯಾದದ್ದು ಹಾಗೂ 1990 ರಿಂದ 2004 ರವರೆಗೆ ಸಿಐಟಿಯುವಿನ ಅಖಿಲ ಭಾರತ ಅಧ್ಯಕ್ಷರಾಗಿದ್ದು, ಇವುಗಳು ಪುನ್ನಪ್ರ- ವಯಲಾರ್ ಹುತಾತ್ಮರ ಪರವಾಗಿ ಮಹಾಕವಿಗಳ ಭವಿಷ್ಯವಾಣಿಯನ್ನು ನಿಜವಾಗಿಸಿದ ಸಂದರ್ಭಗಳು, 1948 - 51ರ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಹಿಂದೆ ಬಿಳಿಯ ತೊಗಲಿನ ಬ್ರಿಟಿಷರ ವಿರುದ್ಧ ಭೂಗತ ಚಳುವಳಿಯ ಕೇಂದ್ರವಾಗಿದ್ದ ಅಲ್ವೇಸ್ ಪ್ರದೇಶ ಈಗ ಅಧಿಕಾರಸ್ಥರಾದ ಬಳಿ ಟೋಪಿಯವರ ವಿರುದ್ಧ ಭೂಗತ ಚಳುವಳಿಯ ಕೇಂದ್ರವಾಯಿತು.

ಕರ್ನಾಟಕದ ಸಂಬಂಧ

ನಾವು ಬಾಲಾನಂದನ್‌ರವರ ಕರ್ನಾಟಕದ ಜೊತೆಗಿನ ಸಂಪರ್ಕಗಳನ್ನು ಮರೆಯುವುದು ಸಾಧ್ಯವಿಲ್ಲ. ಬಾಲಾನಂದನ್‌ರ ವಿರುದ್ಧ [illegible]ನ್ನು ಬಿಟ್ಟು ವಾರೆಂಟ್ ಇದ್ದುದರಿಂದ ಅವರು [illegible]ದ ಕೇಂದ್ರದಲ್ಲಿ ಕರ್ನಾಟಕದ ಮೈಸೂರು[illegible] ಉಳಿದರು. ನಂತ[illegible] ಅವರನ್ನು ಶಿವಮೊಗ್ಗಕ್ಕೆ ಕಳಿಸಲಾ[illegible]. ಅವರು ಅಲ್ಲಿ ಕಾಂ[illegible]ಂದ್ರಕುಟ್ಟಿನಾಯರ್ ಅವರ



ಕಾಂ. ಸೂರಿಯವರ ಕುಟುಂಬದೊಂದಿಗೆ ಇ.ಬಾಲಾನಂದನ್

ಮಾರ್ಗದರ್ಶನದಲ್ಲಿ ಕೆಲಸ ಮಾಡಿದರು. ಚಂದ್ರಕುಟ್ಟಿಯವರು ಬಾಲಾನಂದನ್‌ರವನ್ನು ನಂತರ ಹೆಚ್.ಎ.ಎಲ್. ಗೆ ಕಳುಹಿಸಿದರು. ಹೆಚ್.ಎ.ಎಲ್.ನಲ್ಲಿ ಕುಂಜುಪಿಳ್ಳೆ ಯವರೊಂದಿಗಿನ ಅವರ ಒಡನಾಟದಿಂದಾಗಿ ಬಾಲಾನಂದನ್‌ರವರು ನಂತರ ಕುಂಜುಪಿಳ್ಳೆ ಯವರ ಸಹೋದರಿ ಸರೋಜಿನಿಯವರನ್ನು ಮದುವೆಯಾದರು. ಮೈಸೂರು ಪೋಲಿಸರಿಂದ ಬಾಲಾನಂದನ್ ಬಂಧಿಸ ಲ್ಪಟ್ಟರು. ಅವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರಿಸಲಾಯಿತು. ನಂತರ ಜೈಲಿನ ಅಧಿಕಾರಿಗಳು ಅವರನ್ನು ಅಲ್ವೇಸ್ ಜೈಲಿಗೆ ಸ್ಥಳಾಂತರಿಸಿದರು. ನಂತರ ಅವರು ತಮ್ಮ ಹೆಚ್ಚು ಒಡನಾಟದ ಮತ್ತೊಂದು ಕೇಂದ್ರವಾದ ಕಲಮಸೇರಿಯಲ್ಲಿ ಕುಟುಂಬವನ್ನು ನೆಲೆಗೊಳಿಸಿದರು ಮತ್ತು ಇಲ್ಲಿಂದಲೇ ಅವರು ಇಡೀ ದೇಶದಾದ್ಯಂತ ಸಂಚರಿಸಿ ಕೆಲಸ ಮಾಡಿದರು. ಅವರ ಮೃತ ದೇಹವನ್ನು ಸಿಪಿಐ(ಎಂ) ಪಕ್ಷದ ಕಲಮ[illegible] ಪ್ರದೇಶ ಸಮಿತಿಯ ಕಛೇರಿಯಲ್ಲಿ [illegible] ಉಚಿತವೇ ಆಗಿತ್ತು. [illegible] ತಮ್ಮ ಕ್ರಿಯಾಶೀಲ ಬಾಲಾನಂದನ್[illegible]ವಾಗಿ ಮಾರ್ಗದರ್ಶನ ಬದುಕಿನುದ್ದ[illegible]ಬ್ಬ ಮುಖಂಡರು ಹಲವಾರು ಮ್ಯಾ[illegible]ಕ ಸಂಘಗಳಿಗೆ ನಾಯಕರಾಗುವುದನ್ನು ಅವರು ವಿರೋಧಿಸುತ್ತಿದ್ದರು. ಹಾಗೂ ಅವರು ಕಾರ್ಮಿಕ ನಾಯಕರು ಕಾರ್ಯಕರ್ತ ಸಮೂಹದೊಂದಿಗೆ ನಿರಂತರ, ಆತ್ಮೀಯ ಸಂಬಂಧ ಬೆಳೆಸಿಕೊಳ್ಳಲು ಒತ್ತಾಯಿಸುತ್ತಿದ್ದರು. ಹಲವಾರು ಸಂಘಗಳಿಗೆ ನಾಯಕತ್ವ ಕೊಡಬೇಕಾದ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗುವುದಿಲ್ಲ ಎಂದು ಅವರು ಹೇಳುತ್ತಿದ್ದುದು ಸರಿಯಾದ ಮಾತಾಗಿತ್ತು.

ತಿರುವಂತನಪುರಂ ಕೇಂದ್ರವಾಗಿದ್ದ ಕೇರಳ ರಾಜ್ಯ ಎಲೆಕ್ಟ್ರಿಸಿಟಿ ನೌಕರರ ಸಂಘವು ಅವರ ಒಂದು ಮಾದರಿ ಕಾರ್ಮಿಕ ಸಂಘವಾಗಿತ್ತು. ಅವರು ಕರ್ನಾಟಕದಲ್ಲಿ ಎಸ್.ಸೂರ್ಯ ನಾರಾಯಣರಾವ್, ವಿ.ಜೆ.ಕೆ.ನಾಯರ್ ರವರು ಇಪ್ಪತ್ತಕ್ಕೂ ಹೆಚ್ಚು ಕಾರ್ಮಿಕ ಸಂಘಗಳ ನಾಯಕರಾಗುವುದರ ಕಟು ವಿಮರ್ಶಕರಾಗಿದ್ದರು. ಅವರು ನಾವು ಸರಿಯಾದ ಧೋರಣೆಯನ್ನು ಅನುಸರಿಸಲು ಒತ್ತಾಯಿಸಿದರು. ಆದರೆ ನಾವು ಕರ್ನಾಟಕದಲ್ಲಿ, ಬಾಲಾನಂದನ್‌ರವರಂತಹ ರಾಜಕೀಯ ವಾಗಿ ಪ್ರಜ್ಞಾವಂತರಾದ ಮತ್ತು ಯಶಸ್ವಿ ಮುಖಂಡರಿಂದ ಕಲಿಯಲಿಲ್ಲ. ಈಗಲೂ ಅದೇ ಹಳೆಯ ಮಾದರಿಯನ್ನೇ ಅನುಸರಿಸುತ್ತಿದ್ದೇವೆ. ಬಾಲಾನಂದನ್‌ರವರು ಯಾವಾಗಲೂ ಕೂಡ ಪ್ರತಿ ಕಾರ್ಖಾನೆಯಲ್ಲಿಯೂ ಪಕ್ಷದ ತೀರ್ಮಾನವನ್ನು ಜಾರಿಗೊಳಿಸಲು ನಾವು ವಹಿಸಿದ ಕ್ರಮವೇನೆಂದು ತಿಳಿಸಲು ಒತ್ತಾಯಿಸುತ್ತಿದ್ದರು. ಇಂತಹ ಕಾರಣಕ್ಕಾಗಿ ಹಾಗೂ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಯುಗದಲ್ಲಿನ ಅವರ ಮಾರ್ಗದರ್ಶನದ ಕಾರಣಕ್ಕಾಗಿಯೇ ಅವರನ್ನು ನಾವು 'ಟಾಸ್ಕ್ ಮಾಸ್ಟರ್' ಎಂದು ಕರೆಯುತ್ತಿದ್ದೆವು.

ಅವರು ನಮಗೆ ಅತ್ಯಂತ ಪರಿಶ್ರಮದಿಂದ ಕಲಿಸಿದ ಸರಳ, ಆದರೆ ದೃಢವಾದ ಕಾರ್ಮಿಕ ವರ್ಗದ ಧೋರಣೆಯನ್ನು ನಾವು ಅನುಸರಿಸುವವರೆಗೆ ಕಾಮ್ರೇಡ್ ಬಾಲಾನಂದನ್ ನಮ್ಮ ನಡುವೆ ಜೀವಂತವಾಗಿರುತ್ತಾರೆ.

JANASHAKTHI KANNADA VARA PATRIKE FEB. 01, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/200



'ಸ್ಲಂ ಡಾಗ್' : ವ್ಯವಸ್ಥೆಯ ಭೀಕರತೆಯ ಅನಾವರಣ

■ ಕೆ.ಎಸ್.ವಿಮಲ

ಪರಮ ಪವಿತ್ರ ಸನಾತನ ಪರಂಪರೆ ಇತಿಹಾಸ ಹೊಂದಿರುವ ಈ ಮಹಾನ್ ದೇಶದಲ್ಲಿ ಬಡವರಿಗೆ ಅದರಲ್ಲೂ ಸ್ಲಂ ನಲ್ಲಿ ಹುಟ್ಟಿ ಬೆಳೆದ ವ್ಯಕ್ತಿಗಳಿಗೆ ಬುದ್ಧಿವಂತರಾಗಲು ಹಕ್ಕಿಲ್ಲ. ಸಹಜ ಬುದ್ಧಿಯನ್ನು, ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ಹಣಗಳಿಸುವ ಅಧಿಕಾರವಂತೂ ಖಂಡಿತ ಇಲ್ಲ. ಇದು ನಾನು ಬಾಗಿ... ಮಾತಲ್ಲ, ಆಸ್ಕರ್ ಪ್ರಶಸ್ತಿಯ ... ತ್ತಿರುವ, ಈಗಾಗಲೇ ಗ್ಲೋಬಲ್ ಅ... 3 ಪ್ರಶಸ್ತಿಗಳನ್ನು ಮುಡಿಗೇರಿಸಿ ಕೊಂಡಿರು... ಡಾಗ್ ಮಿಲೆನಿಯರ್' ಚಿತ್ರ ಹೇಳುವ ಮಾ...ಳು.

ಪ್ರಶಸ್ತಿ ಏನು ಬಂತೋ, ಮುಂದೆ ಬರುವುದೋ ಆ ಮಾತು ಬೇರೆ. ಆದರೆ ಸಿನಿಮಾ ರಿಲೀಸ್ ಆಗುವ ಮುನ್ನವೇ ಭಾರತಕ್ಕೆ ಅವಮಾನ ಮಾಡುವ, ಭಾರತದ ಬಡತನವನ್ನು ವಿದೇಶಗಳಲ್ಲಿ ಮೆರವಣಿಗೆ ಮಾಡುವ ಚಿತ್ರವಿದೆಂದು ಪುಕಾರಂತೂ ಎದ್ದಿದೆ. ಸ್ಲಂ ಡಾಗ್.... ಹೇಳುವ ಕಥೆ, ಭಾರತದ ಬಹಳಷ್ಟು ನಗರಗಳಲ್ಲಿ ಪ್ರತಿ ನಿತ್ಯ ನಡೆಯುವ ಘಟನೆಗಳೇ. ಕೌನ್ ಬನೇಗಾ ಕರೋಡ್‌ಪತಿ ಮಾದರಿಯಲ್ಲಿ ಸ್ಲಂನಲ್ಲಿ ಬದುಕುವ ಜನರ ಬದುಕಿನ ಒಂದೊಂದು ದಿನ, ಒಂದೊಂದು ಘಟನೆಯನ್ನು ಬಿಚ್ಚಿಡುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ.



ಅನಿಲ್‌ಕಪೂರ್ ಕೇಳುವ ಒಂದೊಂದು ಪ್ರಶ್ನೆಗೂ ಕಥಾನಾಯಕ ಜಮಾಲ್‌ನ ಬದುಕಿನಲ್ಲಿ ನಡೆದ ಒಂದೊಂದು ಘಟನೆಗಳೇ ಉತ್ತರ ಕೊಡುತ್ತವೆ. ಪ್ರತಿ ಪ್ರಶ್ನೆಗೊಂದು ಫ್ಲಾಷ್ ಬ್ಯಾಕ್ ಕೊಡುತ್ತಾ ಈ ನೆಲದಲ್ಲಿ ಮಕ್ಕಳು, ಈ ದಂಧೆ ನಡೆಸುವವರ ಕೈಗೆ ಸಿಕ್ಕಿ ಕುರುಡರು, ಕುಂಟರು ಆಗಿ ಬಿಡುವ ಹೃದಯ ವಿದ್ರಾವಕ ಅಂಶಗಳನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಮಕ್ಕಳಿಂದ ಭಿಕ್ಷೆ ಬೇಡಿಸಿ ಶ್ರೀಮಂತ ಬದುಕು ನಡೆಸುವ ಜನ ಮಕ್ಕಳಿಗೆ ಕಲಿಸುವುದು ಸೂರದಾಸರ -ದರುಶನ ದೇ ಭಗವಾನ್-ಗೀತೆ. ಆ ಗೀತೆಯನ್ನು ಸುಶ್ರಾವ್ಯವಾಗಿ ಹಾಡಲು ಕಲಿತ ಮಕ್ಕಳಿಗೆ ಪ್ರಜ್ಞೆ ತಪ್ಪಿಸಿ ಅವರ ಕಣ್ಣು ಕಿತ್ತು ಭಿಕ್ಷಾಟನೆಗೆ ಅರ್ಹರಾಗಿಸುವ ದೃಶ್ಯಗಳು ಕರುಳು ಮಿಡಿಯುತ್ತವೆ, ಹೆಣ್ಣು ಮಕ್ಕಳಂತೂ ಇಂದು ಜಲ್ವಂತವಾದ ಹಲವು ಸಮಸ್ಯೆಗಳತ್ತ ಕ್ಯಾಮೆರಾ ಕಣ್ಣು ಹಾಯಿಸುತ್ತದೆ. ಮುಂಬೈ ಮಹಾನಗರಿಯ ಸ್ಲಂಜನರ ಬದುಕಿನೊಂದಿಗೆ ಈ ಸಮಸ್ಯೆಗಳನ್ನು ಹೆಣೆದ ರೀತಿ ಮನೋಜ್ಞವಾಗಿದೆ. ಇಡೀ ದೇಶ ಇಂದು ತತ್ತರಿಸುತ್ತಿರುವ ಭಯೋತ್ಪಾದನೆಯ ಮೂಲ ಬೇರಾದ ಕೋಮುವಾದ ಕೂಡ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿದೆ. ಮುಂಬೈಯಲ್ಲಿ ನಡೆದ ಕೋಮುಗಲಭೆ, ಜಾತಿ, ಧರ್ಮಗಳ ಬೇಧವೇ ಇಲ್ಲದೇ ತಿಪ್ಪೆಗುಂಡಿಯಲ್ಲಿ ಅನ್ಯೋನ್ಯ ಬದುಕು ಸಾಗಿಸುತ್ತಿದ್ದ ಜನ, ರಾಮನ ಹೆಸರಿನಲ್ಲಿ ಬಂದ ದೊಣ್ಣೆ ಸರದಾರರು ಹುಡುಕಿ ಹುಡುಕಿ ಬಡಿಯುವುದು ಮುಸ್ಲಿಂ ಸಮುದಾಯದ ಜನರನ್ನು. ಕಣ್ಣೆದುರೇ ತಾಯಿ ಬಡಿಗೆಯ ಬಡಿತಕ್ಕೆ ಬಲಿಯಾಗುತ್ತಾಳೆ. ಮಕ್ಕಳಿಗೆ ಓಡಿ, ತಪ್ಪಿಸಿಕೊಳ್ಳಿ ಎಂದು ಕೂಗುತ್ತಲೆ ಕುಸಿದ ತಾಯಿ, ಭಯಭೀತರಾಗಿ ಓಡುವಾಗ ಎದುರಿಗೆ ಭಯ ವಿಹ್ವಲಳಾಗಿ ನಿಂತ ಪುಟ್ಟ ಹುಡುಗಿ. ಅವಳನ್ನು ರಕ್ಷಿಸುವಾಗ ಅವಳಾವ ಜಾತಿ ಎಂದು ಕೇಳುವುದಿಲ್ಲ ಈ ಪುಟ್ಟ ಬಾಲಕರು. ಹಾಟ್‌ಸೀಟ್‌ನಲ್ಲಿ ರಾಮನ ಕುರಿತ ಪ್ರಶ್ನೆಗೆ ಜಮಾಲ್‌ಗೆ ಉತ್ತರ ಈ ...ಯ ನೆನಪಿನ ಮೂಲಕ ಸಿಗುತ್ತದೆ.

ಭಿಕ್ಷಾಟನ... ದಂಧೆಯತ್ತ ಕೂಡ ಈ ಚಿತ್ರ ಬೆಳಕು ಚೆಲ್ಲುತ್ತದೆ... ಗಳಲ್ಲಿ ಕ್ರಿಕೆಟ್ ಆಡಿಕೊಂಡು, ಅಟ್ಟಿಸಿಕೊ... ಬರುವ ಪೋಲೀಸರಿಂದ ತಪ್ಪಿಸಿಕೊಳ್ಳಲು ...ಾಲೋಟ ಓಡುವ, ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸು... ವೇಶ್ಯಾವಾಟಿಕೆಗೆ ತಳ್ಳಲ್ಪಟ್ಟು ಬಂಗಾರದ ಮೊಟ್ಟೆ ಇಡುವ ಕೋಳಿಗಳಾಗಿ ಬಳಸಲ್ಪಡುತ್ತಾರೆ.

ಕೌನ್ ಬನೇಗಾ ಮಿಲೇನಿಯರ್‌ನ ಪ್ರತಿ ಪ್ರಶ್ನೆ ಜಮಾಲ್‌ನ ಬದುಕಿನಲ್ಲಿ ಒಮ್ಮೆಯಲ್ಲ ಒಮ್ಮೆ ಅನುಭವಕ್ಕೆ ಬಂದಿದ್ದು, ತಾಜ್‌ಮಹಲ್ ಮುಂದೆ ಯಾರದ್ದೋ ಬೂಟು ಕದ್ದು ಸ್ಟೈಲಾಗಿ ನಿಂತ ಜಮಾಲ್‌ನನ್ನು ಗೈಡ್ ಎಂದು ಭಾವಿಸಿ ಹಣ ಕೊಟ್ಟು ಕರೆದುಕೊಂಡು ಹೋಗುವ ವಿದೇಶಿ ಪ್ರವಾಸಿಗರಿಗೆ ತಡಬಡಾಯಿಸದೇ ಏನೂ ಗೊತ್ತಿಲ್ಲದಿದ್ದರೂ ಬಾಯಿಗೆ ಬಂದಿದ್ದೆಲ್ಲಾ ಹೇಳಿ ಬಿಡುವ ಹುಡುಗನ ಮೂಲಕ ಈ ವ್ಯವಸ್ಥೆಯ ಒಳಗೆ ಇರುವ ಬಡಾಯಿತನವನ್ನೂ ತೆರೆದಿಟ್ಟಿದ್ದಾರೆ. ಈ ಸಿನಿಮಾದ ಬಗ್ಗೆ ಟೀಕೆ ಮಾಡುತ್ತಿರುವವರು ಎತ್ತಿದ ಪ್ರಶ್ನೆಗಳಲ್ಲಿ ಇದೂ ಒಂದು.



ಇಡೀ ಸ್ಲಂನ ಜೀವನ, ನಗರಗಳು ಬೆಳೆದಂತೆ ಈ ದುಡಿದು ಬದುಕುವ ಜನರ ಬದುಕಿನ ತಾಣಗಳು ಕಣ್ಮರೆಯಾಗಿ ಆಧುನಿಕ ಗಗನಚುಂಬಿ ಕಟ್ಟಡಗಳು, ವಾಣಿಜ್ಯ ಸಮುಚ್ಚಯಗಳು ಇವನ್ನೆಲ್ಲಾ ತೋರಿಸುತ್ತಲೇ ಮುಂಬೈನಂತಹ ಮಹಾನಗರಗಳಲ್ಲಿ ಅಂಡರ್ ಗ್ರೌಂಡ್ ಡಾನ್‌ಗಳ ನಿಯಂತ್ರಣದಲ್ಲಿ ಇದು ಇರುವುದನ್ನು ಚಿತ್ರ ತೆರೆದಿಡುತ್ತದೆ.

ಇವನ್ನೆಲ್ಲಾ ತೋರಿಸುವ ಚಿತ್ರದ ನಾಯಕನ ಬದುಕು ಅವನಿಗೆ ಕೊಟ್ಟ ಜಾಣತನಕ್ಕೆ ಅವನಿಗೆ ಸಿಗು... ಪ್ರತಿಫಲ 2 ಕೋಟಿ ಗಳಿಸಿ ಹೊರಬಂದ... ಕ್ಷಣ ಅವನು ಹಾಟ್ ಸೀಟ್‌ನಲ್ಲಿ ಕುಳಿತು ...ೋಸ ಮಾಡಿದ್ದಾನೆ ಎನ್ನುವ ಪೋಲೀಸರ ಆತಿಥ್ಯ ...ಾಣೆಯಲ್ಲಿ ಚಿತ್ರ ಹಿಂಸೆ. ಕೊನೆಗೂ ಪೋಲೀಸ್ ಇನ್ಸ್‌ಪೆಕ್ಟರ್ ಅವನ ಧೈರ್ಯ, ಗಟ್ಟಿತನ, ಸತ್ಯಸಂಧತೆಗೆ ಮ... ಅವನನ್ನು ಕೊನೆಯ ಪ್ರಶ್ನೆ ಎದುರಿಸಲು ಮೂರನೇ ದಿನ ಕಳಿಸಿ ಕೊಡಲೇಬೇಕಾದ ಸ್ಥಿ... 3ನೇ ಹೆಲ್ಪ್‌ಲೈನ್ ಬಳಸುವ ಮೂಲಕ ಮಾತನಾಡಿದ್ದು, ಜೀವನ ಗೆಳತಿ ಲತಿಕಾ ಜೊತೆ. ಅಣ್ಣನೇ ಅವಳನ್ನು ತನ್ನಿಂದ ಕಿತ್ತುಕೊಂಡು, ಕೊನೆಗೆ ಕಳ್ಳದಂಧೆಯ ಯಜಮಾನನಿಗೆ ಮಾರಾಟ ಮಾಡಲ್ಪಟ್ಟಾಕೆ. ಲತಿಕಾ, ಅಂದು ರಕ್ಷಿಸಿದ ಪುಟ್ಟ ಹುಡುಗಿ ಬದುಕಿನ ಹಲವು ದುರಂತದ ಮೆಟ್ಟಿಲುಗಳನ್ನು ದಾಟಿ ಬಂದಾಕೆ, ಅದೇ ಅಣ್ಣ ತನ್ನ ಪ್ರಾಣವ... ಬಲಿಕೊಟ್ಟು, ಹೋಗೆಂದು ಕಳಿಸಿದಾಕೆ ಲೈನ್‌ನಲ್ಲಿ ಉತ್ತರಿಸಿದಾಗ 2 ಕೋಟಿ ಸಿಕ್ಕಿದ್ದಕ್ಕಿಂತ ಹೆಚ್ಚು ಸಂತೋಷಪಡುತ್ತಾನೆ.

ಒಟ್ಟಿನಲ್ಲಿ ಮಹಾನಗರಗಳಲ್ಲಿನ ವಾಸ್ತವ ಬದುಕನ್ನು ತೆರೆದಿಟ್ಟ ಚಿತ್ರವಿದು. ಆದರೂ ಎಲ್ಲೋ ಒಮ್ಮೆ ಅನಿಸುತ್ತದೆ. ಅಮಿತಾಬ್ ಬಚ್ಚನ್‌ನ ಷೂಟಿಂಗ್ ನೋಡಲು, ಹಸ್ತಾಕ್ಷರ ಹಾಕಿಸಿಕೊಳ್ಳಲು ಕಕ್ಕಸ್ಸು ಗುಂಡಿಯೊಳಗೆ ಹಾ... ಬಂದು ಬಿಡುವಷ್ಟು ನಮ್ಮ ಸ್ಲಂ ಜನ ಇರುತ್ತಾರೆಂದು ಚಿತ್ರಿಸುವ ಅಗತ್ಯವಿರಲಿಲ್ಲ.

ಕವಿತೆ

ಅವರು - ಇವರು

ಅವರು ಹೇಳುತ್ತಾರೆ
ಹಗ್ಗವಿಲ್ಲದ ತೊಟ್ಟಿಲು ಕಟ್ಟಲು
ಹಾಲಿಲ್ಲದ ಎದೆ ಚೀಪಲು
ಗುರಿ ಇಲ್ಲದ ಗವಿ ಸೇರಲು
ಗೊಬ್ಬರ ಮುಖಿಕ್ಕೆ ಮೆತ್ತಿಕೊಳ್ಳಲು
ಕಬ್ಬಿಣ, ತಾಮ್ರ, ತಗಡಿನ ತಮಟೆ ಬಾರಿಸಲು
ಕಲ್ಲಿಗೆ ಊಟ ಬಡಿಸಲು
ಮರುಳನಂತೆ ಮಂತ್ರ ಓದಲು

ಇವರು ಪಾಲಿಸುತ್ತಾರೆ
ಭ್ರೂಣದಲ್ಲಿಯೇ ಅವರ ಗೋತ್ರ
ಜೋಗುಳದಲಿ ಅವರ ಮಂತ್ರ-ತಂತ್ರ
ಬಿಕ್ಕಳಿಸಿದರೂ ಬಿಡದ, ಜಡದ ಸೂತ್ರ
ಹಾಲಿಲ್ಲದ ಹಸುಗೂಸು ಧರ್ಮ ಉಪಾಸಕ
ಕಣ್ಣೀರಿಲ್ಲದ ಕಣ್ಣಂಚಲಿ ಕರಿನೀರಿನ ವಾಸನೆ
ಕಿವಿಗೆ ಸೆರಮನೆಯ ಘೋಷಣೆ
ಹಸಿದ ಕಂದಮ್ಮಗೆ ಹಾವಿನ ಹಾಸಿಗೆ

ಅವರು ಮುಂದೆ ಮುಂದೆ
ಇವರು ಹಿಂದೆ ಹಿಂದೆ
ಅವರದು ಕಥೆ
ಇವರದು ವ್ಯಥೆ

■ ಗವಿಸಿದ್ಧ ಬಿ. ಹೊಸಮನಿ

JANASHAKTHI KANNADA VARA PATRIKE: Printed by G.N.NAGARAJ, No 12 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH